
ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 28
ಜುಲೈ 13, 2003 ಬೆಲೆ ರೂ. 3.00





ಕಾಮ್ರೇಡ್ ಸೂರಿ ನೆನಪು

ಭಾರತೀಯ ಸೇನೆ ಇರಾಕ್ ಜನರನ್ನು ದಮನಿಸಬೇಕೆ ?


‘ಪ್ಲೇವಿನ್’ ಕೃಷ್ಣರಿಗೆ ಬಿಸಿಯೂಟ ಮಕ್ಕಳಿಗೆ ವಿಷದೂಟ !





ಗುರಾತ್ ಹತ್ಯಾಕಾಂಡ : ಬೆಸ್ಟ್ ಬೇಕರಿ - ಎಲ್ಲಿದೆ ನ್ಯಾಯ ?

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

34

ಹಿಂದಿನ ಸಂಚಿಕೆಯಲ್ಲಿ ಶತ್ರುಗಳ ಕೈಯಲ್ಲಿ ನಾಯಿಯಂತೆ ಸಾಯಲು ಬಯಸದ ಮೇ. ಜಯಪಾಲ್ ಸಿಂಗ್; ಕೋಲ್ಕತ್ತಾದ ಬೀದಿಗಳಲ್ಲಿ ದೊಂಬಿ, ಗಲಭೆ ಮುಂದುವರೆಯುತ್ತಲೇ ಇದ್ದದ್ದು; ಸೇನೆ ತೊರೆದರು ಸಮವಸ್ತ್ರ ತ್ಯಜಿಸದ ಜಯಪಾಲ್ ಸಿಂಗ್; ಕೊಲ್ಕತಾ ಗಲಭೆಯಲ್ಲಿ ಮುಸ್ಲಿಂರಿಂದ ಜಯಪಾಲರ ಹತ್ಯೆ ಎಂದು ಬ್ರಿಟಿಷರಿಂದ ಅಪಪ್ರಚಾರ; ಅದಕ್ಕೆ 'ನಾನು ಜೀವಂತವಾಗಿದ್ದೇನೆ, ಕ್ರಿಯಾಶೀಲವಾಗಿದ್ದೇನೆ. ನೀವು ದೇಶ ಬಿಟ್ಟು ಹೋಗುವವರೆಗೂ ನಾನು ಹೋರಾಡುತ್ತಲೇ ಇರುತ್ತೇನೆ ಎಂದು ಜಯಪಾಲರಿಂದ ಘೋಷಣೆ; ಮತ್ತು ಶ್ರೀಮತಿ ಡೇಯಿಂದ ಜಯಪಾಲರ ಬಂಧನಕ್ಕೆ ಸಂಚು ಈ ಬಗ್ಗೆ ಓದಿರುವಿರಿ.. ಮುಂದೆ..



ಕನ್ನಡಕ್ಕೆ: ವಿಶ್ವ ಕುಂದಾಪುರ

ಸಮಾಜವಾದಿ ನಾಯಕರ ಪರಿಚಯ

ಕೋಲ್ಕತ್ತಾದಿಂದ ಮುಂಬಯಿಗೆ ಮರಳಿದ ನಾನು ಕರಂಜಿಯಾರನ್ನು ಭೇಟಿಯಾದೆ. ವಾಯುಪಡೆಯ ಒಬ್ಬ ಫ್ಲೆಯಿಂಗ್ ಆಫೀಸರ್ ಕೂಡ ಅವರು ಜತೆಗಿದ್ದರು. ಅವರ ಭೇಟಿಯ ಯೋಚನೆ ಆಕಸ್ಮಿಕವೇನೂ ಅಲ್ಲ. 'ಬ್ಲಿಟ್ಜ್' (BLITG) ಮಾಧ್ಯಮದ ಮೂಲಕ ನಾವು ಕರಾಂಜಿಯಾರತ್ತ ಸೆಳೆತಕ್ಕೆ ಒಳಗಾಗಿದ್ದೆವು.

1944 ರಲ್ಲಿ ಅನಾರೋಗ್ಯಪೀಡಿತನಾಗಿ ಪೂನಾ ಮಿಲಿಟರಿ ಆಸ್ಪತ್ರೆಯ ಹಾಸಿಗೆಯಲ್ಲಿ ನಾನು ಕೊನೆಯ ದಿನಗಳನ್ನು ಎಣಿಸುತ್ತಾ ಮಲಗಿದ್ದಾಗ ಈ 'ಉಗ್ರ' ಪತ್ರಿಕೆ ನನಗೆ ಪರಿಚಯವಾಯಿತು. ಯುದ್ಧೋತ್ತರ ದಿನಗಳ ರಾಜಕೀಯ ಪರಿಸ್ಥಿತಿ ಕುರಿತು 'ಬ್ಲಿಟ್ಜ್' ಪತ್ರಿಕೆ ಹೊಂದಿದ್ದ ಅಭಿಪ್ರಾಯಗಳು ನಮ್ಮ ನಿಲುವಿಗೆ ಅನುಗುಣವಾಗಿದ್ದವು.

ಆಕರ್ಷಣೆಯ ಕೇಂದ್ರಬಿಂದು

ಎಲ್ಲಕ್ಕಿಂತ ಹೆಚ್ಚಾಗಿ ಕರಾಂಜಿಯಾ ಅವರ ಅನುಪಮ ದೇಶಪ್ರೇಮ, ರಾಜಿಯಿಲ್ಲದ ಸಾಮ್ರಾಜ್ಯಶಾಹಿ ವಿರೋಧಿ ಧೋರಣೆ, ನಮ್ಮ ಸಮಾಜದ ಕೊಳೆತುನಾರುವ ವ್ಯವಸ್ಥೆ-ಭ್ರಷ್ಟಾಚಾರದ ಬಗ್ಗೆ ಯಾವುದೇ ಭೀತಿಯಿಲ್ಲದೆ ಬರೆಯುವ ದಿಟ್ಟತನ ನಮ್ಮನ್ನು ಅವರತ್ತ ಆಕರ್ಷಿಸಿತು.

ಆ ದಿನಗಳಲ್ಲಿ 'ಬ್ಲಿಟ್ಜ್' ಪತ್ರಿಕೆ ದೇಶದ ಏಕೈಕ ದೇಶಪ್ರೇಮಿ ವೇದಿಕೆಯಾಗಿತ್ತು. ಸಹಜವಾಗಿಯೇ ಭಾರತದ ಯುವಜನರು ಕಷ್ಟಕಾಲದಲ್ಲಿ ನೆರವು-ಮಾರ್ಗದರ್ಶನಕ್ಕಾಗಿ ಈ ಪತ್ರಿಕೆಯತ್ತ ನೋಡುತ್ತಿದ್ದರು.

ಆಲ್‌ಕೋರ್ಟ್ ಫ್ಲಾಟ್‌ನಲ್ಲಿ ನಾನು ಕರಂಜಿಯಾರನ್ನು ಭೇಟಿಯಾದೆ. ಖಾಕಿಧಾರಿ ದ್ವಾರಪಾಲಕ ನನ್ನನ್ನು ಕರಂಜಿಯಾದ ಕಛೇರಿಗೆ ಕರೆದೊಯ್ದು, ಅದವರ ಕಛೇರಿಯೋ ಅಧ್ಯಯನ ಕೊಠಡಿಯೋ ತಿಳಿಯಲಿಲ್ಲ. ಅಲ್ಲಿ ಕರಂಜಿಯಾ ಕುಳಿತಿದ್ದರು. ನೀಲಿ ಹಾಗೂ ಕೆಂಪು ಪೆನ್ಸಿಲ್‌ನಿಂದ ಲೇಖನಗಳನ್ನು ಗುರುತು ಹಾಕಿಕೊಳ್ಳುವಲ್ಲಿ ಅವರು ಮಗ್ನರಾಗಿದ್ದರು.

ನಾನು ನನ್ನನ್ನು ಪರಿಚಯಿಸಿಕೊಂಡೆ. ಇಬ್ಬರೂ ಪರಸ್ಪರ ಕೈಕುಲುಕಿದೆವು. ನನ್ನ ಕಾರ್ಯಭಾರಕ್ಕೆ ಸಂಬಂಧಿಸಿದ ಲಿಖಿತ ದಾಖಲೆಪತ್ರವನ್ನು ಅವರಿಗೆ ಒಪ್ಪಿಸಿದೆ. ನನಗೆ ಅನುಕೂಲವೆಂದು ಕಂಡಿದ್ದರಿಂದ ಕತೆಯನ್ನು ಸವಿವರವಾಗಿ ಬರೆದಿದ್ದೆ. ಇದರಿಂದಾಗಿ ಹೆಚ್ಚು ಮಾತು ಬೇಕಾಗಲಿಲ್ಲ. ಅವರದನ್ನು ಕೂಲಂಕಶವಾಗಿ ಓದಿದರು. ಅವರ ಪ್ರತಿಕ್ರಿಯೆ ಏನಿರಬಹುದು ಎಂದು ಕುತೂಹಲದಿಂದ ಕಾಯುತ್ತಾ ಸಿಗರೇಟ್ ಸೇದುತ್ತಾ ನಾನು ಕುಳಿತಿದ್ದೆ. ಅವರು ಅದನ್ನು ಒಪ್ಪಿಕೊಂಡಾರೇ ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿತ್ತು.

ಜಾಗರೂಕ, ತುಂಬಾ ಬುದ್ಧಿವಂತರಾಗಿದ್ದ ಕರಂಜಿಯಾ ತಕ್ಷಣವೇ ತಾವಾಗಿಯೇ ಸಾಧ್ಯವಾದ ಎಲ್ಲ ನೆರವನ್ನು ನೀಡಲು ಮುಂದಾದರು. "ಕರಂಜಿಯಾ ಅವರೇ, ನಮ್ಮ ಹೆಜ್ಜೆ ಕತ್ತಲೆಯಲ್ಲಿ ಹಾರಿದಂತೆ ಇದೆ. ನಾವೆಷ್ಟು ಸಫಲರಾಗುತ್ತೇವೆ ಎಂದು ತಿಳಿಸಿರಿ. ನಾನು ಸೇನೆ ತೊರೆದ ಈ ಕತೆಯನ್ನು ನಾವು ಪ್ರಕಟಿಸೋಣವೇ?"- ನಾನವರನ್ನು ಕೇಳಿದೆ.

"ಇಲ್ಲ ಇಲ್ಲ, ಇದನ್ನು ಪ್ರಕಟಿಸಬಾರದು" - ಕರಂಜಿಯಾ ಸಲಹೆ ಮಾಡಿದರು. ಆಗ ನಾನು ಏನಿದ್ದರೂ ಈ ದಾಖಲೆಪತ್ರವನ್ನು ಸಂರಕ್ಷಿಸಿಡಬೇಕು. ಬ್ರಿಟೀಷರು ನಮ್ಮ ವಿರುದ್ಧ ಅಪಪ್ರಚಾರ ಮಾಡುತ್ತಾರೆಂದು ನಿಮಗೆ ಗೊತ್ತು. ನಮ್ಮ ಪ್ರಾಮಾಣಿಕ ಉದ್ದೇಶಗಳಿಗೆ ನೀವು ಸಾಕ್ಷಿಯಾಗಿರುತ್ತೀರಿ" - ಎಂದು ಹೇಳಿದೆ.

ಸಮಾಜವಾದಿ ಪಕ್ಷದ ಕಚೇರಿ ಕಾರ್ಯದರ್ಶಿ ಸುರೇಶ ದೇಸಾಯಿ ಅವರಿಗೆ ಪತ್ರವೊಂದನ್ನು ಬರೆಯುತ್ತಾ, "ಅಚ್ಯುತ್, ಜಯಪ್ರಕಾಶರನ್ನು ಭೇಟಿಯಾಗಿ, ಮೀರತ್ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿ ಅಲ್ಲಿ ಇತರರನ್ನು ಕಾಣಿ" ಎಂದು ಕರಂಜಿಯಾ ನನಗೆ ಸಲಹೆ ಮಾಡಿದರು.

ಬೋರಿಬಂದರ್‌ನಲ್ಲಿ ನಾನುಳಿದಿದ್ದ ಹೋಟೆಲ್‌ಗೆ ಸುರೇಶ್ ಬಂದರು. ಸೈಕ್ಲೋಸ್ಟೈಲ್ ಮಾಡಲಿಕ್ಕಾಗಿ ದಾಖಲೆಪತ್ರಗಳನ್ನು ನಾನವರಿಗೆ ನೀಡಿದೆ. ಜಯಪ್ರಕಾಶ್ ಹಾಗೂ ಅಚ್ಯುತ್‌ರ ಭೇಟಿಗೆ ವ್ಯವಸ್ಥೆ ಮಾಡುವಂತೆ ತಿಳಿಸಿದೆ. ದೇಶದ ಗಡಿಗಳಲ್ಲಿ ಏನಾಗುತ್ತದೆ ಎಂಬುದನ್ನು ಈ ದಾಖಲೆ ಪತ್ರ ಭಾರತದ ಜನರಿಗೆ ಕೆಲವು ವರ್ಷಗಳ ಮುಂಚಿತವಾಗಿಯೇ ಎಚ್ಚರಿಕೆ ನೀಡಿತ್ತು.

"ನಾವು ಮೀರತ್ ಅಧಿವೇಶನಕ್ಕೆ ಹೋಗೋಣ" ಅವರೆಲ್ಲ ಅಲ್ಲಿ ಸಿಗುತ್ತಾರೆ" ಎಂದರು ಸುರೇಶ್ ಮರುದಿನ ಮೀರತ್‌ಗೆ ಹೊರಟೆವು.

ನಿರರ್ಥಕ ಅಧಿವೇಶನ

ಮೀರತ್‌ನಲ್ಲಿ ಕರ್ಫ್ಯೂ ಹೇರಲಾಗಿತ್ತು. ಹಿಂದೂ-ಮುಸ್ಲಿಂ ಗಲಭೆಗಳು ನಡೆಯುತ್ತಲೇ ಇದ್ದವು. ವಿಶೇಷ ಪೋಲೀಸ್ ಕಾನ್ಸ್ಟೇಬಲ್‌ಗಳು ನಗರದಾದ್ಯಂತ ಕಾವಲು ನಿಂತಿದ್ದರು. ಈ 'ಅಪವಿತ್ರ ಕೊಲೆಗಳ' ವಿಚಾರದಲ್ಲಿ ಕಾಂಗ್ರೆಸ್ ನಾಯಕರು ಮಂತ್ರ ಪಠಿಸುತ್ತಿದ್ದರು.

ಕೋಮುಗಲಭೆ ವಿಚಾರದಲ್ಲಿ, ಅದನ್ನು ತಣಿಸಲು ಅಥವಾ ತಡೆಯುವ ಬಗ್ಗೆ ಕಾಂಗ್ರೆಸ್‌ನ ಮೀರತ್ ಅಧಿವೇಶನ ಯಾವುದೇ ಮಹತ್ವದ ನಿರ್ಧಾರ ತೆಗೆದುಕೊಳ್ಳಲಿಲ್ಲ. ವೇದಿಕೆಯಿಂದ ಬಿರಿಬಿಸಿ ಮಾತಿನ ಪ್ರವಾಹ ಹರಿದುಬಂತು ಅಷ್ಟೆ. ಸಾವಿರಾರು ಸಂಖ್ಯೆಯಲ್ಲಿ ಕಡಿದು ಸಾಯಿಸಲಾಗುತ್ತಿದ್ದ ಜನರಿಗಾಗಿ ನಿರ್ದಿಷ್ಟವಾದ ಯಾವುದೇ ಕಾರ್ಯಕ್ರಮ ರೂಪಿಸಲಿಲ್ಲ. ಗಾಂಧೀಜಿ ಈ ಅಧಿವೇಶನದಲ್ಲಿ ಭಾಗವಹಿಸಲಿಲ್ಲ. ಅವರು ನೌಖಾಲಿಯಲ್ಲಿ ಕಾರ್ಯಮಗ್ನರಾಗಿದ್ದರು.

ಉತ್ಸಾಹಭರಿತ ಆತ್ಮೀಯ ಸುರೇಶ ಸುತ್ತಮುತ್ತಲೂ ಓಡಾಡಿ ನನ್ನನ್ನು ಪರಿಚಯಿಸುವುದು ಅಗತ್ಯವೆಂದು ಕಂಡ ಎಲ್ಲರನ್ನು ಭೇಟಿ ಮಾಡಿಸಿ ಪರಿಚಯ ಮಾಡಿಸಿಕೊಟ್ಟರು. ಮೀರತ್ ಅಧಿವೇಶನ ಮುಗಿಯುವ ವೇಳೆಗೆ ದೇಶದ ಇಡೀ ಸಮಾಜವಾದಿ ನಾಯಕತ್ವವನ್ನು ನಾನು ಭೇಟಿ ಮಾಡಿದೆ.

ನಾನು ಜಯಪ್ರಕಾಶರನ್ನು ಭೇಟಿ ಮಾಡಬೇಕೆಂದು ಅಚ್ಯುತ್ ಸಲಹೆ ಮಾಡಿದರು. "ನಾವು ಕೆಲಸವನ್ನು ಹಂಚಿಕೊಂಡಿದ್ದೇವೆ" ಎಂದವರು ಹೇಳಿದರು.

ಮುಂಬಯಿಗೆ ಮರಳಿದ ನಾನು "ಯೋಜನೆ" ಯನ್ನು ಬರೆದು ಸಮಾಜವಾದಿ ತ್ರಿಮೂರ್ತಿಗಳು ನೋಡಲೆಂದು ಸುರೇಶ್‌ರ ಕೈಗೊಪ್ಪಿಸಿದೆ.

ಕೆಲವು ದಿನಗಳ ನಂತರ ಜಯಪ್ರಕಾಶ್ ನಾರಾಯಣ ಮುಂಬಯಿಗೆ ಬಂದರು. ಸುರೇಶ್ ನನ್ನನ್ನು ಠಾಕೋರ್‌ದ್ವಾರ್ ರಸ್ತೆಯಲ್ಲಿನ ಸಮಾಜವಾದಿ ಪಕ್ಷದ ಕಚೇರಿಗೆ ಕರೆದೊಯ್ದರು.

ತಾಂತ್ರಿಕ ಕಾರಣಗಳಿಗಾಗಿ ನಾನು ಹೊರಗಡೆ ಕುಳಿತೆ. ಒಳಗಡೆ ಸುರೇಶ್ ಮತ್ತು ಜೆ.ಪಿ ಚರ್ಚೆ ನಡೆಸಿದರು.

"ನಾವೀಗ ಹೋಗೋಣ. ಕೆಲ ದಿನಗಳ ನಂತರ ಅವರು ನಿರ್ಧಾರ ತಿಳಿಸುತ್ತಾರೆ. ನಾನವರಿಗೆ ಯೋಜನೆಯನ್ನು ತೋರಿಸಿದ್ದೇನೆ" - ಎಂದು ಹೊರಗೆ ಬಂದ ಸುರೇಶ ಹೇಳಿದರು. ಡಾಕ್ಟರ್ (ಡಾ.ಮನೋಹರ ಲೋಹಿಯಾ) ರನ್ನು ಭೇಟಿಯಾಗುವಂತೆ ಕೆಲದಿನಗಳ ನಂತರ ನನಗೆ ಸುರೇಶ್ ಸೂಚಿಸಿದರು. "ಲೋಹಿಯಾ ಕಟ್ಟುನಿಟ್ಟಿನ ಮನುಷ್ಯ ನಿಜವಾದ ಕ್ರಾಂತಿಕಾರಿ ಮಾರ್ಗದಲ್ಲಿ ಅವರು ಚಿಂತಿಸುತ್ತಾರೆ" ಎಂದು ಹೇಳಿದರು.

ಕಟ್ಟಾಳುವನ್ನು ಕಂಡೆ...

ಕೋಟೆ ಪ್ರದೇಶದಲ್ಲಿನ ಕಲ್ಲಿನಿಂದ ನಿರ್ಮಿತ ಮನೆಯೊಂದರಲ್ಲಿ ಸೋಷಲಿಸ್ಟ್ ಪಕ್ಷದ ಅದಮ್ಯಚೇತನ ನಾಯಕ ಡಾ.ಲೋಹಿಯಾರನ್ನು ಭೇಟಿಯಾದೆ. ಕಮ್ಯುನಿಸ್ಟ್ ಪಕ್ಷದ ವಲಯದ ಹೊರಗಡೆ ನನ್ನ ಮೇಲೆ ಅತಿ ಹೆಚ್ಚು ಪ್ರಭಾವ ಬೀರಿದ ಏಕೈಕ ವ್ಯಕ್ತಿ ಲೋಹಿಯಾ. ಅಗಲ ಮುಖದ, ಭವಿಷ್ಯದತ್ತ ಆಳವಾಗಿ ನೆಟ್ಟ ಕಣ್ಣುಗಳ ಲೋಹಿಯಾ ನನಗೆ ಒಂದು ಕಪ್ ಕಾಫಿ ಕೊಟ್ಟು ಸಂತೋಷಪಡಿಸಿದರು. "ಅತಿಯಾದ ಮಾತು ಹಾಗೂ ಯಾವುದೇ ನಿರ್ದಿಷ್ಟ ಕಾರ್ಯವಿಲ್ಲ" ಎಂದು ಲೋಹಿಯಾ ತಮ್ಮಷ್ಟಕ್ಕೆ ತಾವು ಮಾತಾಡಿಕೊಳ್ಳುತ್ತಿರುವಂತೆ ಕಂಡಿತು.

ಸುರೇಶ ದೇಸಾಯಿ ಕೆಲವು ದಿನಗಳ ನಂತರ ಜೆ.ಪಿ.ಯಾರ ಉತ್ತರವನ್ನು ನನಗೆ ತಿಳಿಸಿದರು. "ಸಾಮೂಹಿಕ ಕಾರ್ಯಾಚರಣೆಯಲ್ಲಿ ಮಾತ್ರವೇ ನನಗೆ ನಂಬಿಕೆಯಿದೆ" ಎಂದು ಜೆ.ಪಿ ಹೇಳಿದ್ದರು. ಅದಕ್ಕೆ ಪ್ರತಿಯಾಗಿ;

"ಆ ನಂಬಿಕೆಯನ್ನು ಕೈಬಿಡಿ ಎಂದು ನಾನು ಯಾರಿಗೂ ಹೇಳುವುದಿಲ್ಲ. ಜನತೆ ಮತ್ತು ಸಶಸ್ತ್ರ ಪಡೆಗಳು ಬಂಡಾಯ ಹೂಡಬೇಕೆಂಬುದು ನಮ್ಮ ಇಡೀ ಯೋಜನೆಯ ಉದ್ದೇಶವಾಗಿದೆ. ಅದು 'ಸಾಮೂಹಿಕ ಕಾರ್ಯಾಚರಣೆ'ಗೆ ಹೇಗೆ ವ್ಯತಿರಿಕ್ತವಾಗಿದೆಂದು ನನಗೆ ಅರ್ಥವಾಗುತ್ತಿಲ್ಲ"- ಎಂದು ನಾನು ಉತ್ತರಿಸಿದೆ.

ಸೋಷಲಿಸ್ಟ್ ಪಕ್ಷಕ್ಕೆ ಅಂದರೆ ಜಯಪ್ರಕಾಶ್ ನಾರಾಯಣ- ಬಂಡಾಯದ ಯಾವುದೇ ಯೋಜನೆಯಿಲ್ಲ ಎಂಬುದನ್ನು ನಾನೀಗ ಅರ್ಥಮಾಡಿಕೊಂಡೆ.

(ಮುಂದುವರಿಯುವುದು)

ಓದುಗರ ಪತ್ರ

ಸಮಾವೇಶದಲ್ಲಿ ನೆರೆದ ಮಹಿಳೆಯ ಮುಂದೆ 'ಮಹಿಳಾ ಮೀಸಲಾತಿ ಮಸೂದೆ' ತಂದೇ ತರುತ್ತೇವೆ ಎಂದು ಸಚಿವ ಅನಂತಕುಮಾರರು ಏರುಧ್ವನಿಯಲ್ಲಿ ಹೇಳಿದ್ದು ಓದಿ ನಗೆ ಬಂತು. ಯುದ್ಧರಂಗದಿಂದ ಓಡುವ ಉತ್ತರ ಕುಮಾರನಿರಬುದೇ ಏನಿಸಿತು

- **ಸುಕನ್ಯಾ.ಜಿ.**, ಬೆಂಗಳೂರು

ಪಕ್ಷಪಾತದ ಮಾಧ್ಯಮ ರಂಗದಲ್ಲಿ ಐಕ್ಯರಂಗ ಮಿಣಮಿಣ ದೀಪವೇ ಸರಿ. ಲೇಖನದ ವಿಚಾರಗಳು, ಅದರ ನಿರೂಪಣೆ ಖುಷಿ ಕೊಟ್ಟಿತು.

- **ಪ್ರಶಾಂತ್**, ಕಾಸರಗೋಡು

ಚೀನಾದೊಂದಿಗೆ ಹಗೆತನವಲ್ಲ, ಗೆಳೆತನವೇ ಮದ್ದು ಎಂಬ ಪೂರ್ಣ ಅರಿವು ದೇಶ ಆಳುವವರಿಗೆ ಪೂರ್ಣ ಮನವರಿಕೆ ಆಗಬಾರದೆ?

- **ಅನಿಲ್ ಕುಮಾರ್**, ತೊಕ್ಕೋಟು, ಮಂಗಳೂರು

ಅಯೋಧ್ಯಾ ಬಗ್ಗೆ ಸಂಘ ಪರಿವಾರದ್ದು ಬಹಳ ದೊಡ್ಡ ಕುತಂತ್ರ ಯೋಜನೆ ಇದೆ ಎನ್ನಿಸುತ್ತದೆ. ಶಂಕರಾಚಾರ್ಯರ ಪಾತ್ರದಬಗೆಗಿನ ಲೇಖನ ಮರೆಮಾಡಿದ ಸಂಗತಿಗಳನ್ನು ಹೊರಗೆಡಹಿತು.

- **ಹೆಚ್.ಶಶಿಕಾಂತ**, ಗುಲ್ಬರ್ಗಾ

ಇದು ಬಿಸಿಯೂಟವೋ ವಿಷದೂಟವೋ ?

ಪ್ರಾಥಮಿಕ ಶಾಲಾ ಮಕ್ಕಳಿಗೆ ಮಧ್ಯಾಹ್ನ ನೀಡಲಾರಂಭಿಸಿದ 'ಬಿಸಿಯೂಟ'ವೀಗ ಹಲವಾರು ಕಡೆ 'ವಿಷದೂಟ'ವಾಗಿ ಪರಿಣಮಿಸಿದೆ. ದಾವಣಗೆರೆ, ನರಗುಂದ-ನವಲಗುಂದ, ಚಿತ್ರದುರ್ಗ, ಮಂಡ್ಯ ಜಿಲ್ಲೆಗಳಲ್ಲಿ ನೂರಾರು ಮಕ್ಕಳು ಬಿಸಿಯೂಟ ಮಾಡಿದ ಬಳಿಕ ತೀವ್ರ ಅಸ್ವಸ್ಥರಾಗಿ, ಆಸ್ಪತ್ರೆಗೆ ದಾಖಲಾಗಿದ್ದಾರೆ. ದಾವಣಗೆರೆಯಲ್ಲಿ 15 ಮಕ್ಕಳು ಒಳರೋಗಿಗಳಾಗಿ ಶುಶ್ರೂಷೆ ಪಡೆಯುತ್ತಿದಾರೆ, ಕಡೂರಿನಲ್ಲಿ ವಿದ್ಯಾರ್ಥಿ ಸಾವಿಗೀಡಾಗಿದೆ. ಬಿಸಿಯೂಟದ ಅಡುಗೆ ಸಿಬ್ಬಂದಿ ನೇಮಕಾತಿ ವಿಚಾರದಲ್ಲಿ ಚಿತ್ರದುರ್ಗದ ಹಿರೇಗಾಂವನೂರು ಗ್ರಾಮದಲ್ಲಿ ಎರಡು ಗುಂಪುಗಳು ಬಡಿದಾಡಿಕೊಂಡು ಸಿದ್ದಪ್ಪನೆಂಬಾತ ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದಾನೆ. 13 ಜನ ಬಂಧಿತರಾಗಿದ್ದಾರೆ. ಅಡುಗೆ ಮಾಡುವವರು ಪರಿಶಿಷ್ಟ ಜಾತಿ-ಪ.ಪಂಗಡ, ಹಿಂದುಳಿದ ಜಾತಿಗಳವರು ಎಂಬ ಕಾರಣದಿಂದಲೇ ಅನೇಕ ಕಡೆ ದ್ವೇಷ ಉದ್ಭವಿಸಿ, ಶಾಲೆಗಳಿಗೆ ಮಕ್ಕಳನ್ನು ಕಳುಹಿಸದೇ ಊಟಕ್ಕೂ, ಕೆಲವಡೆ ಶಾಲೆಗಳಿಗೂ ಬಹಿಷ್ಕಾರ ಹಾಕಿದ್ದು ವರದಿಯಾಗಿದೆ. ಎಲ್ಲೆಲ್ಲೂ ಗೊಂದಲ, ತ್ವೇಷ, ಅಸ್ತವ್ಯಸ್ಥತೆ ತಾಂಡವವಾಡುತ್ತಿದೆ.

ಪ್ಲೇವಿನ್‌ಸಮರ್ಥನೆ

ಈ ಬಿಸಿಯೂಟದ ಯೋಜನೆಯನ್ನು ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ಪ್ರಯೋಗ ಶೀಲತೆಗಾಗಿ ಕಳೆದ ವರ್ಷದಲ್ಲಿ ರಾಯಚೂರಿನ ದೇವದುರ್ಗ ತಾಲೂಕಿನಿಂದ ಉದ್ಘಾಟಿಸಿ ಊಟವನ್ನೂ ಮಾಡಿದ್ದರು. ಅದು ಇತರೆ ಕೆಲವು ತಾಲ್ಲೂಕುಗಳಿಗೂ, ಜಿಲ್ಲೆಗಳಿಗೂ ವಿಸ್ತರಿಸಿತು. ಇದರ ಅನುಭವವೆಂದರೆ ಶಾಲೆಗೆ ದಾಖಲಾಗುವ, ಹಾಜರಾಗುವ ಮಕ್ಕಳ ಸಂಖ್ಯೆ ಹೆಚ್ಚುವಲ್ಲಿ ಫಲ ನೀಡಿದೆ. ಯಾಕೆಂದರೆ ಗ್ರಾಮಾಂತರದಲ್ಲಿ ಒಂದೊತ್ತಿನ ಊಟದ ಸಲುವಾಗಿ ಮಕ್ಕಳು, ಹಿರಿಯರೊಂದಿಗೆ ದುಡಿಮೆಗೆ ಹೋಗಲೇಬೇಕಾದ ಸಂದರ್ಭವಿರುವುದು ಕಟುವಾಸ್ತವ.

ಈ ಅನುಭವ ಪರಿಗಣಿಸಿ ಈ ಸಾಲಿನಲ್ಲಿ ಜುಲೈ 1 ರಿಂದ ಒಟ್ಟು 20 ಜಿಲ್ಲೆಗಳಲ್ಲಿಯೂ ವಿಸ್ತರಿಸಲು 'ಅಕ್ಷರ ದಾಸೋಹ' ಯೋಜನೆಯಡಿ ಕ್ರಮವಹಿಸಲಾಗಿದೆ. 33 ಸಾವಿರ ಪ್ರಾಥಮಿಕ ಶಾಲೆಗಳ 31 ಲಕ್ಷ ವಿದ್ಯಾರ್ಥಿಗಳನ್ನು ಈ ವ್ಯಾಪ್ತಿಗೆ ತರಲು ನಿರ್ಧರಿಸಲಾಗಿದೆ. ಅದಕ್ಕೀಗ 320 ಕೋಟಿ ರೂಪಾಯಿ ಬಜೆಟ್ ನಿಗದಿ ಮಾಡಿದ್ದು ಈಗ 202 ಕೋಟಿ ಖರ್ಚಿನ ಹಾದಿಯಲ್ಲಿದೆ. ಪ್ಲೇವಿನ್ ಲಾಟರಿಯ ಜೂಜಾಟದ ಅನೈತಿಕ ಹಣವನ್ನು ಈ ಬಿಸಿಯೂಟಕ್ಕೆ ಬಳಸುವುದಾಗಿ ಪ್ರಕಟಿಸಿ ಮುಖ್ಯಮಂತ್ರಿಗಳು ಭಂಡತನದ ಸಮರ್ಥನೆ ಮಾಡಿಕೊಂಡಿದ್ದರು.

ನಿರ್ಲಕ್ಷ್ಯತನ - ಬೇಜವಾಬ್ದಾರಿ

ಈ 'ಬಿಸಿಯೂಟ' ಮಕ್ಕಳ ಶಿಕ್ಷಣದ ಮುಂದುವರಿಕೆಗೆ ಅತ್ಯಗತ್ಯ. ಆದರೆ ಇಂತಹ ಬೃಹತ್ ಯೋಜನೆಯನ್ನು ಜಾರಿಗೆ ತರುವಾಗ ಅದಕ್ಕೆ ಅತ್ಯಗತ್ಯವಾದ ಪೂರ್ವಸಿದ್ಧತೆ ಇಲ್ಲದೇ, ಇಳಿದಿದ್ದು ಸ್ಪಷ್ಟ. ಒಂದು ವರುಷ ಯೋಜನೆಯ ಪ್ರಾಯೋಗಿಕ ಜಾರಿ ಅನುಭವ ನೋಡಿ, ಕನಿಷ್ಟ ಕ್ರಮ ವಹಿಸುವಲ್ಲಿ ಸರ್ಕಾರದ ಇಲಾಖೆಗಳು, ಸಚಿವರು, ಅಧಿಕಾರಿಗಳು ತುಂಬಾ ನಿರ್ಲಕ್ಷ್ಯ ವಹಿಸಿವೆ. ಬೇಜವಾಬ್ದಾರಿ ತೋರಿವೆ.





ಅಪ್ಪಾ, ಇನ್ನು ಮುಂದೆ ನಾನು ಸ್ಕೂಲಿಗೆ ಹೋಗೋಲ್ಲ, ಮನೆಯಲ್ಲಿ ಆಟ ಆಡಿಕೊಂಡು ಇರ್ತೀನಿ

ಈ ವಾರ ಕರ್ನಾಟಕ ಒಂದು ನೋಟ —— ಎಸ್.ವೈ.ಗುರುಶಾಂತ್

ಬಿಸಿಯೂಟ ಯಾರ್‍ಯಾರಿಗೆ?

'ಬಿಸಿಯೂಟ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರು, ಜಿಲ್ಲಾ ಸಚಿವರುಗಳೇನೋ ಮಕ್ಕಳೊಂದಿಗೇನೇ ಕುಂತು ಉಂಡು ತೇಗಿ ಹೋದರು. ಅಂದು ಅವರಿಗಾಗಿ ಭರ್ಜರಿ ಭೋಜನದ ವ್ಯವಸ್ಥೆಯೇನೋ ಆಗಿತ್ತು! ಆದರೆ ಮರುದಿನದಿಂದ ಮಕ್ಕಳಿಗೆ ಎಂತಹ ಊಟ ನೀಡಲಾಗುತ್ತಿದೆ ಎಂದು ಒಂದು ದಿನವಾದರೂ ಕಣ್ಣೆತ್ತಿ ನೋಡಿದರೇ? ನೋಡಿದ್ದರೆ ಈ ಸ್ಥಿತಿ ನಿರ್ಮಾಣ ಆಗುತ್ತಿರಲಿಲ್ಲವೇನೋ? ಯಾಕೆಂದರೆ ಈಗ ತೀವ್ರ ಅಸ್ವಸ್ಥರಾಗಿರುವಲ್ಲಿ ಮುಖ್ಯ ಕಾರಣವೆಂದು ಪ್ರಾಥಮಿಕವಾಗಿ ಗುರುತಿಸಿರುವುದು - ಕಳಪೆ ಆಹಾರ ಸಾಮಗ್ರಿಗಳ ಪೂರೈಕೆ. ಇದು ಕೇಂದ್ರ ಸರ್ಕಾರ ಸರಬರಾಜು ಮಾಡಿದ ಕಳಪೆಯ ಮುಗ್ಗು ಧಾನ್ಯಗಳು. ಅಡುಗೆ ಮಾಡುವ ಪಾತ್ರೆಗಳು ಅಯೋಗ್ಯವಾಗಿರುವುದು, ಅಶುದ್ಧ ನೀರಿನ ಬಳಕೆ ಅಡುಗೆ ಮಾಡುವವರ ಆಯ್ಕೆಯಲ್ಲಿ ಪಕ್ಷಪಾತ ಇತ್ಯಾದಿ...

> **ಸರ್ಕಾರದ ಬಿಸಿಯೂಟವೀಗ ಮಕ್ಕಳಿಗೆ ವಿಷದೂಟವಾಗಿ ಪರಿಣಮಿಸಿದೆ.ಈ ಅಪರಾಧದ ಹೊಣೆ ಹೊರಬೇಕಾದವರು ಯಾರು?**

ಇವು ಏನನ್ನು ತೋರಿಸುತ್ತದೆ. ಪರಿಹರಿಸಲಾಗದ ಸಮಸ್ಯೆಗಳೇ? ಈ ವಿವರಗಳೇ ಸರ್ಕಾರದ ನೀತಿಯ ನಿರ್ಲಕ್ಷ್ಯತನ, ಭ್ರಷ್ಟಾಚಾರವನ್ನು ಎತ್ತಿ ತೋರಿಸುತ್ತದೆ.

ದಾವಣಗೆರೆಯ ಶಾಲೆಗಳಿಗೆ ಆಹಾರ ಸಾಮಾನು ಪೂರೈಕೆ ಮಾಡುತ್ತಿರುವುದನ್ನು ಸರ್ಕಾರ ಖಾಸಗಿಯ 'ಸ್ವಯಂ ಸೇವಾ' ಸಂಸ್ಥೆಯೊಂದಕ್ಕೆ ವಹಿಸಿದೆ. ಬಿಸಿಯೂಟಕ್ಕೆ ಆಹಾರ ಸರಬರಾಜು ಮಾಡೋದು ಒಂದು ವ್ಯಾಪಾರವಾಯಿತು. ಇದಕ್ಕಾಗಿ ಪೈಪೋಟಿ, ಭ್ರಷ್ಟಾಚಾರ! ಇನ್ನು ಅಡುಗೆ ಮಾಡಲು ಸರ್ಕಾರ ಯೋಗ್ಯವಾದ ಪಾತ್ರೆಗಳನ್ನು ಪೂರೈಸಿಯೇ ಇಲ್ಲ. ಹಳ್ಳಿಗಳಲ್ಲಿ ಇದ್ದಬದ್ದ ಪಾತ್ರೆಗಳನ್ನೇ ಬಳಸುವ ಒತ್ತಡಕ್ಕೆ ಒಳಗಾಗಿದ್ದಾರೆ. ಅಡುಗೆ ಮಾಡಲು ಸೂಕ್ತವ್ಯವಸ್ಥೆಯಿಲ್ಲ, ಒಲೆಯಿಲ್ಲ, ಇಂಧನವಿಲ್ಲ, ಸಾಮಗ್ರಿಗಳೂ ಅಷ್ಟಕಷ್ಟೇ. ಆದರೆ ಅಡುಗೆ ಮಾಡಿ ಊಟ ಹಾಕಬೇಕು ಎಂಬ ಆಜ್ಞೆ. ಇದರ ಉಸ್ತುವಾರಿಯನ್ನು ನಿರ್ದಿಷ್ಟ ಪಡಿಸಿಲ್ಲ. ಹೀಗಾಗಿ ಶಿಕ್ಷಕರು, ಗ್ರಾಮಪಂಚಾಯತಿ, ಶಾಲಾ ಅಭಿವೃದ್ಧಿ ಸಮಿತಿ... ಎಲ್ಲರೂ ಸೇರಿ ಗೊಂದಲ, ಕಲಹಗಳ ಗೂಡಾಗಿದೆ. ಅಡುಗೆಯುವರ ನೇಮಕಾತಿಯೂ ನಿರ್ದಿಷ್ಟವಾಗಿ ಆಗದೇ ಅನೇಕ ಕಡೆ (ಬೆಂಗಳೂರು ಕುಂಬಳಗೋಡು ಶಾಲೆಯಲ್ಲಿ) ದಿನಗೂಲಿಯಾಗಿ ಒಂದೆರೆಡು ದಿನಕ್ಕೊಂದು ನೇಮಿಸಿಕೊಳ್ಳಲಾಗಿದೆ. ಇಲ್ಲಿಯೂ ಅನುಭವಕ್ಕಿಂತ ಸ್ಥಳೀಯ ರಾಜಕಾರಣಿಗಳ ಶಿಫಾರಸು, ಕಿತ್ತಾಟ ಇವು ತಡೆಯಲಾಗದಂತಹವುಗಳೇ? ಈಗ ಪರಿಶಿಷ್ಟ -ಹಿಂದುಳಿದ ಜಾತಿಗೆ ಸೇರಿದವರಿಂದ ಅಡುಗೆ ಮಾಡಿಸಬಾರೆಂದು ಕೂಗಿದೆದ್ದಿದೆ. ಈ ನಿಲುವನ್ನು ಒಪ್ಪಲಾಗದು. ಸರ್ಕಾರವೂ ಇದಕ್ಕೆ ಮಣಿಯಬೇಕಿಲ್ಲ. ತಾರತಮ್ಯದ ಭಾವನೆಗಳನ್ನು ಜನರಿಂದ ತೊಲಗಿಸುವ ಹೊಣೆ ಆಳುವ ಕಾಂಗ್ರೆಸ್ ಪಕ್ಷದ ಮೇಲಿದೆ ಹಾಗೂ ಸಂವಿಧಾನಕ್ಕೆ ಬದ್ಧವಾಗಿರುವ ಇತರ ಪಕ್ಷಗಳ ಮೇಲೂ ಇದೆ. ಈ ಎಚ್ಚರವೇ ಸರ್ಕಾರಕ್ಕಿಲ್ಲ. ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಕೆಳಜಾತಿಯವರಿಂದ ಅಡುಗೆ ಮಾಡಿಸಲಾಗುತ್ತಿದೆಯೆಂದು ಶಾಲೆಯ ಮಕ್ಕಳನ್ನೇ ಕರೆದೊಯ್ದು ಕುಖ್ಯಾತಿ ವಿಶ್ವಹಿಂದೂ ಪರಿಷತ್ತಿಗೆ ದಕ್ಕಿರುವುದು ಮಂಡ್ಯ ಜಿಲ್ಲೆಯಿಂದ ವರದಿಯಾಗಿದೆ.

ಹಿಂದೆ 1957 ರಲ್ಲಿ ಹಿರಿಯ ಮಾರ್ಕ್ಸ್‌ವಾದಿ ಚಿಂತಕ, ನಾಯಕ ರಾಗಿದ್ದ ಕಾಂ. ಇ.ಎಂ.ಎಸ್.ನಂಬೂದರಿಪಾಡ್ ರವರ ನೇತೃತ್ವದಲ್ಲಿ ಪ್ರಥಮ ಕಮ್ಯುನಿಸ್ಟ್ ಸರ್ಕಾರ ಕೇರಳದಲ್ಲಿ ಅಧಿಕಾರಕ್ಕೆ ಬಂದಾಗ ಅಂದಿನ ವಾಸ್ತವ ಸ್ಥಿತಿ ಆಧರಿಸಿ ಮಧ್ಯಾಹ್ನದ ಒಂದು ಊಟ ನೀಡಿ ಶಿಕ್ಷಣ ಪಡೆಯಲು ಪ್ರೋತ್ಸಾಹಿಸಲಾಗಿತ್ತು. ಅದು ಅತ್ಯಂತ ಯಶಸ್ವಿಯಾಗಿ, ಶಿಕ್ಷಣ ಪ್ರಮಾಣ ಹೆಚ್ಚುವಲ್ಲಿ ಅತ್ಯುತ್ತಮ್ಮ ಫಲಿತಾಂಶ ನೀಡಿತ್ತು. ಆದರೆ ಇಂತಹ ಗೊಂದಲ, ಭ್ರಷ್ಟತೆಗಳು ಇಣುಕಿಯೂ ನೋಡಿರಲಿಲ್ಲ. ಆದರೆ ಹೈಟೆಕ್ ಮುಖ್ಯಮಂತ್ರಿಯುವರು ಆಡಳಿತದಲ್ಲಿ ಇಂತಹ ಯೋಜನೆಗಳು ಪ್ರಬಲ ರಾಜಕೀಯ ಇಚ್ಛಾಶಕ್ತಿ-ಬದ್ಧತೆಯಿಲ್ಲದೇ, ಭ್ರಷ್ಟತೆ ಮತ್ತು ಆಷಾಢಭೂತಿತನಗಳೇ ಮೇಲುಗೈ ಪಡೆದಿರುವಾಗ ಎಂತಹ ಫಲಿತಾಂಶ ನಿರೀಕ್ಷಿಸಬಹುದು?

ಇಷ್ಟೆಲ್ಲಾ ಅನಾಹುತಗಳು ಸಂಭವಿಸಿದ ಮೇಲಾದರೂ ಎಚ್ಚರಿಕೆಯ ಹೆಜ್ಜೆ ಇಡಲಾದೀತೆ? ವಿಚಾರಣೆಗೆ ಆದೇಶಗಳನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ. ಅದೂ ಹನ್ನೊಂದರಲ್ಲಿ ಇನ್ನೊಂದು ಎಂದಾದೀತೆ?ಅನಾಹುತಗಳು ಹೆಚ್ಚುವ ಮೊದಲೇ ಸರ್ಕಾರ ಎಚ್ಚೆತ್ತುಕೊಳ್ಳಬೇಕು

ಈ ಕೃಪಾಂಕ ನೌಕರರು ಈಗ ಉದ್ಯೋಗ ವಂಚಿತರು

ಎಂತಹ ಸಂದರ್ಭ ಬಂದರೂ ಗ್ರಾಮೀಣ ಕೃಪಾಂಕ ಆಧಾರಿತ ನೌಕರರನ್ನೂ ಕೈ ಬಿಡುವುದಿಲ್ಲವೆಂದು ಹೇಳುತ್ತಿದ್ದ ಕರ್ನಾಟಕ ಸರ್ಕಾರ ದಿಢೀರನೇ ಸುಪ್ರೀಂಕೋರ್ಟ್ ಆದೇಶವನ್ನು ಜಾರಿಗೊಳಿಸುವುದಾಗಿ ನಿರ್ಧರಿಸಿದೆ. ಮೊನ್ನೆ 'ನೌಕರರನ್ನು ಬಿಡುಗಡೆಗೊಳಿಸೋಲ್ಲ' ಎಂದು ಕಾನೂನು ಸಚಿವ ಡಿ.ಬಿ.ಚಂದ್ರೇಗೌಡರವರು ಪತ್ರಿಕಾಗೋಷ್ಠಿಯಲ್ಲಿ ಹೇಳುತ್ತಿರುವಾಗಲೇ ಬಿಡುಗಡೆಗೊಳಿಸಿದ ಸರ್ಕಾರಿ ಆದೇಶ ಸಹಿ ಪಡೆದು ಜಾರಿಗೆ ಹೊರಬಿತ್ತು. ಆದರೆ ಆಶ್ವಾಸನೆ ಮಾತ್ರ ಹಾಗೇ ಇತ್ತು.

ಈಗಾಗಲೇ ಆ ನೌಕರರಲ್ಲಿ 'ಮೆರಿಟ್' ಇರುವವರನ್ನು ಪಟ್ಟಿ ಮಾಡಿದ್ದು 9000 ಜನ ಪುನರ್‌ನೇಮಕವಾಗುತ್ತಾರೆ. ಉಳಿದ 4000 ಸ್ಥಾನಗಳಿಗೆ ಹಿಂದೆಯೇ ಅರ್ಜಿಹಾಕಿ ನೌಕರಿ ಸಿಗದಿರುವ ಅಭ್ಯರ್ಥಿಗಳಿಗೆ ಮೆರಿಟ್ ಪಟ್ಟಿ ತಯಾರಿಸಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಈಗಾಗಲೇ ನೇಮಕವಾಗಿದ್ದರಲ್ಲಿ ಉಳಿದಿರುವ 4000 ನೌಕರರದ್ದು ಅತಂತ್ರ ಸ್ಥಿತಿ. ಆದರೆ ಸರ್ಕಾರ ಹೇಳುತ್ತಿದೆ 'ಹೊಸ ಆದೇಶ ಹೊರಡಿಸಿ ವಿಶೇಷವಾಗಿ ನೇಮಕಾತಿಗೆ ಯತ್ನಿಸಲಾಗುವುದು. ವಿವಿಧ ಇಲಾಖೆಗಳಲ್ಲಿ ಖಾಲೀ ಇರುವ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುವುದು'.

ವಿವಿಧ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇದ್ದರೆ ನೇಮಕ ಆಗಬಹುದು! (ವಂಚಿತ ನೌಕರರಲ್ಲಿ ಮೆರಿಟ್‌ಗನುಸಾರ) ಇಲ್ಲವಾದರೆ ಆಗುವವರೆಗೂ ಕಾಯಬೇಕಾಗುವುದು.

ಕರ್ನಾಟಕ ಸರ್ಕಾರದಲ್ಲಿ 1 ಲಕ್ಷ 10 ಸಾವಿರದಷ್ಟು ಹುದ್ದೆಗಳೇನೋ ಖಾಲಿ ಇದ್ದವು. ಆದರೆ ಸರ್ಕಾರ ಬಹಳಷ್ಟು ಖಾಲಿ ಹುದ್ದೆಗಳನ್ನು ರದ್ದು ಪಡಿಸಿ, ಇಲಾಖೆಗಳನ್ನು ಮುಚ್ಚಿತು. ಉದ್ಯೋಗ ಕಡಿತ-ನೇಮಕಾತಿ ನಿರ್ಧಾರದ ಬೇರೆ -ಇಲ್ಲವೆಂದರೆ ವಿಶ್ವಬ್ಯಾಂಕ್ ಕೇಳಬೇಕಲ್ಲಾ! ಇದು ಸ್ಥಿತಿ. ಸರ್ಕಾರದ ಯೋಚನೆ-ಯೋಜನೆ ಅರ್ಥವಾಗದಿರುವಂತಹದ್ದಲ್ಲ. ಅದಕ್ಕೆ ತಕ್ಕಂತೆ ಕೋರ್ಟ್‌ನ ಆದೇಶಗಳು!

ಈಗಲಾದರೂ ಸರ್ಕಾರ ತಾನು ಹೇಳಿದಂತೆ ನಡೆಯಬೇಕು. ವಜಾ ಆದ ನೌಕರರನ್ನು ಉಳಿಸಬೇಕು, ಇದಕ್ಕಾಗಿ ಬೆಂಗಳೂರು, ಗುಲ್ಬರ್ಗಾ ಮುಂತಾದೆಡೆ ಹೋರಾಟ ನಡೆದಿದೆ. ರಸ್ತೆ ತಡೆಗಳೂ ಆಗಿವೆ.

ವಿದ್ಯುತ್ ಚಳುವಳಿ : ದಮನಕಾಂಡಕ್ಕೆ ಇಳಿದಿರುವ ಸರ್ಕಾರ

ವಿದ್ಯುತ್ ಕ್ಷೇತ್ರವನ್ನು ಪೂರ್ಣವಾಗಿ ಖಾಸಗಿ ಕಂಪನಿಗಳಿಗೆ ಮಾರಲು ಹೊರಟಿರುವ ಸರ್ಕಾರ, ಸುಧಾರಣೆಯ ಕ್ರಮಗಳಿಗೆ 'ಬಲ' ತಂದುಕೊಳ್ಳದೆ ಈಗ 'ಪೊಲೀಸ್' ಬಲವನ್ನು ಬಳಸುತ್ತಿದೆ. ಜನ ಪ್ರತಿಭಟನೆಯನ್ನು ಕೇಳಿಕೆಗಳನ್ನು ದಮನಗೊಳಿಸಲು ಮುಂದಾಗಿದೆ.


ಮನಬಂದಂತೆ ವಿದ್ಯುತ್ ಬಿಲ್ ಪಾವತಿಸಲು .ಬಿಲ್ ನೀಡಲಾಗಿದೆ. ಹಳೆಯ ಬಾಕಿ ಎಂದು ಅರ್ಥವಿಲ್ಲದ ಮೊತ್ತ ಸೂಚಿಸಲಾಗಿದೆ. ಮೇಲಾಗಿ ದುಬಾರಿ ಶುಲ್ಕವಲ್ಲದೆ, ಮಾರ್ಗಶುಲ್ಕ, ಮತ್ತಿತರೆ ಶುಲ್ಕಗಳನ್ನು ಸೇರಿಸಿ ವಸೂಲು ಮಾಡಲಾಗುತ್ತಿದೆ. ಅಸಮರ್ಪಕ ವಿದ್ಯುತ್ ಪೂರೈಕೆ, ಮಳೆಯಿಲ್ಲದೇ ಬೆಳೆಗಳು ಒಣಗುತ್ತಿರುವಾಗ ರೈತರೂ ಕಂಗಾಲು.

ಪುಟ 10ಕ್ಕೆ

ಕಾರ್ಮಿಕರಲ್ಲಿ ವರ್ಗ ಜಾಗೃತಿ ಬೆಳೆಸಬೇಕು

ಕಾಂ.ಸೂರಿ ಸ್ಮರಣೆಯ ಸಂಕಲ್ಪ

ಜುಲೈ 1,2003 ಕ್ಕೆ ದುಡಿಯುವ ವರ್ಗದ ಸಿಂಹಧ್ವನಿ ಕಾಂ.ಸೂರ್ಯನಾರಾಯಣರಾವ್ ನಮ್ಮನ್ನಗಲಿ ಒಂದು ವರ್ಷ. ಕಾಂ.ಸೂರಿಯವರು ದೈಹಿಕವಾಗಿ ನಮ್ಮೊಂದಿಗಿಲ್ಲ. ಕರ್ನಾಟಕ ರಾಜ್ಯದ



ದೇಶದ ದುಡಿಯುವ ವರ್ಗದ ಪರವಾಗಿ ಅವರು ಎತ್ತಿದ ದನಿ ಇಂದಿಗೂ ಮಾರ್ದನಿಸುತ್ತಿದೆ. ಕರ್ನಾಟಕ ರಾಜ್ಯದ ದುಡಿಯುವ ಜನತೆ ಎಂದಿಗೂ ಮರೆಯಲಾರದ 'ಚೇತನ' ಸೂರಿಯವರ ಬದುಕು-ಹೋರಾಟ-ಕೊಡುಗೆಗಳನ್ನು ಕುರಿತು ನೆನಪಿಸಿಕೊಳ್ಳುವ ಕಾರ್ಯಕ್ರಮವನ್ನು ಜುಲೈ 1 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಸಂಘಟಿಸಿತ್ತು.

ಕಾಂ.ಸೂರಿಯವರ ಹೆಸರೇ ಕಾರ್ಮಿಕ ವರ್ಗಕ್ಕೆ ಒಂದು ಸ್ಫೂರ್ತಿ. ಜುಲೈ 1 ರ ಸಂಜೆ ಎನ್.ಜಿ.ಒ ಸಭಾಂಗಣದ ಒಳಗೆ ಕೂರಲು ಜಾಗವಿಲ್ಲದಷ್ಟು ಜನ. ಹೆಚ್ಚುವರಿ ಕುರ್ಚಿಗಳನ್ನು ಹಾಕಿ ಕೂಡಿಸಲಾಯಿತು. ಒಳಗೆ ಹೊರಗೆ ನಿಂತವರು ಹಲವರು. ಸಿಪಿಐ(ಎಂ) ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಪ್ರಕಾಶ್‌ರವರ ಅಧ್ಯಕ್ಷತೆ, ಎಂ.ಕೆ.ಫಂದೆ. ವಿ.ಜೆ.ಕೆ.ನಾಯರ್ ಜಿ.ಎನ್. ನಾಗರಾಜ್ ಮುಂತಾದವರು ಮಾತನಾಡಿ-ರಾಜ್ಯದ, ದೇಶದ ಕಾರ್ಮಿಕ ಚಳುವಳಿಗೆ ಪ್ರಜಾಸತ್ತಾತ್ಮಕ ಚಳುವಳಿಗೆ ಸೂರಿಯುವರ ಕೊಡುಗೆಗಳನ್ನು ಕುರಿತು ಸ್ಮರಿಸಿದರು.

ವರ್ಗಸಂಘರ್ಷದಲ್ಲಿ ಅಚಲ ವಿಶ್ವಾಸ


ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಪಂಧೆಯವರು ಮಾತನಾಡಿ ಮಾರ್ಕ್ಸ್‌ವಾದಿ ವಿಚಾರಧಾರೆಯಲ್ಲಿ ದುಡಿಯುವವರ್ಗದ ವಿಮೋಚನೆಯ ಸಿದ್ಧಾಂತವಾದ ವರ್ಗ ಸಂಘರ್ಷದಲ್ಲಿ ಸೂರಿಯವರು ಇಟ್ಟಿದ್ದ ಅಚಲವಾದ ವಿಶ್ವಾಸದ ಕುರಿತು ಸ್ಮರಿಸಿದರು. ತಾವು ನಂಬಿದ ಸಿದ್ಧಾಂತದಿಂದ ಸೂರಿಯುವರು ಎಂದೂ ವಿಚಲಿತರಾಗಲಿಲ್ಲ. ತಮ್ಮ ಇಡೀ ಜೀವಮಾನ ಪೂರ್ಣ ದುಡಿಯುವ ವರ್ಗದ ಅಭ್ಯುದಯಕ್ಕಾಗಿ ಅವಿಶ್ರಾಂತ ವಾಗಿ ಹೋರಾಡಿದರು. ವರ್ಗ, ಸಂಘರ್ಷದ ಹೋರಾಟದಲ್ಲಿ ಬಂಡವಾಳಶಾಹಿ ವರ್ಗದ ದಾಳಿ ದಬ್ಬಾಳಿಕೆ, ಪಿತೂರಿ ಕುತಂತ್ರಗಳನ್ನು ಎದುರಿಸಿ ಮುನ್ನುಗ್ಗುವ ಅವರ ಎದೆಗಾರಿಕೆ, ಧೈರ್ಯ ಅಪೂರ್ವ ವಾದದ್ದು ಎಂದು ಅವರುಸ್ಮರಿಸಿದರು.

ಸಮಾಜ ವಾದವನ್ನು ಕೈಬಿಟ್ಟ ಸೋವಿಯತ್ ಒಕ್ಕೂಟದಲ್ಲಿ ದುಡಿಯುವ ಜನತೆ ಸಮಾಜವಾದದ ಹಿರಿಮೆಯನ್ನು ಕಂಡುಕೊಳ್ಳುತ್ತಿದ್ದಾರೆ. ಮನುಕುಲದ ಸಮಸ್ಯೆಗಳಿಗೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪರಿಹಾರವಿಲ್ಲ-ಸಮಾಜವಾದವೇ ಜಗತ್ತಿನ ಭವಿಷ್ಯ ಎಂಬ ಮಾರ್ಕ್ಸ್‌ವಾದಿ ತಿಳುವಳಿಕೆಯಲ್ಲಿ ಕಾಂ.ಸೂರಿ ಅಚಲ ವಿಶಾಸವಿಟ್ಟು ಬದುಕಿನ ಕೊನೆಯ ಕ್ಷಣದವರೆಗೆ ಅದಕ್ಕಾಗಿ ಹೋರಾಡಿದರು ಎಂದು ಪಂಧೆ ಹೇಳಿದರು.

ಸಿಪಿಐ(ಎಂ)ನ ಹಿರಿಯ ಮುಖಂಡರು, ಸೂರಿಯವರ ಬಹುಕಾಲದ ಒಡನಾಡಿ ವಿ.ಜೆ.ಕೆ ನಾಯರ್‌ರವರು ಮಾತನಾಡಿ, ಚಳುವಳಿಯನ್ನು ಮುನ್ನಡೆಸುವ ಸೂರಿಯವರ ಧೀಮಂತಿಕೆಯ ಕುರಿತು ನೆನಪಿಸಿಕೊಂಡರು. ಪ್ರಸ್ತುತ ಜಾಗತೀಕರಣ-ಕೋಮುವಾದದ ಅವಳಿ ಅಪಾಯಗಳು ಕಾರ್ಮಿಕವರ್ಗದ ಹಕ್ಕುಗಳ ದಮನದ ಪ್ರೇರಣೆಗಳಾಗಿರುವಾಗ ಸೂರಿಯುವರಂತಹ ಮುಖಂಡರ ಚಳುವಳಿ ಅಗತ್ಯವಾಗಿತ್ತು. ಆದರೆ ಸೂರಿಯವರು ತೆರವು ಮಾಡಿರುವ ಸ್ಥಾನವನ್ನು ತುಂಬಲು ಇನ್ನೂ ಸಾಕಷ್ಟು ಸಮಯ ಬೇಕು ಮತ್ತು ಸಾಮೂಹಿಕ ನಾಯಕತ್ವದ ಮೂಲಕ ಈ ಸ್ಥಾನವನ್ನು ತುಂಬಬೇಕು. ಸೂರಿಯವರ ಸ್ಥಾನವನ್ನು ಯಾರೇ ಒಬ್ಬರು ತುಂಬಲಾರರು ಎಂದು ಸೂರಿಯವರು ಚಳುವಳಿಗೆ ನೀಡಿದ ಬೃಹತ್ ಕೊಡುಗೆ, ತುಂಬಿದ್ದ ಸ್ಥಾನದ ಕುರಿತು ಸ್ಮರಿಸಿದರು. ಬೆಂಗಳೂರಿನಲ್ಲಿ ದೊಡ್ಡ ಸಂಖ್ಯೆಯ ಕಾರ್ಮಿಕರಿದ್ದಾರೆ. ಆದರೆ ಕಾರ್ಮಿಕ ವರ್ಗಪ್ರಜ್ಞೆ ಕಡಿಮೆ ಇದೆ. ಕಾರ್ಮಿಕರು ವರ್ಗದಲ್ಲಿ ವರ್ಗಪ್ರಜ್ಞೆ ಮೂಡಿಸಿ ಕಾರ್ಮಿಕವರ್ಗವಾಗಿ ಅವರು ಕಾರ್ಯಾಚರಣೆಗಿಳಿಯುವಂತೆ ಸೂರಿಯವರ ಸ್ಮರಣೆಯ ದಿನ ತೀರ್ಮಾನಿಸಬೇಕೆಂದು ಕರೆ ನೀಡಿದರು.

ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮಾತನಾಡಿ, ಬೆಂಗಳೂರಿನಲ್ಲಿ ಸೂರಿಯವರ ನೇತೃತ್ವದಲ್ಲಿ ನಡೆದ ಐತಿಹಾಸಿಕ ಮೈಕೊ-ಐ.ಟಿ.ಸಿ ಕಾರ್ಮಿಕರ ಹೋರಾಟಗಳಂತಹ ಹಲವು ಚಳುವಳಿಗಳು ಸ್ಫೋಟಿಸುವಂತಹ ಅತೃಪ್ತಿ ಕಾರ್ಮಿಕರಲ್ಲಿ ಬೆಳೆಯುತ್ತಿದೆ.

ತತ್‌ಕ್ಷಣದ ಏರಿಳಿತಗಳನ್ನು ಕಂಡು ಯಾರೂ ನಿರಾಶರಾಗಬೇಕಾದ ಅಗತ್ಯವಿಲ್ಲ. ದುಡಿಯುವ ವರ್ಗದ ಸಿದ್ಧಾಂತದ ಆಧಾರದಲ್ಲಿ ಕಾರ್ಮಿಕರು ಸಜ್ಜುಗೊಂಡರೆ ಕಾರ್ಮಿಕ ವರ್ಗದ ಅತೃಪ್ತಿ ಎಂಬ ದಾವಾನಲವನ್ನು ಒಂದು ಸಂಘಟಿತ ಶಕ್ತಿಯಾಗಿ ರೂಪುಗೊಳಿಸಬಹುದು. ಈ ಕೆಲಸವನ್ನು ಮಾಡುವುದೇ ನಾವು ಸೂರಿಯವರಿಗೆ ತೋರುವ ಗೌರವ. ಅದು ಸೂರಿಯವರ ಕನಸು ಎಂದರು. ಕಾರ್ಮಿಕ ವರ್ಗದ ಮೇಲಿನ ಇಂದಿನ ಧಾಳಿ ಹಿಮ್ಮೆಟ್ಟಿಸಿ ಹೋರಾಡಲು ಸೂರಿಯವರ ಎದೆಗಾರಿಕೆ, ಬದ್ಧತೆ, ತೀಕ್ಷ್ಣ ಮನೋಭಾವ-ಹೋರಾಟದ ಕೆಚ್ಚು ನೂರಾರು ಕಾರ್ಯಕರ್ತರಲ್ಲಿ



ಕೆಂಪು ಸೂರಿ'ಯ ಸ್ಮರಣ ಸಂಚಿಕೆ ಬಿಡುಗಡೆ

ಕಾರ್ಮಿಕ ಚಳುವಳಿಯ ಒಡನಾಡಿಗಳು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರುಗಳು ಕಾಂ.ಸೂರಿಯವರ ಬದುಕು- ಹೋರಾಟಗಳ ಕುರಿತು 'ಐಕ್ಯರಂಗ' ವಾರಪತ್ರಿಕೆ ಹೊರತಂದ ಕೆಂಪು ಸೂರ್ಯ ಸ್ಮರಣ ಸಂಚಿಕೆಯನ್ನು ಇದೇ ಸಮಾರಂಭದಲ್ಲಿ ಬಿಡುಗಡೆಗೊಳಿಸಲಾಯಿತು. ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದ ಕಾಂ.ಎಂ.ಕೆ.ಫಂದೆಯವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಸೂರಿಯವರ ಇಬ್ಬರು ಮಕ್ಕಳಾದ ರೇಖಾ ಮತ್ತು ಮೀರಾ ಇವರಿಗೆ ಸಾಂಕೇತಿಕವಾಗಿ ನೀಡಿದರು. .ಸೂರಿಯವರ ಕುಟುಂಬದ ಸದಸ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಹಾಗೆಯೇ ರಾಜ್ಯ ಸಕ್ರೇಟಾರಿಯೇಟ್ ಸದಸ್ಯರಾದ ಕೆ.ನೀಲಾ, ಎಸ್.ವೈ.ಗುರುಶಾಂತ್, ರಾಜ್ಯ ಸಮಿತಿ ಸದಸ್ಯರುಗಳೂ, ಬೆಂಗಳೂರು ಜಿಲ್ಲಾ ಸಮಿತಿ ಮುಖಂಡರು, ಅಸಂಖ್ಯಾತ ಕಾರ್ಮಿಕರು ಪಾಲ್ಗೊಂಡಿದ್ದರು.

ಸೂರಿ ಒತ್ತಾಸೆ :ಅಪೂರ್ವ ಮಾಹಿತಿಗಳು, ವಿಶಿಷ್ಟ ಬರಹಗಳು, ತೀರಾ ವಿರಳವಾಗಿರುವ ಫೋಟೋ ಅಲ್ಬಂ ಉಳ್ಳ 'ಕೆಂಪು ಸೂರಿ'ಯ ನೂರಾರು ಪ್ರತಿಗಳು ಮಾರಾಟವಾದವು. 'ಈ ಅಮೂಲ್ಯ ಸಂಚಿಕೆ ಎಲ್ಲಾ ಕೈಗಾರಿಕೆಗಳ ಪ್ರತೀ ಕಾರ್ಮಿಕರನ್ನು ತಲುಪಬೇಕು. ಹಾಗೇ ಐಕ್ಯರಂಗ ವಾರಪತ್ರಿಕೆಗ ಚಂದಾ ದಾರವಾಗಬೇಕು. ಇದು ಪತ್ರಿಕೆಯ ಪ್ರಕಾಶಕರೂ ಆಗಿದ್ದ ಸೂರಿಯವರ ಪ್ರಬಲ ಒತ್ತಾಸೆ ಯಾಗಿತ್ತು ಎಂದು ಕೆ.ಪ್ರಕಾಶ್ ಎಂದರು.

ಸಾರ್ವಜನಿಕರೇ ರಸ್ತೆ ಉದ್ಘಾಟಿಸಿದ ಅಪೂರ್ವ ಘಟನೆ

ಊರಿನ ಅವಶ್ಯಕತೆಗಳಿಗಾಗಿ ಜನರು ಸಂಘಟಿತರಾಗಿ ಹೋರಾಡದಿದ್ದರೆ ಊರಿನ ಅಭಿವೃದ್ಧಿ ಸಾಧ್ಯವೇ ಇಲ್ಲ. ಪಟ್ಟಭದ್ರ ರಾಜಕಾರಣಿಗಳು ತಮ್ಮ ಜೇಬು ಹೇಗೆ ಭರ್ತಿ ಮಾಡಿಕೊಳ್ಳಬಹುದು ಎಂಬ ಲೆಕ್ಕಾಚಾರವನ್ನೇ ಹಾಕಿ ಯೋಜನೆಗಳನ್ನು ರೂಪಿಸುತ್ತಾರೆ. ಜನರ ಸಂಘಟನೆ ಹೋರಾಟದಿಂದ ಸುಸಜ್ಜಿತವಾದ ರಸ್ತೆ ಆಗಿರುವ ಅಪೂರ್ವ ಘಟನೆಯೊಂದು ಉಡುಪಿ ಜಿಲ್ಲೆಯ ಮರ್ಣೆಯಲ್ಲಿ ನಡೆದಿದೆ.

ಉಡುಪಿ ವಿಧಾನ ಸಭೆ ವ್ಯಾಪ್ತಿಯ ಮರ್ಣೆ ತೀರಾ ಕುಗ್ರಾಮ. ಇದರ ಸುತ್ತಲೂ ಅಲೆವೂರು, ಮೂಡುಬೆಳ್ಳೆ, ಮಣಿಪಾಲಗಳೆಂಬ ಉತ್ತಮ ಸೌಕರ್ಯಗಳಿಂದ ಕೂಡಿದ ಪಟ್ಟಣಗಳಿವೆ. ಈ ಊರಿನಲ್ಲಿ ಸರಿಯಾದ ಅಂಗಡಿಗಳೂ ಇಲ್ಲ. ಅವಶ್ಯಕ ವಸ್ತುಗಳಿಗಾಗಿ ಉಡುಪಿಗೆ ಹೋಗಬೇಕು. ಅಲೆವೂರಿನನಿಂದ ಮರ್ಣೆಗೆ ಮುಖ್ಯ ಸಂಪರ್ಕ ರಸ್ತೆ ಇದೆ. ಎಲ್ಲಾ ವಾಹನಗಳೂ ಈ ದಾರಿಯಿಂದ ಬರಬೇಕು. ಸುಮಾರು ಆರು ಕಿ.ಮೀ. ಉದ್ದದ ರಸ್ತೆ ಸಂಪೂರ್ಣ ಕೆಟ್ಟು ಹೋಗಿ ವಾಹನಗಳು ಚಲಿಸಲಾರದ ಸ್ಥಿತಿಯಲ್ಲಿದ್ದವು. ಈ ಊರಿನ ಜನರು ಮೇಲಿಂದ ಮೇಲೆ ಮನವಿ ಕೊಟ್ಟು ಒತ್ತಡ ಹಾಕಿದ ಪರಿಣಾಮ ಆಗ ಹೊಸದಾಗಿ ಆಯ್ಕೆಯಾದ ಎಂ.ಎಲ್.ಎ 10 ವರ್ಷಗಳ ಹಿಂದೆ ಈ ರಸ್ತೆಗೆ ಡಾಮರು ಹಾಕಿಸಿದರು. ನಂತರ ಈ ದಾರಿಯಲ್ಲಿ ಕೆಲವು ಬಸ್ಸುಗಳು ಓಡಾಡಲು ಆರಂಭಿಸಿದವು. ಆದರೆ ಕಳಪೆ ರಸ್ತೆ ಕಾಮಗಾರಿ ನಡೆಸಿದ್ದರಿಂದ ಡಾಮರು ಮಾಯವಾಗಿ ರಸ್ತೆಯಲ್ಲಿ ಅಲ್ಲಲ್ಲಿ ಹೊಂಡ ಬಿದ್ದು, ಜೆಲ್ಲಿ ಎದ್ದು ಕಜ್ಜಿ ಕಾಯಿಲೆಯವರಂತೆ ಕಾಣತೊಡಗಿತು. ಅಂದಿನಿಂದಲೂ ಈ ಊರಿನ ಜನರು, ಯುವಕರು, ಯುವಕ ಸಂಘಗಳು, ಭಜನಾ ಮಂಡಳಿಗಳು, ಕ್ರಿಕೆಟ್ ಕ್ಲಬ್‌ಗಳ ಮೂಲಕ ಶಾಸಕರಿಗೆ, ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ, ಅಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ, ರಾಜ್ಯದ ಮಂತ್ರಿಗಳಿಗೆ ಮನವಿ ಕೊಡುತ್ತಾ ಬಂದರೂ, ಪತ್ರ ವ್ಯವಹಾರಗಳ ಫೈಲ್ ದಪ್ಪವಾಗಿ ಬೆಳೆದರೂ ರಸ್ತೆ ಮಾತ್ರ ಶಾಪ ಮುಕ್ತವಾಗಲಿಲ್ಲ. ಈ ರಸ್ತೆಯಲ್ಲಿ ಓಡಾಡುವ ಬಸ್ಸುಗಳು ಕೆಲವು ಟ್ರಿಪ್ ಕಡಿತ ಮಾಡಿದವು. ಮಳೆಗಾಲದಲ್ಲಿ ಕೆಲವು ಬಸ್ಸುಗಳು ಓಡಾಟವನ್ನೇ ನಿಲ್ಲಿಸಿದವು.

ಈ ರಸ್ತೆಗೆ ಅಡ್ಡವಾಗಿ ಒಂದು ಹೊಳೆ ಇದೆ. ಈ ಹೊಳೆಗೆ ಹಾಕಿದ ಸೇತುವೆ ಸ್ವಲ್ಪ ಎತ್ತರದಲ್ಲಿದ್ದು, ವಾಹನದ ಓಡಾಟಕ್ಕೇನೂ ತೊಂದರೆ ಇರಲಿಲ್ಲ. ಆದರೂ ಜಿಲ್ಲಾ ಪಂಚಾಯತ್ ಸೇತುವೆಯ ಎರಡೂ ಬದಿಗಳ ರಸ್ತೆಯನ್ನು ಎತ್ತರಿಸಲಾಯಿತು. ಆದರೆ ಈ ಪ್ರದೇಶದ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರೊಬ್ಬರು ಈ ರಸ್ತೆ ಎತ್ತರಿಸುವ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ವಿವಾದ ಎಬ್ಬಿಸಿದ್ದರಿಂದ ಇದರ ಕೆಲಸ ಅಲ್ಲಿಗೆ ನಿಂತಿತು. ಮೊದಲೇ ಹೊಂಡಗಳಿಂದ ಕೂಡಿದ ಈ ರಸ್ತೆಯಲ್ಲಿ ವಾಹನ ಸಂಚರಿಸುವಾಗ ಮಣ್ಣಿನ ಧೂಳು ಹೊಗೆಯಂತೆ ಮೇಲೆಳುತ್ತಿತ್ತು. ಮಳೆಗಾಲದಲ್ಲಿ ಹಲವಾರು ವಾಹನಗಳು ಜಾರಿ 10-12 ಅಡಿ ಆಳದ ಗದ್ದೆಗೆ ಬಿದ್ದದ್ದೂ ಇದೆ. ಉಡುಪಿ ಜಿಲ್ಲಾ ಪಂಚಾಯತ್‌ನಲ್ಲಿ ಹಲವಾರು ರಸ್ತೆ ಕಾಮಗಾರಿಯನ್ನು ನಡೆಸದೇ ಬಿಲ್ಲು ಮಂಜೂರು ಮಾಡಿಸಿ ಲಕ್ಷಾಂತರ ಹಣ ವಂಚನೆ ಆಗಿರುವುದನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಅಶೋಕ್ ಕುಮಾರ್ ಹೆಗ್ಡೆಯವರು ತನಿಖೆ ನಡೆಸಿ ವಿವಾದ ದಾಖಲಿಸಿದ್ದರು.

ಮರ್ಣೆಯ ಕೆಲವು ಯುವಕರು ಮಂಗಳೂರಿನಲ್ಲಿ ಉದ್ಯೋಗ ಮಾಡಿಕೊಂಡಿದ್ದರು. ಮಂಗಳೂರಿನಲ್ಲಿ ಆಗಾಗ ನಡೆಯುವ ಡಿ.ವೈ.ಎಫ್.ಐ. ನ ಚಟುವಟಿಕೆ ನೋಡಿದ ಈ ಯುವಕರು ಅದರ ಮುಖಂಡರನ್ನು ಮರ್ಣೆ ಆಹ್ವಾನಿಸಿ, ಒಂದು ಡಿ.ವೈ.ಎಫ್.ಐ ಘಟ ಸ್ಥಾಪಿಸಿದರು. ಇದರ ನೇತೃತ್ವದಲ್ಲಿ ಊರಿ ಯುವಕರನ್ನು ಒಂದುಗೂಡಿಸಿ ಈ ರಸ್ತೆಯ ಶಾ ವಿಮೋಚನೆಗೆ ಪ್ರತಿಜ್ಞೆಗೈದ ಕಾರ್ಯೋನ್ಮುಖರಾದರು. ಡಿ.ವೈ.ಎಫ್.. ಹೆಸರಿನಲ್ಲಿ ಶಾಸಕರಿಗೆ, ಜಿಲ್ಲಾಧಿಕಾರಿಗೆ ಮ ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಪತ್ರ ಬರೆ ಎಚ್ಚರಿಸುವ ಕೆಲಸ ಮಾಡಿದರು. ಅಧಿಕಾರಿಗ ಈ ಮನವಿಯನ್ನು ಕಸದ ಬುಟ್ಟಿಗೆ ಎಸೆದರ ಡಿ.ವೈ.ಎಫ್.ಐ ನ ಕಾರ್ಯಕರ್ತರು ಮ ಸುಮ್ಮನಿರದೆ ಛಲ ಹಿಡಿದ ನಕ್ಷತ್ರಿಕನಂತೆ ಬೆ ಹಿಡಿದು ಕಾಡಲಾರಂಭಿಸಿದರು.

ಫೆಬ್ರವರಿ 4 ರಂದು ಮರ್ಣೆಗೆ ಬರುವ ಎ ಬಸ್ಸುಗಳ ಓಡಾಟ ನಿಲ್ಲಿಸಿ, 9 ಕಿ.ಮೀ. ದೂ ಉಡುಪಿಗೆ ಯುವಕರು, ಯುವತಿಯ ಕಾರ್ಮಿಕರು, ವಿದ್ಯಾರ್ಥಿಗಳು ಬಂದು ತಾಲೂ ಕಛೇರಿ ಬಳಿ ಒಟ್ಟು ಸೇರಿ ಸುಮಾರು ಮುನ್ನೂರ

ಪುಟ 8

ಗುಜರಾತ್‌ನ ವಡೋದರದ 'ಬೆಸ್ಟ್ ಬೇಕರಿ' ಹತ್ಯಾಕಾಂಡ ಎಲ್ಲರ ಕಣ್ಣೆದುರೇ ನಡೆದು ಹೋದ ಘಟನೆ. ಆದರೀಗ ಅಪರಾಧಿಗಳು ಖುಲಾತೆಯಾಗಿದ್ದಾರೆ! ಭೀಕರ ನರಹತ್ಯೆಗಳ ತನಿಖೆಯ ನ್ಯಾಯ ಪ್ರಕ್ರಿಯೆಯನ್ನೇ ಬುಡಮೇಲಮಾಡಲು ಮೋದಿ ಪಡೆ ತೊಡಗಿದೆ. ಈ ಫ್ಯಾಸಿಸ್ಟ್ ಸಂತತಿಯ ಕಾರ್ಯಯೋಜನೆ ಏನು?

ಬೆಸ್ಟ್ ಬೇಕರಿ ಘಟನೆಯ ತೀರ್ಪು

ನ್ಯಾಯ ಪ್ರಕ್ರಿಯೆಯೇ ಬುಡಮೇಲು

ಪ್ರಜಾಪ್ರಭುತ್ವದ ವಿವಿಧ ಅಂಗಗಳನ್ನು, ಸಂಸ್ಥೆಗಳನ್ನು ಬುಡಮೇಲು ಮಾಡುವುದು ಫ್ಯಾಸಿಸಂನತ್ತ ಸಾಗುತ್ತಿರುವುದರ ಲಕ್ಷಣಗಳು. ಈ ಪ್ರಕ್ರಿಯೆಯನ್ನು ನಾವೀಗಾಗಲೆ ಕಾಣುತ್ತಿದ್ದೇವೆ. ಇದೀಗ ನ್ಯಾಯಾಂಗದ ಸರದಿ. ನ್ಯಾಯ ನೀಡುವ, ಕಾನೂನಿನ ಆಳ್ವಿಕೆಯನ್ನು ಎತ್ತಿ ಹಿಡಿಯುವ ಕೆಲಸ ಮಾಡಬೇಕಾಗಿರುವ ಸಂಸ್ಥೆಯೇ ವಿಫಲವಾದಾಗ ಜನರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಹೊರಟುಹೋದರೆ ಆಶ್ಚರ್ಯವಿಲ್ಲ. ತಮಾಷೆಯೆಂದರೆ ಇದು ಕೂಡಾ ಫ್ಯಾಸಿಸಂನ ಉನ್ನತಿಗೆ ಅನುವು ಮಾಡಿಕೊಡುತ್ತದೆ.

ಗುಜರಾತಿನ ವಡೋದರಾದಲ್ಲಿನ ಕುಖ್ಯಾತ, ಭೀಕರ ಬೆಸ್ಟ್ ಬೇಕರಿ ಹತ್ಯಾಕಾಂಡದ ಆಪಾದಿತರನ್ನೆಲ್ಲಾ ಬಿಡುಗಡೆ ಮಾಡಿರುವ ಬಗ್ಗೆ ನಾವಿಲ್ಲಿ ಮಾತನಾಡುತ್ತಿದ್ದೇವೆ. ಗುಜರಾತ್ ಗಲಭೆಗಳ ವೇಳೆ ಈ ಘಟನೆಯಲ್ಲಿ 14 ಮಂದಿಯಲ್ಲಿ 11 ಮುಸಲ್ಮಾನರು, 3 ಹಿಂದೂಗಳು - ಜೀವಂತ ಭಸ್ಮವಾದರು. ಗೋಧ್ರಾ ರೈಲಿನ ಬೆಂಕಿಯ ನಂತರ ಗುಜರಾತಿನಲ್ಲಿ ನಡೆದ ಸರಕಾರ-ಪ್ರಾಯೋಜಿತ ಕೋಮುವಾದಿ ನರಹತ್ಯೆಗಳಲ್ಲಿ ಈ ಘಟನೆ ಹೆಚ್ಚು ಗಮನಸೆಳೆದ ಎಲ್ಲಾ ರೀತಿಯ ದಸ್ತಾವೇಜು, ಸಾಕ್ಷಿಗಳನ್ನು ಪಡೆದಿದ್ದ ಘಟನೆಗಳಲ್ಲಿ ಒಂದು. ಇದರಲ್ಲಿ ಬದುಕುಳಿದವರು ಹಲ್ಲೆಕೋರರ ಹೆಸರನ್ನು ಸಾರ್ವಜನಿಕವಾಗಿಯೇ ಹೇಳಿದರು, ಮಾನವ ರಾಷ್ಟ್ರೀಯ ಹಕ್ಕು ಆಯೋಗ (NHRC)ಕ್ಕೆ ಅರ್ಜಿ ಸಲ್ಲಿಸಿದರು, ನಾಗರಿಕ ನ್ಯಾಯಮಂಡಳಿಯೆದುರು ಅಫಿಡೆವಿಟ್ ಸಲ್ಲಿಸಿದರು, ಅದರಲ್ಲಿ ಕೆಲವರು ಭಯ, ಅಭದ್ರತೆಯ ನಡುವೆಯೂ ದಿಲ್ಲಿಯ


ಹತ್ತಿ ಉರಿಯುತ್ತಿರುವ ಗೋಧ್ರಾ

ವರೆಗೂ ಪ್ರಯಾಣ ಮಾಡಿ ರಾಷ್ಟ್ರೀಯ ಮಾಧ್ಯಮದೊಡನೆ ಮಾತನಾಡಿದರು. ರಾಷ್ಟ್ರೀಯ ಮಾನವ ಹಕ್ಕು ಆಯೋಗ 5 ಘಟನೆಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಕೇಳಿತ್ತು. ಅವುಗಳಲ್ಲಿ ಇದೂ ಒಂದು. ಮೋದಿ ಸರಕಾರ ನಿರಾಕರಿಸಿತು ಎಂದು ಬೇರೆ ಹೇಳಬೇಕಾಗಿಲ್ಲ.

ಸಾಕ್ಷಿಗಳಿಗೆ ಬೆದರಿಕೆ

ಈ ಘಟನೆಯ ವಾಸ್ತವಾಂಶಗಳನ್ನು ನೆನಪಿಸಿಕೊಳ್ಳೋಣ. ಗುಜರಾತ್ ಗಲಭೆಗಳಲ್ಲಿ ರಾಜ್ಯಾದ್ಯಂತ ಮುಸ್ಲಿಂ ಒಡೆತನದ ಹಲವಾರು ಬೇಕರಿಗಳನ್ನು ಸುಟ್ಟು ಹಾಕಲಾಯಿತು. ಇದರಲ್ಲಿ ಸಾವಿರಾರು ಮುಗ್ಧ ಜನ ಬಲಿಯಾದರು. ಈ ಕೇಸಿನ ವಿಚಾರಣೆ ಮೇ 9 ರಂದು ಆರಂಭವಾಯಿತು, ಜೂನ್ 20 ರಂದು ಮುಕ್ತಾಯಗೊಂಡಿತು. 120 ಸಾಕ್ಷಿಗಳ ಪಟ್ಟಿಯಲ್ಲಿ 73 ಮಂದಿ ಮಾತ್ರ ಸಾಕ್ಷ್ಯ ಹೇಳಿದರು. ಅವರಲ್ಲಿ 41 ಮಂದಿ ತಾವು ಹಿಂದೆ ಹೇಳಿರುವುದನ್ನು ನಿರಾಕರಿಸಿದರು. ಇದರಿಂದಾಗಿಯೇ ಕೇಸು ಬಿದ್ದು ಹೋದದ್ದು. ಮುಖ್ಯ ಸಾಕ್ಷಿ, ಝಹೀರಾ ಶೇಕ್, ಈ ಬೇಕರಿಯ ಮಾಲಿಕನ ಮಗಳು ಕೋರ್ಟಿಗೆ ಬಂದಾಗ ಜತೆಗೆ ಬಿಜೆಪಿ ಶಾಸಕ ಮಧು ಶ್ರೀವಾಸ್ತವ ಇದ್ದರು. ಆಕೆ ತಾನು ಹಿಂದೆ ಹಾಕಿದ ಆಪಾದನೆಗಳನ್ನು ನಿರಾಕರಿಸಿದಳು. ಆನಂತರ ಆಕೆಯ ನಾಪತ್ತೆ ರಹಸ್ಯಮಯ. ದೂರು ಕೊಟ್ಟ, ಸಾಕ್ಷಿ ಹೇಳಲು ಮುಂದೆ ಬಂದ ಎಲ್ಲರನ್ನು ಹೆದರಿಸಿ, ಬೆದರಿಸಿ ಅವರು ಸತ್ಯ ಹೇಳದಂತೆ ಮಾಡಲಾಗಿದೆ ಎಂಬುದಕ್ಕೆ ಇಷ್ಟೇ ಸಾಕು. ಬೇರೇನೂ ಸಾಕ್ಷ್ಯಾಧಾರ ಬೇಕಿಲ್ಲ. ಕಳೆದ ವರ್ಷ ರಾಕ್ಷಸೀ ಕೋಮುದಂಗೆಗಳ ಅನುಭವದ ನಂತರ ಅವರು ಇಂತಹ ಭಯ-ಬೆದರಿಕೆಗಳಿಗೆ ಬಲಿಯಾಗಿರುವುದು ನಿಜಕ್ಕೂ ದುರದೃಷ್ಟಕರ. ಅದರಲ್ಲೂ ವಿಶೇಷವಾಗಿ ಸಾರ್ವಜನಿಕವಾಗಿ ದಾಖಲಾದ, ವರದಿಯಾದ ಅಪರಾಧಗಳನ್ನು ಎಸಗಿರುವವರನ್ನು ಸರಕಾರ, ಆಡಳಿತ ಮತ್ತು ಪೊಲೀಸರೇ ಬಹಿರಂಗವಾಗಿ ರಕ್ಷಿಸುತ್ತಿರುವಾಗ.

ಸಾಕ್ಷಿಗಳನ್ನು ಹೆದರಿಸಿ, ಬೆದರಿಸಿ ಆಪಾದಿತರ ಖುಲಾಸೆ ಮಾಡಿಸಿದ್ದಲ್ಲದೇ, ಇದರಲ್ಲಿ ರಾಜ್ಯ ಪೋಲೀಸರ ಪಾತ್ರವನ್ನು ಗಮನಿಸಬೇಕು. ಗೋದ್ರಾ- ನಂತರದ ಗಲಭೆಗಳು 'ಸ್ವಯಂ ಸ್ಫೂರ್ತಿಯಿಂದ, ಅಸಂಘಟಿತವಾಗಿ' ನಡೆದವುಗಳು ಎಂಬ ನರೇಂದ್ರ ಮೋದಿ ಸರಕಾರದ ಅಧಿಕೃತ ವಿವರಣೆಯನ್ನೇ ಹಿಡಕೊಂಡು ಪೊಲೀಸರು ಆರಂಭದಿಂದಲೇ ಈ ಅಪರಾಧಗಳನ್ನು ಮುಚ್ಚಿ ಹಾಕುವಲ್ಲಿ ಅಪರಾಧಿಗಳನ್ನು ರಕ್ಷಿಸುವ ಪಾತ್ರವಹಿಸಿದರು. ಎಫ್‌ಐಆರ್ ದಾಖಲು ಮಾಡಲು ನಿರಾಕರಿಸುವುದು, ಗಂಭೀರ ಆಪಾದನೆಗಳನ್ನು ನಿಯಮಿತವಾಗಿ ಸಡಿಲಗೊಳಿಸುವುದು, ಬಲಿಯಾದವರ ಹೇಳಿಕೆಗಳನ್ನು ಬದಲಿಸುವುದು, ಆಪಾದಿತರ ಹೆಸರುಗಳನ್ನು ಕೈಬಿಡುವುದು ಇತ್ಯಾದಿಗಳ ಮೂಲಕ ಭಾರತ ಇತ್ತೀಚಿನ ವರ್ಷಗಳಲ್ಲಿ ಕಂಡ ಅತ್ಯಂತ ಭೀಕರ ಕೋಮು ಹತ್ಯಾಕಾಂಡದಲ್ಲಿ ನ್ಯಾಯ ಸಿಗದಂತೆ ಮಾಡಲಾಗಿದೆ. ಎಲ್ಲಾ 21 ಆಪಾದಿತರನ್ನು ಖುಲಾಸೆ ಮಾಡಿದ ನ್ಯಾಯಾಧೀಶರು ತಮ್ಮ ಪ್ರಹಸನದಲ್ಲಿ ಹೀಗೆ ವರ್ಣಿಸಿದ್ದಾರೆ-"ಈ ಘಟನೆಯಲ್ಲಿ ಒಂದು ಹಿಂಸಾತ್ಮಕ ಜನಜಂಗುಳಿ 14 ಜನಗಳ ಸಾವಿಗೆ ಕಾರಣವಾಯಿತು ಎಂಬುದು ಪ್ರಶ್ನಾತೀತ. ಆದರೆ ಈ ಅಪರಾಧಗಳಲ್ಲಿ ಆಪಾದಿತರು ಒಳಗಾಗಿರುವುದಕ್ಕೆ ಲೇಶಮಾತ್ರ ಸಾಕ್ಷಿಯೂ ಇಲ್ಲ"

ನ್ಯಾಯ ನೀಡುವ ವ್ಯವಸ್ಥೆಯನ್ನು ಬುಡಮೇಲು ಮಾಡುವಲ್ಲಿ ರಾಜ್ಯ ಆಡಳಿತವೇ ಭಾಗಿಯಾಗಿರುವುದರ ಒಂದು ಸ್ಪಷ್ಟ ಉದಾಹರಣೆಯಿದು. ನ್ಯಾಯವ್ಯವಸ್ಥೆಯನ್ನು ಈ ರೀತಿ ಧೂಳೀಪಟ ಮಾಡುವುದರ ಬಗ್ಗೆ ಪ್ರಮುಖ ರಾಷ್ಟ್ರೀಯ ದೈನಿಕಗಳು ಬಲವಾದ ರೀತಿಯಲ್ಲಿ ಅಳಲನ್ನು ವ್ಯಕ್ತಪಡಿಸಿದ್ದರೆ ಆಶ್ಚರ್ಯವಿಲ್ಲ.

ಸಂಬಂಧಪಟ್ಟ ನ್ಯಾಯಾಧೀಶ 21 ಆಪಾದಿತರು ಮುಗ್ಧರು ಎಂದು ನಂಬುವುದಾದರೆ, ನಿಜವಾದ ಅಪರಾಧಿಗಳು ಯಾರು, ಎಲ್ಲಿದ್ದಾರೆ ಎಂಬುದಕ್ಕೆ ಉತ್ತರ ಕೊಡಬೇಕಾಗಿದೆ. ಅವರನ್ನು ರಕ್ಷಿಸುತ್ತಿರುವವರನ್ನೂ ಶಿಕ್ಷಿಸಬೇಕಾಗಿದೆ.

ಸಿಬಿಐ ಗಾದರೂ ಒಪ್ಪಿಸಿ

ರಾಷ್ಟ್ರೀಯ 'ಮಾನವ ಹಕ್ಕು ಆಯೋಗ ಸೂಚಿಸಿರುವಂತೆ ಗುಜರಾತಿನ ಕೋಮು ಹತ್ಯಾಕಾಂಡದ ಎಲ್ಲಾ ಕೇಸುಗಳನ್ನು ಸಿಬಿಐಗೆ ಒಪ್ಪಿಸಬೇಕಾದ ಸಮಯವೀಗ ಬಂದಿದೆ. ಸಿಬಿಐ ಎಲ್.ಕೆ.ಅಡ್ವಾಣಿ ನೇತೃತ್ವದ ಗೃಹ ಇಲಾಖೆ ಅಡಿಯೇ ಬರುವಾಗ ಇದಕ್ಕಿಂತ ಉತ್ತಮ ನ್ಯಾಯ ಸಿಗಬಹುದೆಂದು ನಿರೀಕ್ಷಿಸುವುದು ಕಷ್ಟ ಎಂದು ಸಿನಿಕರು ವಾದಿಸಬಹುದು. ಏಕೆಂದರೆ ಕೇಂದ್ರ ಸರ್ಕಾರದ ಆಶೀರ್ವಾದ ಮತ್ತು ಶಾಮೀಲು ಇಲ್ಲದೆ ರಾಜ್ಯ ಸರ್ಕಾರ ಗುಜರಾತಿನಲ್ಲಿ ಅಲ್ಪಸಂಖ್ಯಾತರ ವಿರುದ್ಧ ಇಷ್ಟೊಂದು ವ್ಯಾಪಕ ಪ್ರಮಾಣದಲ್ಲಿ ಹತ್ಯಾಕಾಂಡಗಳನ್ನು ಯೋಜಿಸಲು, ನಡೆಸಲು ಸಾಧ್ಯವಾಗುತ್ತಿರಲಿಲ್ಲ ತಾನೆ? ಹೀಗಿರುವಾಗ ಸಾರ್ವಜನಿಕ ಒತ್ತಡದಿಂದ ಮಾತ್ರವೇ ಅಪರಾಧಿಗಳನ್ನು ಶಿಕ್ಷೆಗೊಳಪಡಿಸುವುದು, ಸ್ವಲ್ಪ ಮಟ್ಟಿನ ನ್ಯಾಯವನ್ನಾದರೂ ಕೊಡಲು ಸಾಧ್ಯ. ವ್ಯವಸ್ಥೆಯಲ್ಲಿ ಎಷ್ಟೇ ಅಡ್ಡಿ-ಆತಂಕಗಳಿದ್ದರೂ ಸಿಬಿಐ ನಿಂದ ಒಂದು ನಿಷ್ಪಕ್ಷಪಾತ ತನಿಖೆ ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವಲ್ಪ ನಂಬಿಕೆಯನ್ನು ಮತ್ತೆ ಹುಟ್ಟಿಸುವತ್ತ ನೆರವಾಗಬಹುದು.

ಸರ್ಕಾರದ ಶಾಮೀಲು

ಈ ಮೊಕದ್ದಮೆಯಲ್ಲಿ ಆಪಾದಿತರ ಖುಲಾಸೆಯಲ್ಲಿ ಮೋದಿ ಸರ್ಕಾರದ ಶಾಮೀಲಿನ ಬಗ್ಗೆ ಇನ್ನೂ ದೃಢೀಕರಣ ಬೇಕಿದ್ದರೆ ಅದು ಕೂಡಾ ಮತ್ತೆ ರಾಷ್ಟ್ರೀಯ ಮಾನವ ಹಕ್ಕು ಆಯೋಗದಿಂದ ಬಂದಿದೆ. ಜೂನ್ 30 ರಂದು ಆಯೋಗ "ಒಂದು ವಾರದೊಳಗೆ ವಿಚಾರಣಾ ನ್ಯಾಯಾಲಯದ ತೀರ್ಪಿನ ಪ್ರತಿಯನ್ನು ಕಳಿಸಬೇಕು ಮತ್ತು ಖುಲಾಸೆಯ ಆದೇಶದ ವಿರುದ್ಧ ಗುಜರಾತ್ ಸರ್ಕಾರ ಯಾವುದಾದರೂ ಕ್ರಮ ಕೈ ಗೊಳ್ಳಲು ಸಿದ್ಧವಾಗು ತ್ತಿದ್ದರೆ ಅವನ್ನು ಆಯೋಗಕ್ಕೆ ತಿಳಿಸಬೇಕು" ಎಂದು ಗುಜರಾತಿನ ಮುಖ್ಯ ಕಾರ್ಯದರ್ಶಿಗೆ ಆದೇಶವಿತ್ತಿದೆ.

ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎ.ಎಸ್. ಆನಂದ್ ರವರು ಒಂದು ಖಾಸಗೀ ಟಿ.ವಿ. ಚಾನಲ್‌ನೊಂದಿಗೆ ಮಾತನಾಡುತ್ತಾ ಬೆಸ್ಟ್ ಬೇಕರಿ ಮೊಕದ್ದಮೆಯಲ್ಲಿ ಎಲ್ಲಾ 21 ಆಪಾದಿತರ ಖುಲಾಸೆ "ನ್ಯಾಯದ ಗರ್ಭಪಾತ' ಎಂದು ಮೇಲ್ನೋಟಕ್ಕೆ ಕಾಣುತ್ತದೆ ಎಂದು ತಾನು ನಂಬಿರುವುದಾಗಿಯೂ, ರಾಜ್ಯ ಸರ್ಕಾರ ಈ ತೀರ್ಪಿನ ವಿರುದ್ಧ ಅಪೀಲು ಹೋಗಬೇಕೆಂದೂ ಹೇಳಿದ್ದಾರೆ.

ಈ ಮೊಕದ್ದಮೆಯಲ್ಲಿ ಇದು ಆಯೋಗದ ಮೂರನೇ ಮಧ್ಯಪ್ರವೇಶ. ಈ ಹಿಂದೆ ಈ ಮೊಕದ್ದಮೆಯನ್ನು ಸಿಬಿಐಗೆ ಒಪ್ಪಿಸಬೇಕೆಂದು ರಾಜ್ಯಸರ್ಕಾರಕ್ಕೆ ಹೇಳಿತ್ತು. ರಾಜ್ಯ ಸರ್ಕಾರ ನಿರಾಕರಿಸಿದಾಗ ಈ ಹತ್ಯಾಕಾಂಡದಲ್ಲಿ ಬದುಕುಳಿದವರು ಮತ್ತು ಸಾಕ್ಷಿಗಳಿಗೆ ಸಾಕಷ್ಟು ರಕ್ಷಣೆ ಕೊಡಬೇಕು ಎಂದು ರಾಜ್ಯ ಪೋಲೀಸ್ ಮಹಾನಿರ್ದೇಶಕರಿಗೆ ನಿರ್ದೇಶನ ನೀಡಿತ್ತು. ಈ ನಿರ್ದೇಶನಗಳ ಪರಿಣಾಮ ಎಲ್ಲರ ಕಣ್ಣಮುಂದಿದೆ. ಮೋದಿ ಸರ್ಕಾರ ನಿರ್ಭಯವಾಗಿ ಈ ಎಲ್ಲಾ ನಿರ್ದೇಶನಗಳನ್ನು ತಿರಸ್ಕರಿಸಿದೆಯಷ್ಟೇ ಅಲ್ಲ, ಸಾಕ್ಷಿಗಳನ್ನು ಬೆದರಿಸಿ ನ್ಯಾಯ ನೀಡಿಕೆ ನಿಷ್ಪ್ರಯೋಜಕವಾಗುವಂತೆ ಮಾಡಿದೆ. ಸರಳವಾಗಿ ಹೇಳುವುದಾದರೆ ಮೋದಿ ಸರ್ಕಾರ ನ್ಯಾಯ ಪ್ರಕ್ರಿಯೆಯನ್ನು ಬುಡಮೇಲು ಮಾಡಿದೆ.

ಹಿಂದೂ ವೋಟ್ ಬ್ಯಾಂಕ್ ರಾಜಕಾರಣ

ಒಂದೆಡೆ ಗೋಧ್ರಾ ಘಟನೆಯ ಆಪಾದಿರನ್ನೆಲ್ಲಾ ಪೋಟಾದಡಿ ಬಂಧಿಸಿಟ್ಟು, ಇನ್ನೊಂದೆಡೆ ನಂತರ ನಡೆದ ಕೋಮುವಾದಿ ಹತ್ಯಾಕಾಂಡಕ್ಕೆ ಕಾರಣರಾದವರನ್ನು ನಿರ್ಭಯವಾಗಿ ತಿರುಗಾಡಿಕೊಂಡಿರಲು ಅವಕಾಶ ಮಾಡಿಕೊಟ್ಟಿರುವ ಸಂಗತಿಯಿಂದ ಆರ್‌ಎಸ್‌ಎಸ್/ ಬಿಜೆಪಿ ದೇಶಕ್ಕೆ ಏನು ಸಂದೇಶ ನೀಡಬಯಸುತ್ತಿದೆ ಎಂಬುದು ಸ್ಪಷ್ಟ. ಹಿಂದೂ ವೋಟ್ ಬ್ಯಾಂಕನ್ನು ಕ್ರೋಢೀಕರಿಸಲು ಪ್ರಯತ್ನಿಸುತ್ತಿರುವ ರೀತಿಯಿದು. ಈ ಸಾವಿನ ವ್ಯಾಪಾರಿಗಳು ತಮ್ಮ ಚುನಾವಣಾ ಲಾಭಕ್ಕೆ ಕೊಲೆ, ಸುಲಿಗೆ, ಅತ್ಯಾಚಾರಗಳನ್ನು ಸರಕುಗಳಾಗಿ ಬಳಸುತ್ತಿದ್ದಾರೆ.

ದೇಶಕ್ಕೆ ಅಪಾಯ ಬಂದಿರುವುದು ಚುನಾವಣಾ ಪ್ರಯೋಜನ ಗಿಟ್ಟಿಸುವ ಪ್ರಯತ್ನವಾಗಿ ಕೋಮುವಾದಿ ಧ್ರುವೀಕರಣ ತಂದು, ಆ ಮೂಲಕ ಆಳವಾದ ಕೋಮುವಾದಿ ದ್ವೇಷ ಮತ್ತು ವಿಷ ಹರಡುವ ದಾರಿ ಹಿಡಿದಿರುವುದರಿಂದಷ್ಟೇ ಅಲ್ಲ, ನಿಜವಾದ ಆದಾಯವೆಂದರೆ ಇಂತಹ ಚುನಾವಣಾ ಪ್ರಯೋಜನ ಹಾಗೂ ಆ ಮೂಲಕ ಪ್ರಭುತ್ವದ ಮೇಲೆ ಗಳಿಸಿದ ಹತೋಟಿಯನ್ನು ನಮ್ಮ ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಭಾರತೀಯ ಗಣರಾಜ್ಯವನ್ನು ಒಂದು ಉನ್ಮತ್ತ, ಅಸಹಿಷ್ಣು ಮತ್ತು ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ' ವಾಗಿ ರೂಪಾಂತರಗೊಳಿಸಲು ಬಳಸಲಾಗುತ್ತಿದೆ ಎಂಬುದರಿಂದ ನಿಜವಾದ ಅಪಾಯ ಕಾದಿದೆ. ನಾವಿಂದು ತಿಳಿದಿರುವ ಭಾರತ ಬದುಕುಳಿಯಬೇಕಾದರೆ ಈ ರೂಪಾಂತರವನ್ನು ಮಧ್ಯದಲ್ಲಿಯೇ ತಡೆದು ನಿಲ್ಲಸಬೇಕಾಗಿದೆ.

ಗುಜರಾತಿನಲ್ಲಿ ವಿಕೃತ ನ್ಯಾಯ

ಗುಜರಾತಿನ ಹತ್ಯಾಕಾಂಡ ಜನರ ನೆನಪಿಂದ ಇನ್ನು ಮಾಸಿಲ್ಲ. ಆದರೆ ವಡೋದರ ನಗರದ ಬೆಸ್ಟ್ ಬೇಕರಿಯಲ್ಲಿ ನಡೆದ ಕೊಲೆಯ ಆರೋಪಿಗಳನ್ನು ಆರೋಪದಿಂದ ವಿಮುಕ್ತಗೊಳಿಸಲಾಗಿದೆ. ಹತ್ಯೆಗೀಡಾದವರ ಪೈಕಿ ಮೂವರು ಮಹಿಳೆಯರು ಮತ್ತು ಇಬ್ಬರು ಮಕ್ಕಳೂ ಸೇರಿದ್ದರು. ಎಲ್ಲಿದೆ ನ್ಯಾಯ? ಸಾಕ್ಷಿಗಳಿಗೆ ಬೆದರಿಕೆ, ಆಮಿಷ ತೋರಿಸುವುದರ ಮೂಲಕ, ಪೊಲೀಸ್ ಇಲಾಖೆಯ ನಿರ್ಲಕ್ಷ್ಯ ಧೋರಣೆಯಿಂದಾಗಿ ಹಾಗೂ ಪ್ರಾಸಿಕ್ಯೂಷನ್ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೆ ಇದ್ದುದರಿಂದ, ಜನರ ಎದುರೇ ಘೋರ ಕೃತ್ಯ ನಡೆದರು ಆರೋಪಿಗಳು ನಿರ್ಭೀತಿಯಿಂದ ಅಲೆದಾಡುವಂತಾಗಿದೆ. ಬಿಜೆಪಿ ನೇತೃತ್ವದ ಮೋದಿ ಸರ್ಕಾರವು ಆರೋಪಿಗಳೊಂದಿಗೆ ಷಾಮೀಲಾಗಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಬೆಸ್ಟ್ ಬೇಕರಿ ಕೇಸಿನಿಂದ ಒಂದು ವಿಷಯವಂತೂ ಸ್ಪಷ್ಟ. ಬಿಜೆಪಿ ನೇತೃತ್ವದ ಸರಕಾರದ ಅಡಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಕನಸಿನ ಮಾತು.

ಈ ತೀರ್ಪಿನ ವಿರುದ್ಧ ಸೂಕ್ತ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಬೇಕೆಂದು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಒತ್ತಾಯಿಸಿದೆ.



ವಿಶ್ವಸಂಸ್ಥೆಯ ನಿರ್ಣಯವನ್ನು ಉಲ್ಲಂಘಿಸಿ, ಜಗತ್ತಿನ ಜನರ ಆಗ್ರಹ ಧಿಕ್ಕರಿಸಿ ಇರಾಕ್ ಮೇಲೆ ದುರಾಕ್ರಮಣ ನಡೆಸಿ, ದೌರ್ಜನ್ಯ ಹತ್ಯಾಕಾಂಡವನ್ನು ಹರಿಯಬಿಟ್ಟ ಅಮೆರಿಕಾ ತನ್ನ ದುಷ್ಕೃತ್ಯಗಳಲ್ಲಿ ಪಾಲುದಾರನಾಗಲು ಭಾರತವನ್ನು ಕೇಳುತ್ತಿದೆ. ಅಮೆರಿಕಾದ ಅಡಿಯಾಳಾಗಲು ಹಾತೊರೆಯುವ ವಾಜಪೇಯಿ ಸರ್ಕಾರ ಸೇನೆಯನ್ನು ಕಳಿಸಲು ಬಯಸಿದೆ !. ಅಂದರೆ ನ್ಯಾಯಕ್ಕಾಗಿ ನಿಂತ ಇರಾಕಿಗಳ ಮಾರಣಹೋಮ ! ಪ್ರತಿರೋಧದಲ್ಲಿ ನಮ್ಮ ಸೈನಿಕರ ಪ್ರಾಣಹರಣ ! ಈ ಹತ್ಯಾಕಾಂಡದಲ್ಲಿ ನಮ್ಮ ಹೆಮ್ಮೆಯ ಸೇನಾ ಪಡೆಗಳು ಭಾಗಿಯಾಗಬೇಕೆ? ಬಲಿಯಾಗಬೇಕೆ? ಅಲಿಪ್ತ ನೀತಿಗೆ ತಿಲಾಂಜಲಿ ನೀಡಿ ಅಮೆರಿಕಾದ ಅಡಿಯಾಳಾಗಬೇಕೆ? ದೇಶಪ್ರೇಮಿಗಳು ಕ್ರಿಯಾಶೀಲರಾಗಬೇಕಾದ ಕಾಲವಿದು. ಸಮಗ್ರ ವಿಶ್ಲೇಷಣೆಯ ಲೇಖನವಿಲ್ಲಿ. ಇನ್ನೊಂದು ಲೇಖನ ಇರಾಕ್‌ನಲ್ಲಿ ಕಮ್ಯುನಿಸ್ಟ್ ಪಕ್ಷದ ಕುರಿತು ನೋಟ.

ಇರಾಕ್ ಜನರ ದಮನಕ್ಕೆ ಭಾರತೀಯ ಸೇನೆ ಬೇಡ

■. ಪ್ರಕಾಶ್ ಕಾರಟ್

ಭಾರತೀಯ ಸೇನೆಯನ್ನು ಇರಾಕಿಗೆ ಕಳುಹಿಸಲು ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರವು ಪೀಠಿಕೆ ಕಂಡುಕೊಳ್ಳಲು ತೀವ್ರವಾಗಿ ಪ್ರಯತ್ನಿಸುತ್ತಿದೆ. ಕಳೆದೊಂದು ತಿಂಗಳಿನಿಂದ ವಾಜಪೇಯಿ ಸರ್ಕಾರವು ಇಕ್ಕಟ್ಟಿನ ಬೇಡಿಯಲ್ಲಿ ಸಿಕ್ಕಿಬಿದ್ದಿದೆ. ಕಳೆದ ಮೇ ತಿಂಗಳ ಆರಂಭದಲ್ಲಿ ಅಮೇರಿಕಾವು ಭಾರತೀಯ ಸೇನೆಯ ತುಕಡಿಯೊಂದನ್ನು ಇರಾಕಿಗೆ ಕಳುಹಿಸಲು ಮನವಿ ಮಾಡಿಕೊಂಡಾಗಲೇ ಅಮೇರಿಕಾ ಪರ ಲಾಬಿಯು ಒಂದು ಬಲಿಷ್ಟ ಸೇನಾ ತುಕಡಿಯೊಂದನ್ನು ಇರಾಕಿಗೆ ಕಳುಹಿಸಲು ಲಾಭಿ ಮತ್ತು ವ್ಯವಹಾರ ನಡೆಸತೊಡಗಿತು. ಈ ತುಕಡಿಗಳನ್ನು ಕಳುಹಿಸಲು ಭಾರತೀಯ ಸೇನೆ ಸಿದ್ದತೆಗಳನ್ನು ಆರಂಭಿಸಿತ್ತು. ಆದರೆ, ಅಂತಹ ಕ್ರಮಕ್ಕೆ ವಿಶಾಲ ವಿರೋಧ ಮತ್ತು ಅಸಮ್ಮತಿ ವ್ಯಕ್ತವಾದ ಕಾರಣದಿಂದಾಗಿ ಸರ್ಕಾರವು ಅಮೇರಿಕಾದಿಂದ ಸ್ಪಷ್ಟನೆಕೇಳುವ ಒತ್ತಡಕ್ಕೊಳಗಾಯಿತು. ಎಲ್.ಕೆ. ಆಡ್ವಾನಿಯವರು ಅಮೇರಿಕಾಗೆ ಬೇಟಿನೀಡಿದ ಸಂದರ್ಭದಲ್ಲಿ ಸ್ವತಃ ಅಧ್ಯಕ್ಷ ಬುಷ್ ಮತ್ತು ಬುಷ್ ಆಡಳಿತದ ಇತರೆ ಗಣ್ಯವ್ಯಕ್ತಿಗಳು ಸೇನಾ ತುಕಡಿಗಳನ್ನು ಕಳುಹಿಸಲು ತುರ್ತು ನಿರ್ಣಯ ಕೈಗೊಳ್ಳುವಂತೆ ಆಡ್ವಾನಿಯವರನ್ನು ಒತ್ತಾಯಿಸಿದರು. ಭಾರತದ ಕಡೆಯಿಂದ ಬಂದ ಪ್ರತಿಕ್ರಿಯೆ ಯಿಂದಾಗಿ ಪೆಂಟಗಾನ್‌ನ ತಂಡವೊಂದು ನವದೆಹಲಿಗೆ ಬರುವಂತಾಯಿತು.

ಸಹಾಯಕ ರಕ್ಷಣಾ ಕಾರ್ಯದರ್ಶಿ ಪೀಟರ್ ರೋದಮ್ ನೇತೃತ್ವದ ಪ್ರತಿನಿಧಿಗಳು ಜೂನ್ 10 ರಂದು ನವದೆಹಲಿಗೆ ಬೇಟಿಯಿತ್ತರು. ಈ ಸಂದರ್ಭದಲ್ಲಿ ಭಾರತದ ಕಡೆಯಿಂದ ಸ್ಪಷ್ಟತೆ ಕೋರಲಾಯಿತು. ಸಾಮಾನ್ಯವಾದುದುದ್ದೇನೆಂದರೆ ಅಮೇರಿಕಾದ ನೇರ ನಿಯಂತ್ರಣವಿಲ್ಲದೆ ಇರಾಕಿನಲ್ಲಿ ಸೇನಾ ಕಾರ್ಯಾಚರಣೆಯನ್ನು ನಡೆಸುವುದು ಹೇಗೆ ಎಂಬುದಾಗಿತ್ತು. ಸರ್ಕಾರದ ಇತ್ತೀಚಿನ ನಿಲುವೆಂದರೆ ವಾಷಿಂಗ್‌ಟನ್ ಭೇಟಿ ನೀಡಿರುವ ವಿದೇಶಾಂಗ ಕಾರ್ಯದರ್ಶಿ ಕನ್ವಲ್ ಸಿಬಾಲ್‌ರವರು ವಾಪಸ್ಸು ಬಂದ ನಂತರ ತೀರ್ಮಾನ ಕೈಗೊಳ್ಳುತ್ತೇವೆ ಎಂಬುದು. ಅವರ ಚರ್ಚೆಯ ವರದಿಯ ಆಧಾರದಲ್ಲಿ ಅಂತಿಮ ತೀರ್ಮಾನವನ್ನು ಕೈಗೊಳ್ಳಲಾಗುತ್ತದೆ.

ಬ್ಲಾಕ್ ವಿಲ್ಸ್‌ರವರು ಮುಂದುವರಿದು ಇರಾಕಿನಲ್ಲಿನ ತನ್ನ ತುಕಡಿಗಳಿಗೆ ಭಾರತವೇ ವೆಚ್ಚಗಳನ್ನು ಭರಿಸುತ್ತದೆಂದು ಅಮೇರಿಕ ನಿರೀಕ್ಷಿಸಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅಮೇರಿಕಾದ ಸೇವೆ ಮತ್ತು ಆಕ್ರಮಣಕ್ಕೆ ಭಾರತದ ಜನತೆ ಹಣ ನೀಡಬೇಕಾಗಿದೆ. ಆದರೆ ವಾಜಪೇಯಿ ಸರ್ಕಾರಕ್ಕೆ ಇದರಲ್ಲಿ ಯಾವ ಸಮಸ್ಯೆಯೂ ಕಾಣುತ್ತಿಲ್ಲ.

ದಯನೀಯ ಸ್ಥಿತಿ ಸಮರ್ಥನೆ

ಸರ್ಕಾರದ ನಡೆಗೆ ಎಲ್ಲೆಡೆಯಿಂದ ವ್ಯಕ್ತವಾದ ಪ್ರತಿರೋದವು ವಾಜಪೇಯಿಯವರು ವಿರೋಧ ಪಕ್ಷದ ನಾಯಕಿ ಸೋನಿಯಾಗಾಂಧಿಯ ಜೊತೆ ಕೂಡಲೆ ಸಮಾಲೋಚಿಸುವಂತೆ ಮಾಡಿತು.. ನಂತರ ಜೂನ್ 21 ರಂದು ಎನ್.ಡಿ.ಎ. ಸಭೆ ಕರೆಯಲಾಗಿತ್ತು. ಕೆಲವು ಎನ್.ಡಿ.ಎ. ಮಿತ್ರರೂ ಅಮೇರಿಕಾದ ಆಕ್ರಮಣವನ್ನು ಉಳಿಸಲು ಭಾರತೀಯ ಸೇನಾ ತುಕಡಿಯನ್ನು ಕಳುಹಿಸುವುದನ್ನು ವಿರೋಧಿಸಿದವು. ಅಂತಿಮವಾಗಿ "ಭಾರತದ ಹಿತಾಸಕ್ತಿಯನ್ನು ಮತ್ತು ಇರಾಕಿ ಜನತೆಯ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟು ಕೊಂಡು ನಿರ್ಣಯ ಕೈಗೊಳ್ಳಲು ಪ್ರಧಾನಮಂತ್ರಿಯವರಿಗೆ ಸಭೆಯು ಅಧಿಕಾರ ನೀಡಿತು.

ಇದು ಸರ್ಕಾರದ ಹೊಸ ವರಸೆ

ಎಲ್.ಕೆ. ಅಡ್ವಾಣಿ ಮತ್ತು ಜಾರ್ಜ್ ಫರ್ನಾಂಡಿಸ್ ಇಬ್ಬರೂ ಸಹ ತಮ್ಮ ಹೇಳಿಕೆಯಲ್ಲಿ ಇರಾಕಿನ ಜನತೆಯ ಆಶೋತ್ತರವನ್ನು ಖಚಿತಪಡಿಸಿಕೊಂಡು ಸೇನಾ ತುಕಡಿಗಳನ್ನು ಕಳಿಸುವ ಅಂತಿಮ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದ್ದಾರೆ. ಇದೊಂದು ದಯನೀಯ ಸಮರ್ಥನೆಯಾಗಿದೆ. ಕಳೆದ 3 ತಿಂಗಳಿಂದ ಅಮೇರಿಕದ ನೇರ ಮಿಲಿಟರಿ ಆಕ್ರಮಣದಲ್ಲಿ ಇರಾಕ್ ಇದೆ. ಇರಾಕನ್ನು ಇರಾಕಿ ಜನತೆಗಾಗಲಿ ಅಥವಾ ಯಾವುದೇ ಪ್ರಜಾಸತ್ತಾತ್ಮಕ ವ್ಯವಸ್ಥೆಗಾಗಲಿ ಹಸ್ತಾಂತರಿಸುವ ಯಾವ ಉದ್ದೇಶವು ಅಮೇರಿಕಕ್ಕಿಲ್ಲ. ಅಮೇರಿಕದ ಬಯಕೆಯೆಂದರೆ, ಒಂದು ಇರಾಕಿ ಮುಖವನ್ನು ಆಡಳಿತದಲ್ಲಿ ಕೂರಿಸುವುದಾಗಿದೆ. ಅದನ್ನು ಕೂಡ ಇದುವರೆಗೆ ಸಾಧಿಸಲಾಗಿಲ್ಲ. ಮೇ ಅಂತ್ಯದೊಳಗೆ ಮಧ್ಯಂತರ ಆಡಳಿತವನ್ನು ಸ್ಥಾಪಿಸುವ ಯೋಜನೆಯನ್ನು ಕೈಬಿಡಲಾಗಿದೆ. ಇರಾಕಿನಲ್ಲಿ ಅಮೇರಿಕದ ಗವರ್ನರ್ ಆಗಿರುವ ಪಾಲ್ ಬ್ರೆಮರ್ ಹೇಳಿದ್ದೇನೆಂದರೆ, ಯುದ್ದಾನಂತರದ ಇಂತಹ ಸ್ಥಿತಿಯಲ್ಲಿ ನಾವೇನಾದರೂ ಚುನಾವಣೆಗಳನ್ನು ಆರಂಭಿಸಿದರೆ, ತಿರಸತಗೊಂಡವರೇ ಜಯ ಶೀಲರಾಗುತ್ತಾರೆ. ಸಂಘಟಿತ ರಾದವರೇ ಜಯಶೀಲರಾಗ ಬೇಕೆಂಬುದು ನಿರೀಕ್ಷಿತ ಆದರೆ ಈಗ ಆ ರೀತಿ ಸಂಘಟಿತರಾಗಿರುವವರು ಮಾಜಿ ಬಾತಿಸ್ಟ್‌ಗಳು ಮತ್ತು ಒಂದು ಹಂತದವರೆಗೆ ಇಸ್ಲಾಂವಾದಿಗಳು" ಹಾಗಾಗಿ ಎಲ್ಲಾ ಪಟ್ಟಣ ಮತ್ತು ನಗರಗಳ ಮೇಯರ್‌ಗಳನ್ನು ನಾಮಕರಣ ಮಾಡಲಾಯಿತು. ಮತ್ತು ಎಲ್ಲಾ ಚುನಾವಣೆಗಳನ್ನು ರದ್ದುಗೊಳಿಸಲು ಅಮೇರಿಕಾದ ಸೇನಾಧಿಕಾರಿ ಆದೇಶ ಮಾಡಿದರು.

ನಿವೃತ್ತಿ ಹೊಂದುತ್ತಿರುವ ಅಮೇರಿಕಾದ ರಾಯಭಾರಿ ರಾಬರ್ಟ್ ಬ್ಲಾಕ್ ವಿಲ್ಸ್ ಅವರು ಜೂನ್ 20 ರಂದು 'ದಿ. ಹಿಂದೂ' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಭಾರತವು ಇರಾಕಿನಲ್ಲಿ ಪ್ರಧಾನ ಪಾತ್ರ ವಹಿಸಬಹುದು ಮತ್ತು ಒಳ ಆಡಳಿತ ಮಂಡಳಿಯಲ್ಲಿದ್ದು ಇರಾಕಿನ ಭದ್ರತೆಯನ್ನು ನಿರ್ವಹಿಸ ಬಹುದೆಂದು ಹೇಳಿದ್ದಾರೆ. ಇದರ ಅರ್ಥವೇನೆಂದರೆ, ಇರಾಕಿನಲ್ಲಿನ ಆಕ್ರಮಣಕಾರಿ ಆಡಳಿತದಲ್ಲಿ ಮಿಲಿಟರಿ ಹಂತದಲ್ಲಿ ಭಾರತಕ್ಕೆ ಪ್ರಾತಿನಿಧ್ಯವನ್ನು ಅಮೇರಿಕ ನೀಡಬಹುದೆಂದಾಗಿದೆ. ಬ್ರಿಟನ್ ಪೋಲೆಂಡ್ ಮತ್ತು ಭಾರತವು ಅಮೇರಿಕಾದ ಹೊರತಾಗಿ ಕೆಲವು ವಲಯಗಳನ್ನು ನೋಡಿ ಕೊಳ್ಳಬಹುದೆಂದು ನಿರೀಕ್ಷಿಸಲಾಗಿದೆ. ಭಾರತದ ಸೇನಾ ಕಮಾಂಡರ್‌ರವರು ಅದನ್ನು ಪ್ರತಿನಿಧಿಸಬಹುದು. ಆದರೆ ಅಂತಿಮವಾಗಿ ಅಮೇರಿಕಾದ ನಿಯಂತ್ರಣವಿರುತ್ತದೆ ಎಂಬುದರಲ್ಲಿ ಯಾವ ಸಂದೇಹವೂ ಬೇಡ.

ಬ್ಲಾಕ್ ವಿಲ್ಸ್‌ರವರು ಮುಂದುವರಿದು ಇರಾಕಿನಲ್ಲಿನ ತನ್ನ ತುಕಡಿಗಳಿಗೆ ಭಾರತವೇ ವೆಚ್ಚಗಳನ್ನು ಭರಿಸುತ್ತದೆಂದು ಅಮೇರಿಕ ನಿರೀಕ್ಷಿಸಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅಮೇರಿಕಾದ ಸೇವೆ ಮತ್ತು ಆಕ್ರಮಣಕ್ಕೆ ಭಾರತದ ಜನತೆ ಹಣ ನೀಡಬೇಕಾಗಿದೆ. ಆದರೆ ವಾಜಪೇಯಿ ಸರ್ಕಾರಕ್ಕೆ ಇದರಲ್ಲಿ ಯಾವ ಸಮಸ್ಯೆಯೂ ಕಾಣುತ್ತಿಲ್ಲ.

ದಿಗ್ಭ್ರಮೆ - ಒತ್ತಾಯ

ಭಾರತವು 17,000 ಸೈನಿಕರನ್ನೊಳಗೊಂಡ ಸೇನಾ ತುಕಡಿಯನ್ನು ಕಳಿಸಬೇಕೆಂಬ ಬೇಡಿಕೆಯು ದಿಗ್ಭ್ರಮೆ ಹುಟ್ಟಿಸುವ ವಿಚಾರವಾಗಿದೆ. ಇದರ ಅರ್ಥವೇನೆಂದರೆ, ಇರಾಕಿನ ಆಕ್ರಮಣದಲ್ಲಿ ಭಾರತವು ಅಮೇರಿಕಾದ ನಂತರದ 2ನೇ ದೊಡ್ಡ ಶಕ್ತಿಯಾಗಲಿದೆ. ಇರಾಕಿನ ಆಕ್ರಮಣದಲ್ಲಿ ಪಾಲ್ಗೊಂಡ ಬ್ರಿಟೀಷ್ ಸೈನಿಕರ ಸಂಖ್ಯೆ 12,000 ಕ್ಕಿಂತ ಹೆಚ್ಚಿಲ್ಲ. ಅಮೇರಿಕವು ಭಾರತವನ್ನು ಈ ರೀತಿಯಾಗಿ ಅತೀ ದೊಡ್ಡ ತುಕಡಿಯನ್ನು ಕಳುಹಿಸಲು ಕೇಳಿಕೊಂಡಿರುವುದೇಕೆಂದರೆ, ಇತರೆ ರಾಷ್ಟ್ರಗಳು ಸೇನಾ ತುಕಡಿಯನ್ನು ಕಳುಹಿಸುವಂತೆ ಮನವೊಲಿಸುವಲ್ಲಿ ಅಮೇರಿಕ ವೈಫಲ್ಯ ಕಂಡಿದೆ. ಮುಂದಿನ 2-3 ತಿಂಗಳುಗಳಲ್ಲಿ ಅಮೇರಿಕವು ಇರಾಕಿನಲ್ಲಿರುವ ತನ್ನ ಸೇನಾಬಲವನ್ನು ಒಂದು ಲಕ್ಷದ ನಲವತ್ತಾರು ಸಾವಿರ (1,46,000) ದಿಂದ 30-40 ಸಾವಿರಕ್ಕೆ ಇಳಿಸಲು ಉದ್ದೇಶಿಸಿದೆ. ಇದರ ಅರ್ಥ ಇತರೇ ದೇಶಗಳಿಂದ ಕನಿಷ್ಟ 50,000 ಸೈನಿಕರನ್ನು ನಿಯೋಜಿಸುವುದಾಗಿದೆ. ನ್ಯಾಟೋ ಕೂಟದ ಇತರೇ ರಾಷ್ಟ್ರಗಳು 20,000ಕ್ಕಿಂತ ಹೆಚ್ಚಿನ ಸೈನಿಕರನ್ನು ಕೊಡಲು ಸಾಧ್ಯವಾಗದಿರುವುದರಿಂದ ಭಾರತದಿಂದ ಸೇನಾ ತುಕಡಿಯನ್ನು ಬರ ಮಾಡಿಕೊಳ್ಳುವುದು ಅಮೇರಿಕಕ್ಕೆ ಅತ್ಯಂತ ಮುಖ್ಯವಾಗಿದೆ. ಅಮೇರಿಕವು ಫಿಜಿ ಮತ್ತು ಬಾಂಗ್ಲಾದೇಶಗಳನ್ನು ಕೂಡ ಈ ವಿಚಾರದಲ್ಲಿ



ಕೇಳಿಕೊಂಡಿದೆ.

ಈ ರೀತಿಯಾಗಿ ಇರಾಕಿನ ಆಕ್ರಮಣದಲ್ಲಿ ಇತರೇ ದೇಶಗಳ ಸೈನಿಕರನ್ನು ಸೇರಿಸಿಕೊಳ್ಳುವುದು ಅತ್ಯಂತ ತುರ್ತಿನ ಮತ್ತು ಹತಾಶೆಯ ಕ್ರಮವಾಗಿದೆ. ಅಮೇರಿಕಾದ ಆಕ್ರಮಣಕಾರರಿಗೆ ದಿನನಿತ್ಯವೂ ಪ್ರತಿರೋಧ ಹೆಚ್ಚುತ್ತಿದೆ. ಅಮೇರಿಕನ್ ಸೈನಿಕರ ಮೇಲೆ ನಿತ್ಯವೂ ದಾಳಿಗಳು ನಡೆಯುತ್ತಿವೆ. ಮೇ 1 ರಿಂದ ಅಂದರೆ, ಅಮೇರಿಕವು ಅಧಿಕೃತವಾಗಿ ಯುದ್ಧದ ಅಂತ್ಯವನ್ನು ಘೋಷಿಸಿದ ದಿನದಿಂದ ಪ್ರತಿನಿತ್ಯವೂ ಅಮೇರಿಕದ ಸೈನಿಕನೊಬ್ಬ ಸಾಯುತ್ತಿದ್ದಾನೆ. ಜೂನ್ 28ಕ್ಕೆ ಸಾವಿನ ಸಂಖ್ಯೆ 60ನ್ನು ದಾಟಿದೆ. ಗೆರಿಲ್ಲಾ ದಾಳಿಗಳು ಅಮೇರಿಕನ್ ಸೈನಿಕರನ್ನು ಕಂಗೆಡಿಸಿವೆ. ಕ್ರೂರ ಮಿಲಿಟರಿ ದಬ್ಬಾಳಿಕೆಯಿಂದ ಇದಕ್ಕೆ ಉತ್ತರ ನೀಡಲಾಗಿದೆ. ಬಾಗ್ದಾದಿನ ಹೊರಗಡೆ ಕೇಂದ್ರ ಮತ್ತು ಉತ್ತರ ಇರಾಕಿನ ಪ್ರದೇಶಗಳಲ್ಲಿ ಅಮೇರಿಕದ ಟ್ಯಾಂಕ್‌ಗಳು ಮತ್ತು ಹೆಲಿಕಾಪ್ಟರ್‌ಗಳು ಹಳೆಯ ಆಡಳಿತದ ಪಳೆಯುಳಿಕೆಗಳು ಅಥವಾ ಉಗ್ರಗಾಮಿಗಳನ್ನು ಬೇಟೆಯಾಡುವ ಹೆಸರಿನಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಮನೆ ಮನೆಯಲ್ಲಿ ಹುಡುಕು ನಾಗರಿಕರಿಗೆ ಕೆಟ್ಟದಾಗಿ ಹಿಂಸೆ ನೀಡುತ್ತಿರುವುದು ನಾಗರಿಕರನ್ನು ರೊಚ್ಚಿಗೆಬ್ಬಿಸಿದೆ. ದಾಳಿಗಳ ತೀವ್ರತೆ ಹೆಚ್ಚುತ್ತಿದೆ. ದ.ಇರಾಕಿನಲ್ಲಿ ನಡೆದ



ಯೊಂದರಲ್ಲಿ ಬ್ರಿಟಿಷ್ ಮಿಲಿಟರಿಯ 6 ಜನ
ರನ್ನು ದಾಳಿಯಲ್ಲಿ ಕೊಲ್ಲಲಾಯಿತು.
ಹತುಶಾಹಿಯನ್ನು ವಿರೋಧಿಸುವ ತಮ್ಮ
ಯ ಪರಂಪರೆಯೊಡನೆ ಇರಾಕಿ ಜನತೆಯು
ಸಾಹತುಶಾಹಿಗಳನ್ನು ದೀರೋದಾತ್ತವಾಗಿ
ೇಧಿಸುತ್ತಿದ್ದಾರೆ.
.ಜೆ.ಪಿ. ನೇತೃತ್ವದ ಸರ್ಕಾರವು
ುಣವನ್ನು ವಿರೋಧಿಸುತ್ತಿರುವ ಇರಾಕಿ
ಯನ್ನು ನ್ಯಾಯ ಸಮ್ಮತವೆಂದು ಒಪ್ಪುವುದೇ?
ಾ ಈ ರೀತಿ ಪ್ರತಿರೋಧ ವ್ಯಕ್ತವಾಗುತ್ತಿರು
ಉಗ್ರಗಾಮಿಗಳಿಂದ ಮತ್ತು ಬಾತಿಷ್ಟರಿಂದ
ಅಮೇರಿಕದ ಕಣ್ಣೋಟದಲ್ಲಿ ಪಾಲುದಾರ
ವುದೇ? ಭಾರತೀಯ ಸೈನಿಕರು ಇರಾಕಿ
ಯನ್ನು ಮರ್ದಿಸಬೇಕು ಮತ್ತು ಸುಮ್ಮನಿರಿಸ
ದು ಅಮೇರಿಕವು ಬಯಸುತ್ತದೆ. ಏಕೆಂದರೆ,
ಂದ ತಮ್ಮ ಸೈನಿಕರ ಜೀವಹಾನಿಯನ್ನು
ಟ್ಟಬಹುದೆಂಬ ಲೆಕ್ಕಚಾರ ಅಮೇರಿಕಾದ್ದಗಿದೆ.

ರಿಕದ ಸೇವೆ

7,000 ಸೈನಿಕರನ್ನು ಕಳುಹಿಸುವುದು,
ಕಿನಲ್ಲಿ ಇವರ ಖರ್ಚು ವೆಚ್ಚಗಳನ್ನು
ುವುದು ಅಮೇರಿಕಾಕ್ಕಾಗಿ ಇರಾಕನ್ನು
ಹತುಕರಣಗೊಳಿಸುವ ಕೆಟ್ಟಕೆಲಸವನ್ನು
ಸಲು ಸಿದ್ಧವಾಗಿರುವುದು ಬಿ.ಜೆ.ಪಿ.
ರವು ಅಮೇರಿಕಕ್ಕೆ ಸೇವೆ ಸಲ್ಲಿಸುವುದರಲ್ಲಿ
ವ ಹಂತಕ್ಕೆ ಮುಟ್ಟಿದೆ ಎಂಬುದನ್ನು
ರಿಸುತ್ತದೆ. ಇರಾಕಿಗೆ ಭಾರತೀಯ
ತುಕಡಿಗಳನ್ನು ಕಳುಹಿಸುವುದನ್ನು ತಪ್ಪಾಗಿ
ಸುವ ಉದ್ದೇಶವೇನೂ ಇಲ್ಲ. ಇರಾಕನ್ನು
ವಸಾಹತುಕರಿಸುವ ಅನೈತಿಕ ಮತ್ತು
ಯದ ಕೆಲಸದಲ್ಲಿ ಭಾರತೀಯ ಸೈನಿಕರನ್ನು
ಲಾಗುತ್ತದೆ.
ಾಧ್ಯಮಗಳ ಮುಖಾಂತರ ಕಥೆ ಹೇಳುವ
ಸಾಮ್ರಾಜ್ಯಶಾಹಿ ಪರವಾದ ಪ್ರವೀಣರಿಂದ
ಗೆ ಸೈನ್ಯ ಕಳುಹಿಸುವುದರಿಂದಾಗುವ
ದನ್ನು ಜನತೆಗೆ ವಿವರಿಸುವ ಕಾಯಕದಲ್ಲಿ
ರ ನಿರತವಾಗಿದೆ. ಇರಾಕಿಗೆ ಸೇನೆ
ಸುವುದರಿಂದ ಮಹಾಶಕ್ತಿಯನ್ನು
ಳ್ಳಬಹುದೆಂದು ಕೆಲವರು ಹೇಳುತ್ತಿದ್ದಾರೆ.
ಟಿ ಕೌನ್ಸಿಲ್‌ನಲ್ಲಿ ಕಾಯಂ ಸದಸ್ಯತ್ವ ಖಂಡಿತ
ದನ್ನು ಅಮೇರಿಕನ್ನರು ಆಶ್ವಾಸನೆ
ತ್ತಿದ್ದಾರೆ. ಇರಾಕ್ ಮತ್ತು ಪಶ್ಚಿಮ ಏಷ್ಯಾ
ಾರಗಳಲ್ಲಿ ಕೈಯಾಡಿಸುವುದರಿಂದ ಭಾರತಕ್ಕೆ
ಾಗಲಿದೆ ಎಂಬುದು ಕೆಲವರು ಅಂಬೋಣ.
**ಿದ 3 ತಿಂಗಳಿಂದ ಇರಾಕನ್ನು ಕೊಳ್ಳೆ
ಯಲು ಅಮೇರಿಕವು ರೂಪಿಸಿರುವ
ಕ್ಷೆಯಲ್ಲಿ ಭಾರತವು ಸೇನೆಯನ್ನು
ಸುವುದರ ಮೂಲಕ ಪಾಲುದಾರನಾದರೆ,
ತಕ್ಕೆ ಇದೊಂದು ಶಾಶ್ವತ
ಕ್ಕೆಯಾಗಲಿದೆ.** ಎಲ್ಲಾ ವಿಭಾಗದಿಂದ,
ಜನಿಕ ವಲಯದಿಂದ ಈ ಕಾಯಕಕ್ಕೆ ವ್ಯಾಪಕ
ೋಧ ಇದೆ ಎಂಬುದನ್ನು ವಾಜಪೇಯಿ
ನೆನಪಿಸಿಕೊಳ್ಳಬೇಕು. ಕಳೆದ ಅಧಿವೇಶನ
ಂಗೀಕರಿಸಿದ ಅವಿರೋಧ ನಿರ್ಣಯವನ್ನು
ಳಸಿದ್ದು ಏಕೆ? ಎಂಬುದಕ್ಕೆ ವಾಜಪೇಯಿ
ಸಂಸತ್ತಿನಲ್ಲಿ ಉತ್ತರ ನೀಡಬೇಕು.
ರೆಗೆ, ಎಲ್ಲಾ ರಾಜಕೀಯ ವೈರುಧ್ಯಗಳಿಂದ
ಉಳಿದಿದ್ದ ಭಾರತೀಯ ಸೇನೆಯನ್ನು
ಲಕ್ಕೆ ನೂಕಿದ ಅಪಕೀರ್ತಿ ವಾಜಪೇಯಿ
ಕ್ಕೆ ಸಲ್ಲುತ್ತದೆ ಮತ್ತು ಭಾರತೀಯ ಸೇನೆಯ
ಗೆ ಗಂಭೀರ ಧಕ್ಕೆಯಾಗಲಿದೆ.
ಕಿಗೆ ಸೇನೆಯನ್ನು ಕಳುಹಿಸಲು ಸರ್ಕಾರ
ನಿಸುವುದಕ್ಕೆ ಕೆಲವೇ ದಿನಗಳು ಬಾಕಿ
ವೆ. ಆದ್ದರಿಂದ ಎಲ್ಲಾ ಪ್ರಜಾಪ್ರಭುತ್ವ
ಮತ್ತು ಸಾರ್ವಜನಿಕರು ಒಬ್ಬನೇ ಒಬ್ಬ
ನ್ನು ಇರಾಕಿಗೆ ಕಳುಹಿಸುವುದಿಲ್ಲವೆಂದು ಸಾರಿ
ೇಕಾಗಿದೆ. ಭಾರತೀಯ ಸೇನೆಯು
ಕದ ಯುದ್ಧ ತೋಪಿಗೆ ಆಹಾರವಾಗಲು

ಇರಾಕಿನಲ್ಲೊಂದು ಕಮ್ಯುನಿಸ್ಟ್ ಪಾರ್ಟಿ ಇತ್ತೆ? ಈಗ ಇದೆಯೇ? ಸದ್ದಾಂ ಹುಸೇನ್ ಸರ್ಕಾರ ಬೀಳುತ್ತಿದ್ದಂತೆ ಹಲವು ಪತ್ರಿಕೆಗಳು ಬಾಗ್ದಾದ್‌ನಲ್ಲಿ ಕಾಣಸಿಕೊಂಡವು. ಅದರಲ್ಲಿ ಮೊದಲಿನದು ಇರಾಕಿ ಕಮ್ಯುನಿಸ್ಟ್ ಪಕ್ಷದ ಪತ್ರಿಕೆ. ಈ ಮೂಲಕ ಇರಾಕಿ ಕಮ್ಯುನಿಸ್ಟ್ ಪಕ್ಷ ತನ್ನ 70 ವರ್ಷಗಳ ಅಮೋಘ ಚರಿತ್ರೆ ಮತ್ತು ಆ ದೇಶದ ಭವಿಷ್ಯ ನಿರ್ಮಾಣದಲ್ಲಿ ತನ್ನ ಪಾತ್ರ ವಹಿಸುವ ಧೃಢನಿಶ್ಚಯ- ಎರಡನ್ನೂ ಪ್ರಕಟಿಸಿದೆ. ಪಕ್ಷದ ಬಗ್ಗೆ ಒಂದು ಪರಿಚಯಾತ್ಮಕ ಲೇಖನ.

ಇರಾಕಿನಲ್ಲೊಂದು ಕಮ್ಯುನಿಸ್ಟ್ ಪಾರ್ಟಿ ಇದೆಯೇ?

ಇರಾಕಿ ಕಮ್ಯುನಿಸ್ಟ್ ಪಕ್ಷದ್ದು ಅಮೋಘ ಚರಿತ್ರೆ. ಇಂಡೋನೇಷ್ಯಾ ಕಮ್ಯುನಿಸ್ಟ್ ಪಕ್ಷ ಬಿಟ್ಟರೆ ಅತ್ಯಂತ ಕ್ರೂರ ದಮನ ಎದುರಿಸಿ ನಿಂತ ಪಕ್ಷ ಇದು. ಜುಲೈ 1958 ರಲ್ಲಿ ಬ್ರಿಟೀಷ್ ಕೈಗೊಂಬೆ ಸರ್ಕಾರವನ್ನು ಕಿತ್ತೊಗೆದು ಪಬ್ಲಿಕ್ ಒಂದನ್ನು ಸ್ಥಾಪಿಸಿದಾಗ ಅದರಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಮಾತ್ರವಲ್ಲ ಆಗ ಗಮನಾರ್ಹ ರಾಜಕೀಯ ಶಕ್ತಿಯಾಗಿತ್ತು. ಪಶ್ಚಿಮ ಏಷ್ಯಾದ ಅರಬ್ ದೇಶಗಳಲ್ಲೇ! ಅತ್ಯಂತ ಪ್ರಬಲ ಕಮ್ಯುನಿಸ್ಟ್ ಪಕ್ಷವಾಗಿ ಬೆಳೆದ ಕೀರ್ತಿ ಅದರದ್ದು.

ಭಾರತ ಮತ್ತು ಇರಾಕ್‌ನಲ್ಲಿ ಕಮ್ಯುನಿಸ್ಟ್ ಪಕ್ಷ ಬೆಳೆದು ಬಂದ ವಿಧಾನಗಳಲ್ಲಿ ಆಸಕ್ತಿಕಾರಕ ಸಾಮ್ಯ ಇದೆ. ಬೊಲ್ಶೆವಿಕ್ ಕ್ರಾಂತಿಯ ಪ್ರಭಾವ, ಬುದ್ಧಿಜೀವಿಗಳು ಯುರೋಪಿಗೆ ಹೋದ ವಿದ್ಯಾರ್ಥಿಗಳ ಮಾರ್ಕ್ಸ್‌ವಾದಿ ಅಧ್ಯಯನ ಗುಂಪುಗಳ ರಚನೆ, ಮೊದಲ ಟ್ರೇಡ್ ಯೂನಿಯನ್‌ಗಳ ರಚನೆ, ಕಮ್ಯುನಿಸ್ಟ್ ಗುಂಪುಗಳು, 30ರ ದಶಕದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆ, ಸ್ಥಾಪಕರ ಬಂಧನ, ವಿಚಾರಣೆ ಇತ್ಯಾದಿ ಹಲವು ಸಮಾನಾಂತರ ಅಂಶಗಳು ಇವೆ. ಮೊದಲನೆಯ ಮಹಾಯುದ್ಧದ ನಂತರ ಇರಾಕ್ 1920 ರಿಂದ 1932ರವರೆಗೆ ಬ್ರಿಟೀಷರ ನೇರ ಆಡಳಿತದಲ್ಲಿತ್ತು. ಆ ಅವಧಿಯಲ್ಲಿ ರೈಲ್ವೇ ಮತ್ತು ಕೈಗಾರಿಕೆ ಬೆಳೆದು ಕಾರ್ಮಿಕವರ್ಗದ ಉದಯವಾಯಿತು. ರೈಲ್ವೇ ಕಾರ್ಮಿಕರ ಮುಷ್ಕರ 1927 ರಲ್ಲೂ, ಪ್ರಥಮ ಸಂಘಟಿತ ಯೂನಿಯನ್ ಸ್ಥಾಪನೆ 1929 ರಲ್ಲೂ ಆಯಿತು.


ಧರ್ಮನಿರಪೇಕ್ಷ- ರಾಜಕೀಯ ಶಕ್ತಿ

ಸಾಮ್ರಾಜ್ಯಶಾಹಿ ಒಂದು ಕಡೆ, ಪಾಳೆಯಗಾರಿ ಶಾಹಿ ಇನ್ನೊಂದು ಕಡೆ- ಇವೆರಡರ ವಿರುದ್ಧವೂ ಮೊದಲಿನಿಂದಲೂ ಹೋರಾಡುತ್ತಾ ಬಂದ ಕಮ್ಯುನಿಸ್ಟ್ ಪಕ್ಷ ಸ್ವಾಭಾವಿಕವಾಗಿಯೇ, ದಮನ ಎದುರಿಸಬೇಕಾಗಿ ಬಂತು. ಬ್ರಿಟೀಷರ ಮತ್ತು ಅವರ ಕೈಗೊಂಬೆ ಸರ್ಕಾರಗಳು ಪಕ್ಷದ ವಿರುದ್ಧ ಧರ್ಮಚಕ್ರ ಮುಂದುವರೆಸಿದವು. ಅಗಸ್ಟ್ 1937 ರಲ್ಲಿ ಇರಾಕ್‌ನಲ್ಲಿ ಕಮ್ಯುನಿಸಂ ಕಾನೂನುಬಾಹಿರ ಎಂದು ಘೋಷಿಸಲಾಯಿತು. ಸೈನ್ಯ ಮತ್ತು ಪೋಲೀಸುಗಳಲ್ಲಿ ಕಮ್ಯುನಿಸಂ ಸಿದ್ಧಾಂತ ಹರಡುವವರಿಗೆ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. ಎರಡನೇ ಮಹಾಯುದ್ಧದಲ್ಲಿ ಸೋವಿಯೆತ್ ಒಕ್ಕೂಟದ ಪಾತ್ರ ಪಕ್ಷದ ಪ್ರತಿಷ್ಠೆ ಹೆಚ್ಚಿಸಿತು. ಪಕ್ಷದ ಸದಸ್ಯರ ಸಂಖ್ಯೆ ಮತ್ತು ಜನಬೆಂಬಲ ಹೆಚ್ಚಿತು. ಏಪ್ರಿಲ್ 1945 ರಲ್ಲಿ ನಡೆದ ಮೊದಲ ಪಕ್ಷದ ಮಹಾಧಿವೇಶನದಲ್ಲಿ ರಾಷ್ಟ್ರೀಯ ಕಾರ್ಯಕ್ರಮ ಅಂಗೀಕರಿಸಲಾಯಿತು.

ಇರಾಕಿ ಕಮ್ಯುನಿಸ್ಟ್ ಪಕ್ಷ ಮೊದಲಿನಿಂದಲೂ ಧರ್ಮನಿರಪೇಕ್ಷ ಪಕ್ಷವಾಗಿತ್ತು. ಯಾವುದೇ ಧರ್ಮ, ಜನಾಂಗವನ್ನು ಪ್ರತಿನಿಧಿಸದೆ ಇರಾಕಿನ ದುಡಿಯುವ ಜನತೆಯ ಪ್ರತಿನಿಧಿಯಾಗಿ ಹೊಮ್ಮಿತು. ಅರಬ್ ಶಿಯಾ, ಸುನ್ನಿ, ಕುರ್ದಿಶ್ ಮೂಲದವರು ಸದಸ್ಯರಲ್ಲಿ ಗಮನಾರ್ಹ ಪ್ರಮಾಣದಲ್ಲಿದ್ದರು. ಅಲ್ಪಸಂಖ್ಯಾತ ಕ್ರಿಶ್ಚಿಯನ್ನರು ಮತ್ತು ಜ್ಯೂಗಳೂ ಸದಸ್ಯತ್ವದಲ್ಲಿ ಮಾತ್ರವಲ್ಲ, ನಾಯಕತ್ವದಲ್ಲಿ ಸಹ ಇದ್ದರು. 1941 ರಿಂದ 1949 ರವರೆಗೆ ಮಹಾ ಕಾರ್ಯದರ್ಶಿಯಾಗಿದ್ದ ಷಾಹದ್(ಯೂಸುಫ್ ಸಲಮಾನ್ ಯೂಸುಫ್) ಕ್ರಿಶ್ಚಿಯನ್ ಆಗಿದ್ದ.

1948 ರ ಅಲ್‌ವಾತ್‌ಬಾನಲ್ಲಿ

1944 ರಿಂದ 1946 ರವರೆಗೆ 16 ಟ್ರೇಡ್ ಯೂನಿಯನ್‌ಗಳು 12 ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿತ್ತು. ಇರಾಕಿ ಕುರ್ದಿಸ್ತಾನದಲ್ಲಿ ಪಕ್ಷದ ಘಟಕಗಳು ಬೆಳೆದು ಸ್ವಾಯತ್ತತೆಗೆ ಪಕ್ಷ ತನ್ನ ದನಿ ಎತ್ತಿತು. 1947 ರಲ್ಲಿ ಅದಾಬತ್ ಎಂಬಲ್ಲಿ ಭೂಮಾಲಿಕ ಶೇಕ್ ಒಬ್ಬನ ವಿರುದ್ಧ ನಡೆದ ರೈತ ದಂಗೆಯ ನಾಯಕತ್ವ ಸಹ ಪಕ್ಷವಹಿಸಿತ್ತು. ಪಕ್ಷದ ಪ್ರಭಾವ ದಿನೇ ದಿನೇ ಹೆಚ್ಚುತ್ತಿರುವುದರಿಂದ. ಗಾಬರಿಯಾದ ಬ್ರಿಟೀಷ್ ಕೈಗೊಂಬೆ ಸರ್ಕಾರ ಷಾಹದ್ ಮತ್ತು ಇತರ ಹಿರಿಯ ನಾಯಕರನ್ನು ಬಂಧಿಸಿ, ಸರ್ಕಾರ ಕಿತ್ತೊಗೆಯುವ ಪಿತೂರಿ ಆಪಾದನೆ ಹೊರಿಸಿತು. ಷಾಹದ್ ಮತ್ತು ಜಾಕಿ ಬಾಸಿನ್ (ಹಿರಿಯ ಪಿಬಿ ಸದಸ್ಯ) ರನ್ನು ಮರಣದಂಡನೆಗೆ ಗುರಿಪಡಿಸಿತು. ಆದರೆ ಅಂತರಾಷ್ಟ್ರೀಯ ಒತ್ತಡದಿಂದ ಜೀವಾವಧಿ ಶಿಕ್ಷೆಗೆ ಬದಲಾಯಿಸಬೇಕಾಯಿತು.



ಇರಾಕ್ ಕಮ್ಯುನಿಸ್ಟ್ ಪಾರ್ಟಿಯ ಚಿಹ್ನೆ

ಕಮ್ಯುನಿಸ್ಟ್ ಪಕ್ಷ ಇರಾಕಿನಲ್ಲಿ ಒಂದು ಪ್ರಮುಖ ರಾಜಕೀಯ ಶಕ್ತಿಯಾಗಿ ಹೊಮ್ಮಿದ್ದು 1948 ಜನವರಿಯಲ್ಲಿ ನಡೆದ 'ನೆಗೆತ' (ಅಲ್-ವಾತ್ ಬಾ) ಎಂದು ಕರೆಯಲಾಗುವ ರಾಷ್ಟ್ರೀಯ ದಂಗೆಯ ಸಮಯದಲ್ಲಿ. ದಂಗೆ ಎದ್ದದ್ದು ಆಗಿನ ಕೈಗೊಂಬೆ ಸರ್ಕಾರ ಬ್ರಿಟೀಷರೊಡನೆ ಮಾಡಿದ ಪೋರ್ಟ್ಸ್ ಪೌತ್ ಒಪ್ಪಂದದ ಬಗ್ಗೆ. ಇರಾಕಿ ಸಾರ್ವಭೌಮತ್ವವನ್ನು ಇನ್ನಷ್ಟು ಮೊಟಕುಗೊಳಿಸುವ ಈ ಒಪ್ಪಂದದ ವಿರುದ್ಧ ಲಕ್ಷಾಂತರ ಜನರ ಪ್ರತಿಭಟನಾ ಪ್ರದರ್ಶನ ಬಾಗ್ದಾದ್‌ನಲ್ಲಿ ನಡೆಯಿತು. ಪೋಲೀಸರ ಮಶಿನ್‌ಗನ್‌ಗೆ ಸಿಕ್ಕಿ ನಾಲ್ಕುನೂರು ಜನ ಬಾಗ್ದಾದ್‌ನ ಬೀದಿಗಳಲ್ಲಿ ಪ್ರಾಣಬಿಟ್ಟರು. ಕಾರ್ಮಿಕರ ಮುಷ್ಕರಗಳಲ್ಲದೆ, ಮೂರು ಸಾವಿರ ಕಾರ್ಮಿಕರ ಚಾರಿತ್ರಿಕ ಜಾಥಾ (ಹಡಿತಾ ತೈಲ ಪಂಪಿಂಗ್ ಸ್ಟೇಶನ್‌ನಿಂದ 250 ಕಿ.ಮೀ ದೂರದ. ಬಾಗ್ದಾದ್‌ಗೆ) ದೇಶದಲ್ಲಿ ವಿದ್ಯುತ್ ಸಂಚಾರ ಕಂಡಿತ್ತು. ಪ್ರಧಾನಮಂತ್ರಿ ದೇಶ ಬಿಟ್ಟು ಹೋಗಿದ್ದ. ಈ ಒಪ್ಪಂದ ಜಾರಿಯಾಗಲಿಲ್ಲ. ಆದರೆ ಸರ್ಕಾರ ತುರ್ತು ಪರಿಸ್ಥಿತಿ ಮತ್ತು ಧರ್ಮಚಕ್ರ ಹರಿಯಬಿಟ್ಟು ನಿಧಾನವಾಗಿ ದೇಶದ ಮೇಲೆ ಹತೋಟಿ ಸಾಧಿಸಿತು. ನೂರಾರು ಕಮ್ಯುನಿಸ್ಟರ ಕೊಲೆಯಾಯಿತು. ಬಂಧಿಸಿ ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಯಿತು. ಮಹಾಕಾರ್ಯದರ್ಶಿ ಫಾಹದ್ ಮತ್ತು ಇಬ್ಬರು ಪಿಬಿ ಸದಸ್ಯರನ್ನು ಗಲ್ಲಿಗೇರಿಸಲಾಯಿತು. ಮೂರು ನಾಯಕರ ದೇಹಗಳನ್ನು ಬಾಗ್ದಾದ್‌ನ ಮೂರು ಬೇರೆ ಬೇರೆ ಪ್ರದೇಶಗಳಲ್ಲಿ ನೇತು ಹಾಕಲಾಯಿತು. 'ಕಮ್ಯುನಿಸ್ಟ್ ಪಕ್ಷ ಹುತಾತ್ಮರ ಪಕ್ಷ' ಎಂದು ಕರೆಯಲ್ಪಡುತ್ತಿತ್ತು.

ಸರ್ಕಾರ ಎಷ್ಟು ಪ್ರಯತ್ನಿಸಿದರೂ ಕಮ್ಯುನಿಸ್ಟ್ ಪಕ್ಷವನ್ನು ಅಳಿಸಿಹಾಕಲು ಸಾಧ್ಯವಾಗಲಿಲ್ಲ. ಹೊಸ ಯುವ ನಾಯಕತ್ವದಲ್ಲಿ ಇನ್ನೊಂದು ಸಾಮೂಹಿಕ ಹೋರಾಟಗಳ ಅಲೆ ಎದ್ದು ನವೆಂಬರ್ 1952 ರಲ್ಲಿ 'ಇಂತಿಫರಾ' (ದಂಗೆ) ಎಂದು ಕರೆಯಲಾಗುವ ಇರಾಕ್ ಅಲ್ಲೋಲಕಲ್ಲೋಲವಾಯಿತು. 1952 ರಿಂದ 58 ರವರೆಗೆ ಪಕ್ಷ ರೈತ ಸಂಘಟನೆಗಳು, ಸೈನಿಕರು ಮತ್ತು ಆಫೀಸರುಗಳ ಹೋರಾಟಕ್ಕೆ ಇಳಿಸಿ ಅವರ ಪ್ರಬಲ ಸಂಘಟನೆಗಳನ್ನು ಕಟ್ಟಿತು. ಸೈನಿಕರು ಮತ್ತು ಆಫೀಸರುಗಳು ರಾಷ್ಟ್ರೀಯ ಸಂಘಟನೆ ಸಾಮೂಹಿಕ ಹೋರಾಟ ಮತ್ತು ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿತು.

1958 ರ ಕ್ರಾಂತಿ ಮತ್ತು ಕಮ್ಯುನಿಸ್ಟರು

ಈ ಚಟುವಟಿಕೆಗಳಿಂದ 1958 ಜುಲೈನಲ್ಲಿ ಬ್ರಿಟೀಷ್ ಕೈಗೊಂಬೆ ಸರ್ಕಾರವನ್ನು ಕಿತ್ತೊಗೆದ ಕ್ರಾಂತಿಯಲ್ಲಿ ಪಕ್ಷ ಪ್ರಮುಖ ಪಾತ್ರವಹಿಸಿತು. ಅಷ್ಟು ಹೊತ್ತಿಗೆ ಪ್ರಮುಖ ರಾಜಕೀಯ ಶಕ್ತಿಯಾಗಿ ಹೊಮ್ಮಿತ್ತು. ರಾಷ್ಟ್ರೀಯವಾದಿ ಸೈನ್ಯ ಜನರಲ್ ಕಾಸಿಮ್ ನಾಯಕತ್ವದಲ್ಲಿ ಅಧಿಕಾರ ವಹಿಸಿಕೊಂಡಿತು. ಅಷ್ಟು ಹೊತ್ತಿಗೆ ಪಕ್ಷದ ನಾಯಕತ್ವದ ಸಾಮೂಹಿಕ ಸಂಘಟನೆಗಳು ಸದಸ್ಯತ್ವ ರೈತ(2 ಲಕ್ಷ), ಕಾರ್ಮಿಕರು(ಎರಡುವರೆ ಲಕ್ಷ), ಮಹಿಳೆಯರು (20 ಸಾವಿರ), ಯುವಜನ(84 ಸಾವಿರ) ಅಗಾಧವಾಗಿ ಬೆಳೆದಿತ್ತು. 1958 ರಲ್ಲಿ ರಚಿತವಾದ ಸರ್ಕಾರ ಕಮ್ಯುನಿಸ್ಟರನ್ನು ಒಳಗೊಳ್ಳಬೇಕೆಂದು ಸಾರ್ವತ್ರಿಕ ಜನಾಭಿಪ್ರಾಯವಾಗಿತ್ತು. ಭೂಸುಧಾರಣೆ ಮತ್ತು ಕಾರ್ಮಿಕ ಕಲ್ಯಾಣ ಕಾನೂನುಗಳನ್ನು ತರಲು ತೀವ್ರ ಸಾಮೂಹಿಕ ಒತ್ತಡವಿತ್ತು. 1959 ಮೇ ದಿನದಂದು ಮೂರು ಲಕ್ಷ ಜನ ಬಾಗ್ದಾದ್ ಬೀದಿಗಳಲ್ಲಿ ನಡೆದು ಕಮ್ಯುನಿಸ್ಟರನ್ನು ಸರ್ಕಾರದಲ್ಲಿ ಸೇರಿಸಲು ಒತ್ತಾಯಿಸಿದರು.

ರಾಷ್ಟ್ರೀಯ ಸೈನ್ಯದ ಒಂದು ವಿಭಾಗ ಮತ್ತು ಭೂರ್ಜ್ವ- ಭೂಮಾಲಿಕ ಆಳುವ ವರ್ಗಗಳ ನಾಯಕರು ಇದನ್ನು ಬಲವಾಗಿ ವಿರೋಧಿಸಿದರು. ಸರ್ಕಾರದಲ್ಲಿ ಭಾಗವಹಿಸಲು ಒತ್ತಾಯಿಸಬೇಕೆ? ಇದು ಶಿಶು ಅವಸ್ಥೆಯಲ್ಲಿರುವ 'ರಾಷ್ಟ್ರೀಯ ಕ್ರಾಂತಿ'ಯ ಮೇಲೆ ಏನು ಪರಿಣಾಮ ಬೀರಿತು. ಈ ಬಗ್ಗೆ ಕೇಂದ್ರ ಸಮಿತಿಯಲ್ಲಿ ತೀವ್ರ ಚರ್ಚೆ ನಡೆದು, ಈ ಹಂತದಲ್ಲಿ ಈ ಒತ್ತಾಯವನ್ನು ಹಿಂತೆಗೆಯಲು ಪಕ್ಷ ನಿರ್ಧರಿಸಿತು. ಆದರೆ ಇದು ಕಮ್ಯುನಿಸ್ಟ್ (ಪಕ್ಷ ಇನ್ನೂ ಕಾನೂನು ಬಾಹಿರವಾಗಿತ್ತು) ಮೇಲೆ ದಮನವನ್ನು ಹೆಚ್ಚಿಸಿತು. ರಾಜಕೀಯ ಪಕ್ಷಗಳ ರಿಜಿಸ್ಟ್ರೇಷನ್ ಬಗ್ಗೆ ಬಂದ ಹೊಸ ಕಾನೂನಿನನ್ವಯ ಕಮ್ಯುನಿಸ್ಟ್ ಪಕ್ಷದ ಅರ್ಜಿಯನ್ನು ಕಾಸಿಮ್ ಸರ್ಕಾರ

ಪುಟ 11 ಕ್ಕೆ

'ಶ್ರೀನಿವಾಸ ಬಜಾಲ್ ಅಮರ್ ಹೈ'

ಭಾವಪೂರ್ಣ ಸ್ಮರಣೆ

ಕಾಂ.ಶ್ರೀನಿವಾಸ ಬಜಾಲ್ ಹಿಂದೂ ಯುವ ಸೇನೆಯ ಗೂಂಡಾಗಳಿಂದ ಹತ್ಯೆಗೀಡಾಗಿ ಒಂದು ವರುಷವಾಯಿತು. ಅಗಲಿತ ಹುತಾತ್ಮನ ನೆನಪು ಯುವ ಚೈತನ್ಯಗಳಲ್ಲಿ ರೋಮಾಂಚನ, ಬದ್ಧತೆ ತಂದಿದೆ



ಪ್ರಥಮ ಹುತಾತ್ಮ ದಿನಾಚರಣೆ

ಶ್ರೀನಿವಾಸ್‌ರವರ ಪ್ರಥಮ ಹುತಾತ್ಮ ದಿನಾಚರಣೆಯನ್ನು ಜಿಲ್ಲೆಯಾದ್ಯಂತ ಅತ್ಯಂತ ಯಶಸ್ವಿಯಾಗಿ ನಡೆಸಲಾಗಿದೆ. ಅಂದು ಜೂನ್ 22 ರ ಆದಿತ್ಯವಾರ. ದಿನವಿಡೀ ಭಾರೀ ಮಳೆ. ಕಳೆದ ಸತತ 3 ದಿನಗಳಿಂದ ಸುರಿದ ಧಾರಾಕಾರ ಮಳೆಯಿಂದಾಗಿ ಮಂಗಳೂರಿನ ಹಲವು ಪ್ರದೇಶಗಳು ಜಲಾವೃತಗೊಂಡಿದ್ದವು. ಅವುಗಳಲ್ಲಿ ಜಪ್ಪಿನಮೊಗರು ಕೂಡ ಒಂದು. ಒಂದೋ ಸೊಂಟದವರೆಗಿನ ನೀರಿನಲ್ಲಿ ಘೋಷಣೆಯನ್ನು ಹಾಕುತ್ತಾ ಮೆರವಣಿಗೆ ಸಾಗಬೇಕು, ಇಲ್ಲವೇ 7-8 ಕಿ.ಮೀ ನ ಇನ್ನೊಂದು ದಾರಿಯಲ್ಲಿ ಬಸ್ಸಿನಲ್ಲಿ ಹೋಗಿ ಸಭೆಯಲ್ಲಿ ಭಾಗವಹಿಸುವುದು. ಅಂತಿಮವಾಗಿ ಜಲಾವೃತಗೊಂಡಿರುವ ಪ್ರದೇಶದಲ್ಲಿ ನೂರಾರು ಕಾರ್ಯಕರ್ತರು ಘೋಷಣೆಗಳನ್ನು ಕೂಗುತ್ತಾ ಸಾಗಿದ್ದೇ ಸಾಗಿದ್ದು. ಅಲ್ಲಿದ್ದ ಜನರಿಗೆ ಇದೊಂದು ಕುತೂಹಲಕಾರಿ ಅಂಶ. ಕೋಮುವಾದಿ ಶಕ್ತಿಗಳಿಂದ ಹತರಾದ ಶ್ರೀನಿವಾಸರವರನ್ನು ನೆನಪಿಸುವಂತಹ ಘೋಷಣೆಗಳನ್ನು ಹಾಕುತ್ತಾ, ಭಾರೀ ಮಳೆಯ ನಡುವೆಯೂ ಸಾಗುವ ಡಿ.ವೈ.ಎಫ್.ಐ ಕಾರ್ಯಕರ್ತರ ಬದ್ಧತೆ ಎಲ್ಲರ ಗಮನ ಸೆಳೆಯಿತು. ಮೆರವಣಿಗೆಯು ಮುಟ್ಟಿದ ಕೂಡಲೇ ಸಾರ್ವಜನಿಕ ಸಭೆಗೆ ತಯಾರಾಗಿ ನಿಂತಿತು. ಬಜಾಲ್ ಪಕ್ಕಲಡ್ಕ ಪ್ರದೇಶ. ಬಾರೀ ಮಳೆಯ ನಡುವೆಯೂ ನೂರಾರು ಜನರು ಕೋಮುಸೌಹಾರ್ದತೆಯ ಪ್ರತೀಕವಾಗಿದ್ದ ಸಂಗಾತಿ ಶ್ರೀನಿವಾಸ್‌ರವರನ್ನು ನೆಪಿಸಲು ಟೊಂಕ ಕಟ್ಟಿ ಬಂದಿರುವುದು ಅಂದಿನ ವಿಶೇಷವಾಗಿತ್ತು.

ಘಟನೆಯ ಹಿನ್ನೆಲೆ, ಬಳಿಕ ಆದ ಬೆಳವಣಿಗೆ, ಡಿ.ವೈ.ಎಫ್.ಐ ನ ತೀವ್ರ ಸ್ಪಂದನ ಮುಂತಾದ ವಿಷಯಗಳ ಬಗ್ಗೆ ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್‌ರವರಿಂದ ಪ್ರಸ್ತಾವನೆ. ಬಳಿಕ ಯುವಜನರಿಗೆ ಸ್ಫೂರ್ತಿ ನೀಡುವ ಭಾಷಣ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ.ವೈ.ಗುರುಶಾಂತ್‌ರವರಿಂದ. ವಸತಿ ಸಮಸ್ಯೆ, ಅನಾರೋಗ್ಯ ಮುಂತಾದ ಮೂಲಭೂತ ಸಮಸ್ಯೆಗಳು ಇಂದಿಗೂ ತಾಂಡವವಾಡುತ್ತಿದೆ. ಇಂತಹ ಅವ್ಯವಸ್ಥೆಗಳ ವಿರುದ್ಧ ಯುವಜನರು ಸ್ವರ ಎತ್ತಬೇಕಾಗಿದೆ. ವಿಪರ್ಯಾಸವೆಂದರೆ ದೇಶವನ್ನು ಕಟ್ಟಬೇಕಾದ ಯುವಜನತೆ, ದೇಶ ಒಡೆಯುವದಕ್ಕೆ ತೊಡಗಿಸಲಾಗುತ್ತಿದೆ. ಕೋಮುವಾದಿ ಉಗ್ರಗಾಮಿ-ಭಯೋತ್ಪಾದಕರ ಚಟುವಟಿಕೆಗಳಿ ಅಸಂಖ್ಯಾತ ನಿರುದ್ಯೋಗಿ ಯುವಕರಿರುವುದು ಭಾರೀ ಆತಂಕದ ವಿಷಯ. ಇದ ಪರಿಣಾಮವಾಗಿಯೇ ಯುವಜನತೆ ಚಾಕುಚೂ ಸಂಸ್ಕೃತಿಯನ್ನು ಅವಲಂಬಿಸುವಂತಾಗಿದ ಯುವಜನರ ಹಿತಗಳಿಗಾಗಿ, ತನ್ನ ಪ್ರಾಣವ ನೀಡಿದ ಶ್ರೀನಿವಾಸ್‌ರವರ ಆದರ್ಶವನ್ನು ಸದ ಸ್ಮರಣೀಯವೆಂದು ಯುಜನತೆಗೆ ಕರೆ ನೀಡಿದರ

ಶ್ರೀನಿವಾಸರ ಕೊಲೆಗೈದ ಹಿಂದೂ ಯು ಸೇನೆಯೆಂಬ ಕ್ರಿಮಿನಲ್ ಸಂಘಟನೆ "ಶಾಂತಿಗಾಗಿ ಸಂಘರ್ಷ" ಎಂಬ ಘೋಷಣೆ ಹಿಂದಿರುವ ವಿಕೃತ ಕೋಮುವಾದಿ ಅಜೆಂಡಾ ಮನಸ್ಸಿಗೆ ನಾಟುವಂತೆ ಹೇಳಿದ ಡಿ.ವೈ.ಎಫ್ ರಾಜ್ಯಾಧ್ಯಕ್ಷ ಕೆ.ಎನ್.ಉಮೇಶ್‌ರವರ ಶಾಂತಿಗಾಗಿ ಸಂಘರ್ಷ ಕೋಮುವಾದದ ವಿರು ಹೋರಾಡಿದ ಶ್ರೀನಿವಾಸರನ್ನು ಕೋಮುವಾ ಶಕ್ತಿಗಳೇ ಕೊಲೆಗೈದಿದ್ದಾರೆ. ಪರಂಪರೆ ಇರುವ ಶಕ್ತಿಗಳೇ ಸಂಘಟಕನನ್ನೇ ಸಾಯಿಸಿದರೆ ಸಂಘ ಯಾವತ್ತೂ ಸಾಯುಮವುದಿಲ್ಲ ಎಂ ಕೋಮುವಾದಿಗಳಿಗೆ ಬಹಿರಂಗವಾ ಸವಾಲೆಸೆದರು.

ನೆರೆಯ ಜಿಲ್ಲೆಯಾದ ಕಾಸರಗೋಡಿನ ಬಲಿಷ್ಠವಾದ ಯುವಜನ ಚಳುವಳಿ ನೇತಾರರೂ, ಡಿ.ವೈ.ಎಫ್.ಐ ಜಿ ಕಾರ್ಯದರ್ಶಿಯಾದ ವಿ.ವಿ.ರಮೇಶ್‌ರ ಮಾತನಾಡಿದರು. ಸಭೆಯ ಅಧ್ಯಕ್ಷತೆಯ ಡಿ.ವೈ.ಎಫ್.ಐ ಮಾಜಿ ಜಿಲ್ಲಾಧ್ಯಕ್ಷರಾ ಕೆ.ಯಾದವ ಶೆಟ್ಟಿಯವರು ವಹಿಸಿದ ವೇದಿಕೆಯಲ್ಲಿ ಡಿ.ವೈ.ಎಫ್.ಐ ನಗರಾಧ್ಯಕ್ಷ ತಿಮ್ಮಪ್ಪ ಕಾವೂರು, ಕುಂಬಳೆ ಬ್ಲಾಕ್ ಕಾರ್ಯದ ರತ್ನಾಕರರವರು ಉಪಸ್ಥಿತರಿದ್ದರು. ಕೊನೆ ಡಿ.ವೈ.ಎಫ್.ಐ ಜಿಲ್ಲಾ ಉಪಾಧ್ಯಕ್ಷರಾದ ಶಶಿ ಶಕ್ತಿನಗರರವರು ವಂದಿಸಿದರು.

ಜೂನ್-24 ರಂದು ಬೆಳಿಗ್ಗೆ 7.30 ರ ಹೊ ಕೊಲೆಯಾದ ಜಾಗದಲ್ಲೇ ಡಿ.ವೈ.ಎಫ್.ಐ ಜಿ ಸಮಿತಿ ಸದಸ್ಯರಾದ ಅಶೋಕ್ ಸಾಲ್ಯಾನ್‌ರ ಧ್ವಜಾರೋಹಣ ನಡೆಸಿದರು. ಹಾಗೂ ಜಿಲ್ಲೆ ವಿವಿದೆಡೆಗಳಲ್ಲಿಯೂ ಧ್ವಜಾರೋಹ ನಡೆಸಲಾಯಿತು.

ರಕ್ತದಾನ ಶಿಬಿರ: ಅಂದು ಮಂಗಳೂರು ನ ಕೇಂದ್ರದಲ್ಲಿ ರಕ್ತದಾನ ಶಿಬಿರವ ಹಮ್ಮಿಕೊಳ್ಳಲಾಯಿತು. ಕೇವಲ 27 ವ ಪ್ರಾಯದಲ್ಲೇ ಹುತಾತ್ಮರಾಗಿ 17 ಬಾರಿ ರಕ್ತದ ಮಾಡಿ ಹಲವಾರು ಜೀವಗಳನ್ನು ಉಳಿಸಿ ಹಿನ್ನೆಲೆಯಲ್ಲಿ ಪ್ರಾಯೋಜಿಸಿರುವ ರಕ್ತದ ಶಿಬಿರವನ್ನು ಡಿ.ವೈ.ಎಫ್.ಐ ಮಾ ಜಿಲ್ಲಾಧ್ಯಕ್ಷರಾದ ಯಾದವ ಶೆಟ್ಟಿಯವ ಉದ್ಘಾಟಿಸಿದರು. ಜಿಲ್ಲಾ ವೆನ್‌ಲಾಕ್ ಸರ ಆಸ್ಪತ್ರೆಯ ಸಹಯೋಗದೊಂದಿಗೆ ನಡೆದಿರು ಶಿಬಿರದಲ್ಲಿ ಆಸ್ಪತ್ರೆಯ ವೈದ್ಯಾಧಿ ಡಾ.ಸುಚಿತ್ರಾರವರು ಉಪಸ್ಥಿತರಿದ್ದ ಸಮಾರಂಭದಲ್ಲಿ ಡಿ.ವೈ.ಎಫ್.ಐ ನಾಯಕರ ಸುನಿಲ್‌ಕುಮಾರ್ ಬಜಾಲ್, ತಿಮ್ಮಪ್ಪ ಕಾವೂ ದಯಾನಂದ ಶೆಟ್ಟಿ, ಸಂತೋಷ್ ನೀತಿನ ದೀಪಕ್ ಬಜಾಲ್, ಮುನೀರ್ ಕಾಟಿ ವಾಸುದೇವ, ಕುಲಶೇಖರ, ಶಶಿಧರ್ ಶಕ್ತಿ ಮುಂತಾದವರು ಉಪಸ್ಥಿತರಿದ್ದರು.

• ನಿತಿ, ಮಂಗಳ

ಆದರ್ಶಗಳ ಉಳಿಸುವತ್ತ...

"ಹತ್ಯೆಗೀಡಾದ ಶ್ರೀನಿವಾಸ್ ಬಜಾಲ್ ತಾಯಿಗೀಗ ಡಿಫಿ ಸಂಗಾತಿಗಳೇ ಮಕ್ಕಳು", "ಭೌತಿಕವಾಗಿ ಇಲ್ಲವಾದರೂ ಜನಮಾನಸದಲ್ಲಿ ಉಳಿದುಕೊಂಡಿರುವ ಶ್ರೀವಾಸ್ ಬಜಾಲ್" "ಸಾವಿನಲ್ಲೂ ಬದುಕಿದ ಬಜಾಲ್ ಶ್ರೀನಿವಾಸ", ಎಂಬಿತ್ಯಾದಿ ಮಾತುಗಳನ್ನು ಡಿ.ವೈ.ಎಫ್.ಐ ಕಾರ್ಯಕರ್ತರು ಹೇಳಿದರೆ ಅತಿಶಯೋಕ್ತಿಯಲ್ಲ. ಬದಲಿಗೆ ಮಂಗಳೂರಿನ ಜನಪ್ರಿಯ ಪತ್ರಿಕೆಗಳಾದ ಕರಾವಳಿ ಅಲೆ, ವಿಜಯಕರ್ನಾಟಕ, ಮಂಗಳೂರು ಮಿತ್ರ ಮುಂತಾದ ಪತ್ರಿಕೆಗಳು ತಲೆಬರಹದಡಿಯಲ್ಲಿ ಶ್ರೀನಿವಾಸ್ ಬಜಾಲ್‌ರ ತ್ಯಾಗಬಲಿದಾನವನ್ನು ಕೊಂಡಾಡಿದೆ.

ಜೂನ್- 24 ರಂದು ನಮ್ಮೆಲ್ಲರ ಒಡನಾಡಿ, ಸ್ನೇಹಜೀವಿ ಪರೋಪಕಾರಿ, ಕ್ರೀಡಾಪಟು, ಸಹೃದಯಿ ಸಂಗಾತಿ ಶ್ರೀನಿವಾಸ ಬಜಾಲ್‌ರನ್ನು ಬೆಳಿಗ್ಗೆ 7.30 ರ ಹೊತ್ತಿಗೆ ಬಿಸಿಲೇರಿದ ಬೆಳಕಿನಲ್ಲಿ ಮನೆಯ ಪಕ್ಕದಲ್ಲೇ ಕೊಚ್ಚಿ ಕೊಲೆಗೈದ ಘಟನೆ ಇಂದಿಗೂ ಇಡೀ ರಾಜ್ಯದಲ್ಲಿ ಹಚ್ಚಹಸುರಾಗಿದೆ. ದೇಹ ಛಿದ್ರವಾದರೂ ದೇಶವನ್ನು ಛಿದ್ರವಾಗಲು ಬಿಡಲಾರೆವು. "ಕಾರ್ಯಕರ್ತರೇ ಸಂಘಟನೆಯ ಆಸ್ತಿ", ಮುಂತಾದ ಧ್ಯೇಯವನ್ನು ಹೊಂದಿರುವ ಡಿ.ವೈ.ಎಫ್.ಐ ಸಂಘಟನೆಯು ಮಾತ್ರವೇ ಹುತಾತ್ಮ ಸಂಗಾತಿ ಶ್ರೀನಿವಾಸ್‌ರವರ ಮನೆಯ ಸಂಪೂರ್ಣ ಜವಾಬ್ದಾರಿವಹಿಸಿದೆ.

ಕೊಲೆಯಾದ ಒಂದೇ ವಾರದಲ್ಲಿ ಸಾವಿರಾರು ಜನರಿಂದ ತೀವ್ರ ರೀತಿಯ ಪ್ರತಿಭಟನೆ ಬಜಾಲ್‌ನಲ್ಲಿ ನಡೆಯಿತು. ಇಡೀ ರಾಜ್ಯದಲ್ಲಿ ಕಾರ್ಯಕರ್ತರಿಂದ ಹಿತೈಷಿಗಳಿಂದ ಸಂಗ್ರಹಿಸಿದ ಹಣದಲ್ಲಿ 1,60,000 ರೂ.ನ್ನು ಬ್ಯಾಂಕಿನಲ್ಲಿ ಭದ್ರತಾ ಠೇವಣಿ ಇಟ್ಟು ಮನೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುತ್ತಿದೆ. ಮನೆಯನ್ನು ರಿಪೇರಿ ಮಾಡಿಸಬೇಕು, ಮನೆಗೆ ಕರೆಂಟು ಹಾಕಿಸಬೇಕೆಂದು ಬಹಳ ದಿನಗಳಿಂದ ಕನಸು ಕಾಣುತ್ತಿದ್ದ ಶ್ರೀನಿವಾಸರ ಕನಸನ್ನು ಡಿ.ವೈ.ಎಫ್.ಐ ಕಾರ್ಯಕರ್ತರೇ ನನಸಾಗಿಸಿದ್ದಾರೆ. ಶ್ರೀನಿವಾಸ್ ಬಜಾಲ್‌ರ ಹೆಸರಿನಲ್ಲಿ 25,000/- ರೂಯನ್ನು ದತ್ತಿ ನಿಧಿ ಸ್ಥಾಪಿಸಿ, ಅದರಲ್ಲಿ ಬರುವ ಹಣದಿಂದ ಬಜಾಲ್ ಪ್ರದೇಶದಲ್ಲಿ ಪ್ರತೀ ವರ್ಷ ಅತೀ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಯನ್ನು ಸನ್ಮಾನಿಸಲಾಗುವುದು. ಹಾಗೂ ಪ್ರತಿ ವರ್ಷ ಹುತಾತ್ಮ ದಿನಾಚರಣೆಯನ್ನು ಆಚರಿಸುವುದು ಹೀಗೆ ಶ್ರೀನಿವಾಸ ಬಜಾಲ್ ರವರ ತ್ಯಾಗಬಲಿದಾನದ ಪರಂಪರೆಯನ್ನು ಎತ್ತಿ ಹಿಡಿಯುತ್ತಾ ಅವರ ಆದರ್ಶಗಳನ್ನು ಜನಮಾನಸದಲ್ಲಿ ಬೇರೂರುವಂತೆ ಮಾಡುವುದೇ ಡಿ.ವೈ.ಎಫ್.ಐ ಉದ್ದೇಶವಾಗಿದೆ.



ರಕ್ತದಾನ ಶಿಬಿರದಲ್ಲಿ ವೈದ್ಯಾಧಿಕಾರಿ, ಸುನೀಲ್ ಕುಮಾರ್ ಮತ್ತು ಯಾದವಶೆಟ್ಟಿ

ಸಾರ್ವಜನಿಕರಿಂದ ರಸ್ತೆ ಉದ್ಘಾಟನೆ....

ಪುಟ 4 ರಿಂದ

ಅಧಿಕ ಮಂದಿ ಡಿ.ವೈ.ಎಫ್.ಐ.ಯ ಬಾವುಟ, ಬ್ಯಾನರ್ ಹಿಡಿದು ಮೆರವಣಿಗೆಯ ಮೂಲಕ ಜಿಲ್ಲಾ ಪಂಚಾಯತ್ ಕಛೇರಿ ಮುಂದೆ ಧರಣಿ ನಡೆಸಿದರು. ಅಧ್ಯಕ್ಷರಾಗಲಿ, ಅಧಿಕಾರಿಗಳಾಗಲೀ ಹೊರಗೆ ಬಂದು ಮಾತುಕತೆ ಔದಾರ್ಯ ತೋರಲಿಲ್ಲ. ಮಧ್ಯಾಹ್ನ ಅಧಿಕಾರಿಗಳು ಊಟಕ್ಕೆ ಹೊರಬರದಂತೆ ಪ್ರದರ್ಶನಕಾರರು ಬಾಗಿಲು ಬಂದ್ ಮಾಡಿದರು. ಪೊಲೀಸ್ ಅಧಿಕಾರಿಗಳು ಬಂದು ಪ್ರದರ್ಶನಕಾರರನ್ನು ಚದುರಿಸಲು ನೋಡಿದರೂ ಸಾಧ್ಯವಾಗಲಿಲ್ಲ. ಪರಿಸ್ಥಿತಿಯ ಗಂಭೀರತೆಯನ್ನು ಕಂಡು ಕೂಡಲೇ ಅಧಿಕಾರಿಗಳು ಸ್ಥಳಕ್ಕೆ ಬರುವಂತೆ ಪೊಲೀಸ್ ಅಧಿಕಾರಿಗಳಿಗೆ ಒತ್ತಾಯ ಮಾಡಿದರು. ಕೂಡಲೇ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಬಂದು ಈ ಸಮಸ್ಯೆಯನ್ನು 15 ದಿನದಲ್ಲಿ ಪರಿಹರಿಸುವ ಮತ್ತು ಈ ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ರಸ್ತೆ ಪರಿಶೀಲಿಸುವುದಾಗಿ ಭರವಸೆ ನೀಡಿದರು.

ಮರುದಿನದಿಂದಲೇ ಈ ರಸ್ತೆಗೆ ತೇಪೆ ಹಾಕುವ ಕೆಲಸ ಆರಂಭವಾಯಿತು. ಈ ತೇಪೆ ಹಾಕುವುದನ್ನೂ ವಿರೋಧಿಸಿದಾಗ ತತ್ಕಾಲಕ್ಕೆ ಮಾತ್ರ ತೇಪೆ ಹಾಕುತ್ತೇವೆ. ಇದಕ್ಕೆ ಬೇಕಾದ ಹಣ ಮಂಜೂರಾದ ಕೂಡಲೇ ಸುಸಜ್ಜಿತ ರಸ್ತೆ ನಿರ್ಮಿಸುವುದಾಗಿ ಭರವಸೆ ಬಂತು.

2003 ನೇ ವರ್ಷದ ಮೇ ತಿಂಗಳ ಮೊದಲ ವಾರದಲ್ಲಿ ಅಲೆವೂರಿನಿಂದ ಮರ್ಣೆವರೆಗಿನ 6 ಕಿ.ಮೀ ದೂರದ ರಸ್ತೆಗೆ ಡಾಮರೀಕರಣ ಮಾಡಿದ್ದಾರೆ. ರಸ್ತೆಗಾಗಿ ನಡೆದ ಹೋರಾಟ ಫಲಕಾರಿಯಾಗಿದ್ದಕ್ಕೆ ಈ ಊರಿನ ಜನರಲ್ಲಿ ಈಗ ಡಿ.ವೈ.ಎಫ್.ಐ. ಬಗ್ಗೆ ವಿಶ್ವಾಸ ಮತ್ತು ಮಮತೆ ಮೂಡಿದೆ. ಈ ಉತ್ಸಾಹದಲ್ಲಿ ಮೇ 9 ರಂದು ಯುವಕರು, ನಾಗರೀಕರು ಒಟ್ಟು ಸೇರಿ ದಿಢೀರ್ ಆಗಿ ರಸ್ತೆ ಡಾಮರೀಕರಣ ಉದ್ಘಾ ಕಾರ್ಯಕ್ರಮ ಹಾಕಿಕೊಂಡರು. ಈ ಉ ನಾಗರೀಕರೂ, ಶಿಕ್ಷಕರೂ ಆದ ಫೆಡ್ರಿಕ್ ಪೆ ರಸ್ತೆ ಉದ್ಘಾಟನೆ ನೆರವೇರಿಸಿದರು. ಡಿ.ವೈ.ಎ ರಾಜ್ಯ ಉಪಾಧ್ಯಕ್ಷ ಸುನಿಲ್ ಕುಮಾರ್ ಬಜ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಸಿ. (ಎಂ), ಮುಖಂಡರಾದ ಡೇವಿಡ್ ಎ.ಕ ಮತ್ತು ರಮೇಶ್ ಮೆಂಡನ್ ಈ ಸಮಾರಂಭ ಉಪಸ್ಥಿತರಿದ್ದು ಮಾತನಾಡಿದರು. ಡಿ.ವೈ.ಎ ಮರ್ಣೆ ಘಟಕದ ಕಾರ್ಯದರ್ಶಿ ಸ್ವಾಗತ ಕಾರ್ಯಕ್ರಮ ನಿರ್ವಹಣೆ ಮಾಡಿದರು. ದೇವದಾಸ್ ಪ್ರಭುರವರು ವಂದನಾ ಮಾಡಿದರು.

ವರದಿ: ರಮೇಶ್ ಮೆಂಡನ್ ಅ

ಇತಿಹಾಸದ ಪುಟಗಳಿಂದ

ದೇಶದಲ್ಲಿ ತುರ್ತುಪರಿಸ್ಥಿತಿ ಹೇರಿ 28 ವರುಷಗಳಾದವು. ಸರ್ವಾಧಿಕಾರ ಮತ್ತೆ ತಲೆ ಎತ್ತುತಿರುವ ಈ ದಿನಗಳಲ್ಲಿ ದಮನಕಾಂಡದ ಅಂದಿನ ನೆನಪುಗಳನ್ನು ಮೆಲುಕು ಹಾಕಿದ್ದಾರೆ ಹಿರಿಯ ಸಂಗಾತಿ ಕಾಮ್ರೇಡ್ ವಿ.ಜೆ.ಕೆ.ನಾಯರ್


ಸ್ವಾತಂತ್ರ್ಯ ಮತ್ತು ರೊಟ್ಟಿ

ಈ ವರ್ಷದ ಜೂನ್ 26 ...ರ್ತುಪರಿಸ್ಥಿತಿಯ 25ನೇ ವಾರ್ಷಿಕವಾಗಿತ್ತು. ...ನ ಹಲವು ಘಟಾನುಘಟಿಗಳು ಜೈಲುಕಂಬಿಗಳ ...ದೆ - ಈ ಬಾರಿ ಸಂತೋಷದಿಂದ- ನಿಂತು ...ಟೋ ಹೊಡಿಸಿಕೊಂಡು ಕಾಲು ಶತಮಾನದ ...ದಿನ ತಮ್ಮ ಜೈಲುವಾಸವನ್ನು ಸ್ಮರಿಸಿಕೊಂಡರು. ...ಸಾವಿರಾರು ಜನಗಳನ್ನು ಜೈಲಿಗೆ ಹಾಕಲಾಗಿತ್ತು. ... ಸೆಂಟ್ರಲ್ ಜೈಲಿನಲ್ಲಿ ಎ.ಬಿ.ವಾಜಪೇಯಿ ...ತರ ತಿಹಾರ್ ಜೈಲಿಗೆ ವರ್ಗಾಯಿಸಲಾಯಿತು), ...ಲ್.ಕೆ.ಅಡ್ವಾಣಿ, ಮಧು ದಂಡವತೆ, ...ಎಸ್.ಮಿಶ್ರರನ್ನು ಇಡಲಾಗಿತ್ತು. ಇವರೆಲ್ಲಾ ...ಪಿಗಳು ಆ ದಿನ ಬೆಂಗಳೂರಿನಲ್ಲಿದ್ದರು. ...ಐ(ಎಂ)ನ ಸಂಸತ್ ಸದಸ್ಯರಾದ ...ಜ್ಯೋತಿರ್ಮಯ್ ಬಸು ಮತ್ತು ಕಾಂ.ಸಮರ್ ...ಖರ್ಜಿಯವರು ಕೂಡಾ ಆಗ ಬೆಂಗಳೂರಿ...ದ್ದರು. ಆದರೆ ಅವರನ್ನು ಬಂಧಿಸಲಿಲ್ಲ. ಜೂನ್ ...1975 ರ ಸಂಜೆಯಷ್ಟೆ ನಾವು ಬೆಂಗಳೂರಿನ ...ಲಾಲ್ಬಾಗಿನಲ್ಲಿ ಒಂದು ಸಾರ್ವಜನಿಕ ಸಭೆ ...ರ್ಪಡಿಸಿದ್ದೆವು. ಅಲ್ಲಿ ಕಾರ್ಮಿಕ ವರ್ಗವನ್ನು ...ನಿಧಿಸುವ ಈ ಇಬ್ಬರೂ ಎಂಪಿಗಳು ಇಂದಿರಾ...ಂಧಿಯವರ ಫ್ಯಾಸಿಸ್ಟ್ ಮಾದರಿಯ ...ಜನೆಗಳನ್ನು ವಿವರವಾಗಿ ಖಂಡಿಸಿದ್ದರು; ...ಗ್ರೆಸ್(ಐ) ಸರ್ವಾಧಿಕಾರಶಾಹಿಯ ಅಪಾಯದ ... ಎಚ್ಚರಿಸಿದ್ದರು.

...ಕೆಲವೇ ದಿನಗಳ ಹಿಂದೆ ಬಂದಿದ್ದ ಅಲಹಾ...ದ್ ಹೈಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ...ದಿರಾಗಾಂಧಿಯವರು ರಾಜಿನಾಮೆ ಕೊಟ್ಟು ...ರಟು ಹೋಗಬಹುದು ಎಂಬ ನಿರೀಕ್ಷೆಯಲ್ಲಿ ... ಪ್ರತಿಪಕ್ಷಗಳವರಿದ್ದರು. ಇವರಲ್ಲಿ ...ಮುವಾದಿ ಜನಸಂಘೀಯರಿದ್ದರು; ಪ್ರತಿಗಾಮಿ ...ಕೇಟ್ ನೇತೃತ್ವದ ಸಂಸ್ಥಾ ಕಾಂಗ್ರೆಸ್ಸಿನವರಿದ್ದರು; ...ಗ್ರೆಸ್ - ವಿರೋಧ (ಜತೆಗೆ ಜಾತಿ-ವಿರೋಧ ...ತ್ತು ಇಂಗ್ಲಿಷ್- ವಿರೋಧ) ದ ಸಿದ್ಧಾಂತ ಮತ್ತು ...ರಣೆಯನ್ನು ಬೆಳೆಸಿದ್ದ ಲೋಹಿಯಾ ...ಶಲಿಸ್ಟರಿದ್ದರು; ಯೋಜನೆಗಳಿಗೆ ...ದ್ಧವಾಗಿದ್ದು ಮುಕ್ತ ಉದ್ದಿಮೆ ಪ್ರಿಯರಾಗಿದ್ದ ...ತ್ರ ಪಾರ್ಟಿಯವರಾಗಿದ್ದು ನಂತರ ಹಸಿರು ...ಿಯ ರೈತರ ಮುಖಂಡತ್ವದ ಲೋಕದಳ ...ದ್ದರು. ಮಧ್ಯದಲ್ಲಿ 'ಸಂಪೂರ್ಣ ಕ್ರಾಂತಿ'ಯ ...ಟ್ಟ ಜೆ.ಪಿ (ಜಯಪ್ರಕಾಶ್ ನಾರಾಯಣ್) ...ು. ಪಕ್ಕದಲ್ಲಿ ಬಂಗಾಳ, ಕೇರಳಗಳಲ್ಲಿ ...ಫ್ಯಾಸಿಸ್ಟ್ ಭಯೋತ್ಪಾದನೆಗೆ ಅದಾಗಲೇ ತುತ್ತಾಗಿದ್ದ ಕಾರ್ಮಿಕ ವರ್ಗದ ಪಕ್ಷ ಸಿಪಿಐ(ಎಂ) ಕೂಡಾ ಇತ್ತು.

ಗುಜರಾತ್ ಮತ್ತು ಬಿಹಾರದಲ್ಲಿ ಯುವಜನರು ಆರಂಭಿಸಿದ 'ನವ ನಿರ್ಮಾಣ ಸಮಿತಿ'ಗೆ ಜೆ.ಪಿಯವರ ಚೈತನ್ಯಶಾಲೀ ಮುಖಂಡತ್ವ ಸಿಕ್ಕಿತು. ಅವರ 'ಸಂಪೂರ್ಣ ಕ್ರಾಂತಿ' ಯ ಕರೆ ಇಡೀ ದೇಶದಲ್ಲಿ ವಿದ್ಯುತ್ ಸಂಚಾರ ತಂದಿತ್ತು. ದೇಶದ ಉದ್ದಗಲಕ್ಕೂ ಸಂಚರಿಸಿ ಇಂದಿರಾಗಾಂಧಿಯವರ ಏಕಪಕ್ಷ ಸರ್ವಾಧಿಕಾರದ ವಿರುದ್ಧವಿದ್ದ ಎಲ್ಲಾ ಶಕ್ತಿಗಳನ್ನು ಅವರು ಒಂದುಗೂಡಿಸಿದ್ದರು. ಬುದ್ಧಿಜೀವಿಗಳು, ಪತ್ರಿಕೆಗಳು ಸುಮಾರಾಗಿ ಅವರ ಬೆಂಬಲಕ್ಕೆ ನಿಂತರು. ಆ ವೇಳೆಗಾಗಲೇ ರೈಲ್ವೇ ಕಾರ್ಮಿಕರ ಮುಷ್ಕರಕ್ಕೆ ಹಿಂದಿನಿಂದ ನೇತೃತ್ವ ನೀಡಿದ್ದಕ್ಕಾಗಿ, ಇಂದಿರಾಗಾಂಧಿಯವರ ವೇತನ ಸ್ತಂಭನ ನೀತಿಯ ವಿರೋಧಕ್ಕೆ ಬೆಂಬಲ ನೀಡಿದ್ದಕ್ಕಾಗಿ ಸಿಐಟಿಯು ಸರಕಾರದ ತೀವ್ರ ಧಾಳಿಗೆ ತುತ್ತಾಗಿತ್ತು. ಆದ್ದರಿಂದ ಈ ಎಲ್ಲಾ ಶಕ್ತಿಗಳು ತಮ್ಮ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಬಯಸಿತ್ತು.

ಇಂದಿರಾಗಾಂಧಿ ಎಲ್ಲರನ್ನೂ ಎದುರಿಸಲು ನಿರ್ಧರಿಸಿದರು, ಆಂತರಿಕ ತುರ್ತುಪರಿಸ್ಥಿತಿ ಹೇರಿದರು, ಎಲ್ಲರನ್ನೂ ಜೈಲಿಗಟ್ಟಿದರು. ಕೋರ್ಟುಗಳು ಅವರನ್ನು ಮುಕ್ತಗೊಳಿಸಬಾರದೆಂದು ತಡೆದರು; ತನಗೆ ವಿರುದ್ಧವಾದ ಯಾವುದೇ ದನಿ ಪತ್ರಿಕೆಯಲ್ಲಾಗಲಿ, ಮೆರವಣಿಗೆ- ಮತಪ್ರದರ್ಶನಗಳಲ್ಲಾಗಲೀ ಬರಬಾರದು ಎಂದು ಸೆನ್ಸಾರ್ ಹೇರಿದರು. ಆದರೆ ಆಗ ಬೆಂಗಳೂರಿನಲ್ಲೇ ಇದ್ದ ಅಖಿಲ ಭಾರತ ಸಿಐಟಿಯು ಮುಖಂಡರನ್ನು ಬಂಧಿಸಲಿಲ್ಲ. ಆದರೂ ನಾವು ಭಯದ ಪ್ರತಿಕ್ರಿಯೆ ತೋರಿಸಲಿಲ್ಲ, ಸುಮ್ಮನಿರಲೂ ಇಲ್ಲ. ಅದೇ ಜೂನ್ 26, 1975 ರಂದೇ ಬೆಂಗಳೂರಿನಲ್ಲಿ ಮೈಸೂರು ಬ್ಯಾಂಕ್ ಚೌಕದಲ್ಲಿ ತುರ್ತು ಪರಿಸ್ಥಿತಿ ಹೇರಿಕೆಯ ವಿರುದ್ಧ ಸಾರ್ವಜನಿಕ ಮತಪ್ರದರ್ಶನ ನಡೆಸಿದೆವು, ಕೆಂಬಾವುಟವನ್ನು ಎತ್ತಿ ಹಿಡಿದು ಇಂದಿರಾಗಾಂಧಿ, ಸೆನ್ಸಾರ್‌ಶಿಪ್, ಮೂಲಭೂತ ಹಕ್ಕುಗಳ ಅಮಾನತು ಇತ್ಯಾದಿಗಳ ವಿರುದ್ಧ ಘೋಷಣೆ ಕೂಗಿದೆವು. ನಮ್ಮ ಮೇಲೆ ಗುಂಡು ಹಾರಿಸಲೂ ಇಲ್ಲ, ಬಂಧಿಸಲೂ ಇಲ್ಲ! ನಾವೂ ಸುಮ್ಮನೆ ಕೂರಲಿಲ್ಲ. ಎಕೆಜಿ ಯವರು ಸಂಸತ್ತಿನಲ್ಲಿ ಇಂದಿರಾಗಾಂಧಿಯವರ ಆಂತರಿಕ ತುರ್ತು ಪರಿಸ್ಥಿತಿಯನ್ನು ಕಟುವಾಗಿ ಟೀಕಿಸಿದ್ದ ಭಾಷಣವನ್ನು ಮಾಡಿದ್ದರಲ್ಲದೆ ದೇಶವೆಲ್ಲಾ ಸುತ್ತಿದರು, ಬೆಂಗಳೂರಿಗೂ ಬಂದಿದ್ದರು, ಕಾರ್ಯಾಚರಣೆ ಗಿಳಿಯುವಂತೆ ನಮ್ಮನ್ನೂ ಪ್ರೇರೇಪಿಸಿದರು. ನಾವು ಅವರ ಸಂಸತ್ತಿನ ಭಾಷಣವನ್ನು ಮುದ್ರಿಸಿ ಹಂಚಿದೆವು. ಬಂದೇ ಬಂದರು ಮಧ್ಯರಾತ್ರಿಯಲ್ಲಿ ಬಾಗಿಲು ತಟ್ಟುವವರು! ಎಕೆಜಿ ಭಾಷಣ ಮುದ್ರಿಸಿದ್ದಕ್ಕೆ ಭಾರತ ರಕ್ಷಣಾ ಕಾಯಿದೆಯ ಪ್ರಕಾರ ನನ್ನನ್ನು ಬಂಧಿಸಿದರು, ನನ್ನ ಜತೆಗೆ ಅದನ್ನು ಮುದ್ರಿಸಿದ ಪ್ರಿಂಟರ್ ಮತ್ತು ಅವರ ಮಗನನ್ನೂ ಬಂಧಿಸಿದರು- ಅವನು ಅದನ್ನು ಮುದ್ರಿಸುವುದನ್ನು ನೋಡಿದರಂತೆ.



ವಿ.ಜೆ.ಕೆ. ನಾಯರ್

ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಎಂಪಿಗಳಲ್ಲದೆ ಶಾಸಕರಾಗಿದ್ದ ದೇವೇಗೌಡ, ರಾಮಕೃಷ್ಣ ಹೆಗ್ಡೆ, ನಾಗಪ್ಪ ಆಳ್ವ, ಎ.ಕೆ.ಸುಬ್ಬಯ್ಯ ಇದ್ದರು. 'ಎ' ದರ್ಜೆಯ ಬಂಧಿಗಳಾಗಿದ್ದ ಅವರಿಗೆ ಡಿ.ಐ.ಆರ್.ನಡಿ ಬಂಧಿತರಾಗಿದ್ದ ನಮ್ಮಂತ 'ಬಿ' ದರ್ಜೆಯ ವಿಚಾರಣಾಧೀನ ಬಂಧಿಗಳನ್ನು ಭೇಟಿ ಮಾಡಲು ಸ್ವಾತಂತ್ರ್ಯವಿತ್ತು. ಆ ವೇಳೆಗೆ ನನ್ನ ಜೊತೆಗೆ ಜನಸಂಘದ ಮಲ್ಲಿಕಾರ್ಜುನಯ್ಯ, ಮಳ್ಳೂರು ಆನಂದರಾವ್, ಕೆಲವು ಆರೆಸ್ಸೆಸ್ ಕಾರ್ಯಕರ್ತರು, ನಾಲ್ಕು ಜಮಾತೇ ಇಸ್ಲಾಮಿ ಮುಖಂಡರು, ಒಬ್ಬ ನಕ್ಸಲೀಯ, ಇಬ್ಬರು ಸರ್ವೋದಯ ಮುಖಂಡರು ಇತ್ಯಾದಿ ಇದ್ದರು. ಮೀಸಾ, ಕಾಫಿಪೋಸಾ ಬಂಧಿಗಳನ್ನೆಲ್ಲಾ ನಮ್ಮೊಡನೆ ಸೇರಲು ಬಿಡುತ್ತಿರಲಿಲ್ಲ, ಪ್ರತ್ಯೇಕವಾಗಿ ಕಾಯುತ್ತಿದ್ದರು. ಒಂದೇ ಬ್ಯಾರಾಕಿನಲ್ಲಿ ಕೂಡ ಹಾಕಿದ ನೂರಾರು ಮಂದಿಯಲ್ಲಿ ಆಗ ಸೋಶಲಿಸ್ಟ್ ಪಕ್ಷದ ಜೆ.ಹೆಚ್.ಪಟೇಲ್, ಎಸ್.ವೆಂಕಟರಾಂ, ಸಕಲೇಶಪುರದ ಕಾಫಿ ಪ್ಲಾಂಟರ್ ಸ್ವತಂತ್ರ ಪಾರ್ಟಿಯ ಗಣಪಯ್ಯ ಮುಂತಾದವರಿದ್ದರು. ಅವರ ಬ್ಯಾಂಕಿನ ತೆರೆದಿದ್ದ ಭಾಗವನ್ನು ಮರೆಮಾಡಿದ್ದ ಅಸ್ಬೆಸ್ಟೋಸ್ ಶೀಟುಗಳಲ್ಲಿನ ತೂತುಗಳಿಂದ ಅವರನ್ನೆಲ್ಲಾ ಇಣಕಿ ನೋಡುವ ಅವಕಾಶ ಮಾತ್ರ ಇತ್ತು. ಆದರೆ ಪ್ರತ್ಯೇಕವಾಗಿಡುವ, ದಮನ ಮಾಡುವ ಜೈಲರುಗಳ ವರ್ತನೆ ನಂತರ ಜೈಲಿಗೆ ಸುಮಾರು 600 ಹೊಸ ಬಂಧಿಗಳ ಪ್ರವಾಹ ಬಂದಾಗ ಕೊಚ್ಚಿ ಹೋಯಿತು. ನಾವೇ ಜೈಲಿನ ಆಳುವ ಮಂದಿಯಾಗಿಬಿಟ್ಟೆವು. ಆಗ ಮುಕ್ತ ಅಭಿವ್ಯಕ್ತಿಯ ಏಕಮಾತ್ರ ಜಾಗವೆಂದರೆ ಜೈಲು, ಹೊರಗಿದ್ದ ವಿಶಾಲ ದೇಶವಲ್ಲ. ಹೊರಗೆ ವಿರೋಧ ಕರ್ಕಶಗೊಳ್ಳುತ್ತಿತ್ತು ಎಂಬುದಕ್ಕೆ ಜೈಲಿಗೆ ಬರುತ್ತಿದ್ದ ಮೀಸಾ ಮತ್ತು ಡಿಐಆರ್ ವಿಚಾರಣಾಧೀನ ಬಂಧಿಗಳ ಹೆಚ್ಚಳವೇ ಸಾಕ್ಷಿಯಾಗಿತ್ತು.

ನಂತರ ಜೈಲಿಗೆ ಬಂದವರಲ್ಲಿ ಆಗ ಎಬಿವಿಪಿ ಕಾರ್ಯಕರ್ತರಾಗಿದ್ದ ಪಿ.ಜಿ.ಆರ್.ಸಿಂಧ್ಯಾ ಕೂಡಾ ಇದ್ದರು. ಅಶೋಕ ಹೋಟೇಲಿನಲ್ಲಿ ಕರಪತ್ರ ಹಂಚಿದ್ದಕ್ಕಾಗಿ ಬಂಧಿಸಲಾಗಿತ್ತು. ರಾಮಾ ಜೋಯಿಸ್ ಬಂದರು. ಮೈಕೆಲ್ ಫರ್ನಾಂಡೀಸ್ ಆಗಲೇ ಇದ್ದರು, ಕೊನೆಯ ವೇಳೆಗೆ ಅವರ ಸೋದರ ಲಾರೆನ್ಸ್ ಫರ್ನಾಂಡೀಸರನ್ನು ತಂದು ಪ್ರತ್ಯೇಕ ಸೆಲ್ಲಿಗೆ ಹಾಕಿದರು. ಅವರ ಅಣ್ಣನ ಬುಡಮೇಲು ಚಟುವಟಿಕೆಗಾಗಿ ಅವರಿಗೆ ಚಿತ್ರಹಿಂಸೆ ಕೊಡಲಾಗಿತ್ತು. ಅವರೊಡನೆ ಸ್ನೇಹಲತಾ ರೆಡ್ಡಿಯವರನ್ನು ತಂದು ಮಹಿಳಾ ವಾರ್ಡಿನಲ್ಲಿ ಹಾಕಲಾಯಿತು. ಸಂಸತ್ತಿನಲ್ಲಿ ಮಾಡಿದ ಭಾಷಣವನ್ನು ಪ್ರಕಟಿಸಿದ್ದಕ್ಕೆ ಕಾನೂನು ಕ್ರಮ ಕೈಗೊಳ್ಳುವಂತಿಲ್ಲ ಎಂಬ ಕಾರಣದಿಂದ ಅಕ್ಟೋಬರ್ 76 ರಲ್ಲಿ ನಾನು ಬಿಡುಗಡೆಯಾದ ನಂತರ ಕಾಂ.ಸೂರಿ ಮತ್ತು ಜಗನ್ನಾಥರನ್ನು ದೇವಿಕಾರಾಣಿಯ ಡ್ರೈವರ್ ಚಿನ್ನಪ್ಪನೊಂದಿಗೆ ಜೈಲಿಗೆ ಹಾಕಲಾಯಿತು. ಅವರ ಅಪರಾಧವೆಂದರೆ ತಾತಗುಣಿ ಎಸ್ಟೇಟಿನ ಕೃಷಿ ಕಾರ್ಮಿಕರನ್ನು ಸಂಘಟಿಸಿದ್ದು.

ಬಂಧನದ ಪ್ರವೃತ್ತಿಗಳನ್ನು ಇಲ್ಲಿ ಗಮನಿಸಬೇಕು. ಮೊದಮೊದಲು ಜನಸಂಘ-ಕಾಂಗ್ರೆಸ್(ಒ) ಸ್ವತಂತ್ರ ಪಾರ್ಟಿಯ ಮುಖಂಡರನ್ನು ಮಾತ್ರ ಬಂಧಿಸಿದರು. 'ವ್ಯವಸ್ಥೆ'ಯನ್ನು ವಿರೋಧಿಸಿದಾಗಲೆಲ್ಲಾ ಕಾರ್ಯಕರ್ತರನ್ನು ಬಂಧಿಸಿದರು. 1976 ರ ಮಧ್ಯದ ವೇಳೆಗೆ ತುರ್ತುಪರಿಸ್ಥಿತಿಯನ್ನು ವಿರೋಧಿಸುವ ಚಟುವಟಿಕೆ ತಾರಕಕ್ಕೆ ಏರಿತ್ತು. ಬುಡಮೇಲು ಚಟುವಟಿಕೆಗಳನ್ನು ನಿರ್ದಯವಾಗಿ ದಮನ ಮಾಡುವ ಪ್ರಯತ್ನ ನಡೆಯಿತು. ಆಳುವ ಮಂದಿಗೆ ಹತ್ತಿರವಿದ್ದ ದೇವಿಕಾರಾಣಿ, ರೋರಿಕ್‌ರಂತವರಿಗೆ ಮುಜುಗರ ತರುವ ಯಾವುದೇ ಚಟುವಟಿಕೆಯನ್ನು ದಮನ ಮಾಡಲು ತುರ್ತುಪರಿಸ್ಥಿತಿಯನ್ನು ಬಳಸಲಾಯಿತು. ಕೋಮುವಾದಿ ಬಲಪಂಥೀಯರ ವಿರುದ್ಧವೇ ತನ್ನ ಹೋರಾಟ ಎಂದು ನಂಬಿಸಲು ಇಂದಿರಾಗಾಂಧಿ ಜಮಾತ್ ಮುಖಂಡರನ್ನು ಬಂಧಿಸದರಷ್ಟೆ. ಅದೇ ರೀತಿ ತನ್ನದು ಜನಪರ ಕ್ರಮ ಎಂದು ತೋರಿಸಲು ಜೆ.ಪಿ.ಆಂದೋಲನದಲ್ಲಿನ ತನ್ನ ವಿರೋಧಿಗಳ ಜೊತೆ ಕಳ್ಳಸಾಗಾಣಿಕೆದಾರರು ಇತ್ಯಾದಿಗಳನ್ನು 'ಕಾಫಿಪೋಸಾ' ಕಾನೂನಿನಡಿ ಬಂಧಿಸಿದರು.

ಜೈಲಿನಲ್ಲಿದ್ದವರು ಇದೆಲ್ಲಾ ಏಕಾಯಿತು ಎಂಬ ಚರ್ಚೆಯಲ್ಲಿ ತೊಡಗಿದರು. ಏನು ಮಾಡಬೇಕು? ಯಾವ ದಾರಿ ಹಿಡಿಯಬೇಕು? ಆ ಬಹಿರಂಗ ಘರ್ಷಣೆಯಲ್ಲಿ ಜನಸಂಘಿಗಳ ಪ್ರಕಾರ ಇಂದಿರಾಗಾಂಧಿ 'ಕಮ್ಯುನಿಸ್ಟ್' ರಾದ್ದರಿಂದ ಹೀಗೆ ಮಾಡಿದರು. ಬ್ಯಾಂಕ್ ರಾಷ್ಟ್ರೀಕರಣದೊಂದಿಗೆ, 'ಕಮ್ಯುನಿಸ್ಟ್ ದೇಶಗಳಲ್ಲಿದ್ದಂತೆ ಸ್ವಾತಂತ್ರ್ಯದ ದಮನ' ಮಾಡಿರುವುದು ಇದಕ್ಕೆ ಅವರ ಪ್ರಕಾರ ಸಾಕ್ಷಿ. ತದ್ವಿರುದ್ಧವಾಗಿ ನಾವು ಇಂದಿರಾಗಾಂಧಿಯ ಕ್ರಮಗಳನ್ನು ಫ್ಯಾಸಿಸ್ಟ್ ಮಾದರಿಯವು ಎಂದೆವು. ಈ ಮೊದಲು ಬಂಗಾಳ, ಕೇರಳದಲ್ಲಿ ಎಡಪಂಥೀಯ ವಿರುದ್ದ ಅವರ ಕ್ರಮಗಳು ಫ್ಯಾಸಿಸ್ಟ್ ಪ್ರವೃತ್ತಿಯನ್ನು ತೋರಿದ್ದವು ಎಂದೆವು. ವಾಸ್ತವವಾಗಿ ಜೂನ್ 25 ರ ಸಂಜೆಯ ಸಾರ್ವಜನಿಕ ಸಭೆಯಲ್ಲಿ 'ಫ್ಯಾಸಿಸ್ಟ್ ಅಪಾಯ' ಎಂಬ ಇ.ಎಂ.ಎಸ್.ರವರ ಲೇಖನದ ಅನುವಾದವನ್ನು ಮುದ್ರಿಸಿ ಹಂಚಿದ್ದೆವು. ಜೈಲಿನೊಳಗೂ ಇದನ್ನು ನಾನು ಹಂಚಿದೆ. ಈ ಬಗ್ಗೆ ತೀವ್ರ ಚರ್ಚೆ ನಡೆಯಿತು. ಕೊನೆಗೆ ಅಡ್ವಾಣಿ ನಮ್ಮ ಪರ ನಿಂತರು! ಇಂದಿರಾಗಾಂಧಿ 'ಕಮ್ಯುನಿಸ್ಟರಲ್ಲ' ಇಲ್ಲವಾದರೆ ಅವರು ನಮ್ಮನ್ನೆಲ್ಲಾ ಬಂಧಿಸುತ್ತಿರಲಿಲ್ಲ ಎಂದು ಒಪ್ಪಿದರು. ಇಂತಹ ಹಲವು ಮಂಥನಗಳಿಂದಾಗಿ ಹಲವರು ಆರ್.ಎಸ್.ಎಸ್. ವಿರುದ್ಧವೂ ಎದ್ದು ನಿಂತರು. ಪಿ.ಜಿ.ಆರ್.ಸಿಂಧ್ಯಾ ಮತ್ತು ಎ.ಕೆ.ಸುಬ್ಬಯ್ಯನವರ ಹೆಸರು ಇದರಲ್ಲಿ ಗಮನಾರ್ಹ. ಆಗ ಎಲ್ಲರಿಗೂ ಒಪ್ಪಿಗೆಯಾಗಿದ್ದ ಒಂದೇ ಪದವೆಂದರೆ 'ಸ್ವಾತಂತ್ರ್ಯ'.

ಈಗ ಇಪ್ಪತ್ತೈದು ವರ್ಷಗಳ ನಂತರ ಹಿಂದಿನ ಹಲವು ವಿಷಯಗಳನ್ನು ನಾವೀಗ ಸ್ಪಷ್ಟವಾಗಿ ನೋಡಲು ಸಾಧ್ಯ. ಅದರಲ್ಲಿ ಮುಖ್ಯವಾದದ್ದು 'ಸ್ವಾತಂತ್ರ್ಯ' ಮತ್ತು ರೊಟ್ಟಿ' ಎಂಬ ಆಗಿನ ಚರ್ಚೆ. ಇಂದಿರಾ ಸ್ವಾತಂತ್ರ್ಯ ಬೇಡ, ರೊಟ್ಟಿ ಬೇಕು ಎಂದರು, ಆದ್ದರಿಂದ ಆಕೆ 'ಕಮ್ಯುನಿಸ್ಟ್' ಎಂಬುದು ಬಲಪಂಥೀಯರ ವಾದ. ಜನಸಂಘೀಯರು, ಸ್ವತಂತ್ರ ಪಾರ್ಟಿಯವರಿಗೆ 'ಸ್ವಾತಂತ್ರ್ಯ' ಮುಖ್ಯ, 'ರೊಟ್ಟಿ' ಎಂದು ಅವರು ಯೋಚಿಸುವಂತೆ ಮಾಡಿದೆವು. ಅವರಿಗೆ ಫ್ಯಾಸಿಸಂ ಮತ್ತು ಕಮ್ಯುನಿಸಂ ನಡುವೆ ಗೊಂದಲವಿತ್ತು. ಇಂದಿರಾಗಾಂಧಿ ಮತ್ತು ಅವರ ಮಿತ್ರರು ಅವರನ್ನೆಲ್ಲಾ 'ಫ್ಯಾಸಿಸಂ' ಎಂದಿದ್ದರು. ನಾವು ಅವರನ್ನೆಲ್ಲಾ ಜತೆ ಸೇರಿಸಿ ಕೊಂಡು ಇಂದಿರಾಗಾಂಧಿಯನ್ನು 'ಫ್ಯಾಸಿಸ್ಟ್' ಎಂದೆವು.

ಈಗ ಮತ್ತೆ ಒಂದು ದೊಡ್ಡ ಚರ್ಚೆ ನಡೆಯಬೇಕಾಗಿದೆ- ಜೈಲಿನ ಹೊರಗೆ, ಅನಿವಾರ್ಯವಾದರೆ ಜೈಲಿನ ಒಳಗೆ. ಫ್ಯಾಸಿಸಂ, ಕಮ್ಯುನಿಸಂ, ಸ್ವಾತಂತ್ರ್ಯ, ಸರ್ವಾಧಿಕಾರ, ಕೋಮುವಾದ, ಸಮಾಜವಾದ ಇತ್ಯಾದಿಗಳ ಬಗ್ಗೆ ಬೃಹತ್ ಮಂಥನ ನಡೆಯಬೇಕಾಗಿದೆ. ಜೈಲಿನ ಹೊರಗೆ ನಮ್ಮನ್ನು ಈಗ ಬಾಧಿಸುತ್ತಿರುವ ಪ್ರಶ್ನೆಗಳ ಬಗ್ಗೆ ಬದ್ಧತೆಯಿಂದ ನಡೆಯಬೇಕಾಗಿದೆ. ಇದರಿಂದ ಮಾತ್ರವೇ ಜೈಲಿಗೆ ಹೊರಗೆ ಸ್ವಾತಂತ್ರ್ಯದ ಗ್ಯಾರಂಟಿ ಇರುತ್ತದೆ.

('ಸಿಐಟಿಯು ಸಂದೇಶ'ದಿಂದ ಜೂನ್ 2000 ರ ಸಂಚಿಕೆ)

ಬಾಟಾ ಕಂಪನಿಯ ಹುನ್ನಾರ


ಬಾಟಾ ಎಂಬ ಚಪ್ಪಲಿ (ಪಾದರಕ್ಷೆ) ಕಂಪನಿಯದು ಏನು ಹುನ್ನಾರ ಎಂದಿರಾ? ಇರುವ ನೌಕರರ ಸಂಖ್ಯೆಯನ್ನು ಕಡಿಮೆ ಮಾಡುವುದು ಅಂದರೆ ಇರುವವರಲ್ಲಿ ಹಲವರನ್ನು ಮನೆಗೆ ಕಳುಹಿಸುವುದು.

ಇವತ್ತು ಮಾರುಕಟ್ಟೆಯಲ್ಲಿರುವ ಸ್ಪರ್ಧೆಯನ್ನು ಗಮನದಲ್ಲಿಟ್ಟುಕೊಂಡರೆ ಕಂಪನಿ ಲಾಭ ಮಾಡುವುದು ಸಾಧ್ಯವಿಲ್ಲವಂತೆ. ಅಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ನೌಕರರಿರುವುದರಿಂದಲೇ ಕಂಪನಿ ಹಾನಿ ಅನುಭವಿಸಬೇಕಾಗುತ್ತದೆಂಬುದು ಕಂಪನಿಯ ವರಿಷ್ಠರ ಅಂಬೋಣ.

ಬಂಡವಾಳಿಗರಿಗೆ ಬೇಕಾದಾಗ ಕಾರ್ಮಿಕರನ್ನು ಮನೆಗೆ ಕಳುಹಿಸಲು ಅನುಕೂಲ ಮಾಡುವ ಆಧುನಿಕ ಕಾನೂನುಗಳು, ನಮ್ಮ ದೇಶದಲ್ಲಿ ಇಲ್ಲ. ತೀರ ಹಳೇ ಕಾಲದ ಕಾರ್ಮಿಕ ರಕ್ಷಣೆಯ ಕಾನೂನುಗಳಿವೆ. ಇಂತಹ ಕಾನೂನುಗಳಿಂದ ಬಹಳ ತೊಂದರೆ ಎಂದೂ ಈ ಕಂಪನಿಯ ಮುಖ್ಯಸ್ಥರು ಪ್ರಲಾಪಿಸಿದ್ದಾರೆ.

ಬಾಟಾ ಕಂಪನಿ ಹಿಂದೆಯೂ ಹಾನಿ ಮಾಡಿದೆ. ಹಲವು ಸಾರಿ ತನ್ನ ಆಸ್ತಿಗಳನ್ನು ಮಾರಿದೆ. ಆದರೂ ಮತ್ತೆ ವಾಪಸ್ಸು ಇದೇ ಪರಿಸ್ಥಿತಿಗೆ ಬಂದಿದೆ. ಬಂಡವಾಳಿಗರಿಗೆ ಕಾರ್ಮಿಕರನ್ನು ಮನೆಗೆ ಕಳುಹಿಸುವ ದಾರಿಯೊಂದೇ ಸುಲಭವಾಗಿ ಹೊಳೆಯುವುದು. ಬಾಟಾ ಸರ್ಕಾರಿ ಕಂಪನಿಯೇನಲ್ಲ. ಖಾಸಗಿ ಕಂಪನಿ. ಇಷ್ಟೊಂದು ಕಾರ್ಮಿಕರನ್ನು ಕೆಲಸಕ್ಕೆ ಏಕೆ ತೆಗೆದುಕೊಂಡಿತು.

ಕಂಪನಿಯ ನಿರ್ವಹಣೆಯನ್ನು ಸರಿಯಾಗಿ ಮಾಡಲಾರದೆ ಹೋಗಿರುವುದರಿಂದ ಉಂಟಾಗುವ ಪರಿಸ್ಥಿತಿಯನ್ನು ಈಗ ಕಾರ್ಮಿಕರ ತಲೆಗೆ ಕಟ್ಟಲಾಗುತ್ತದೆ ಎಂಬುದು ಬಹಳ ಸ್ಪಷ್ಟವಾಗಿದೆ.



ಒ.ಎನ್.ಜಿ.ಸಿ. ಯಲ್ಲೂ ಇದೇ ಮಾತು

ಒಎನ್‌ಜಿಸಿ ಎಂಬ ಸರ್ಕಾರಿ ವಲಯದ ತೈಲ ಕಂಪನಿ ಇತ್ತೀಚೆಗೆ ಬಹಳ ದೊಡ್ಡ ಸುದ್ದಿ ಮಾಡಿದೆ. ಯಾವ ವಿಷಯಕ್ಕಾಗಿ ಗೊತ್ತೆ? ಹತ್ತು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚಿನ ವಾರ್ಷಿಕ ಲಾಭ ಗಳಿಸುವ ಮೂಲಕ.

ಇಷ್ಟೊಂದು ಲಾಭ ಗಳಿಸುವ ಸರ್ಕಾರಿ ಸ್ವಾಮ್ಯದ ಕಂಪನಿಯಲ್ಲಿ ಕಾರ್ಮಿಕರನ್ನು ಮನೆಗೆ ಕಳುಹಿಸುವ ಮಾತು ಬರಬಾರದಲ್ಲವೆ? ಇಷ್ಟೊಂದು ಲಾಭ ಗಳಿಸುತ್ತಿರುವ ಒಎನ್‌ಜಿಸಿ ಯಲ್ಲೂ ಇದೇ ಮಾತು ಈಗ ಬಂದಿದೆ. ಕೇಂದ್ರ ಪೆಟ್ರೋಲಿಯಂ ಮಂತ್ರಾಲಯ ಒಎನ್‌ಜಿಸಿ ಯ ಸ್ವಯಂ ನಿವೃತ್ತಿ ಯೋಜನೆಗೆ ಅನುಮೋದನೆ ನೀಡಿದೆಯಂತೆ.

ಈ ಯೋಜನೆಯನ್ವಯ ಒಎನ್‌ಜಿಸಿ 2000 ನೌಕರರು ಮತ್ತು ಐಒಸಿಯ ಸು 1000 ನೌಕರರು ಸ್ವಯಂ ನಿವೃತ್ತಿ ತೆ ಕೊಳ್ಳಲಿದ್ದಾರಂತೆ. ಇದಲ್ಲದೆ ತೈಲ ವಲ ಹೆಚ್‌ಸಿಪಿಎಲ್ ಮತ್ತು ಬಿಪಿಸಿಎಲ್‌ಗಳೂ ಸ್ವ ನಿವೃತ್ತಿ ಯೋಜನೆಯ ಪ್ರಸ್ತಾಪವನ್ನು ಸಕಾ ಮುಂದಿಟ್ಟಿದೆಯಂತೆ. ಈಗ ಹೇಳಿ, ಕಂಪ ಲಾಭಕ್ಕೂ/ ಹಾನಿಗೂ ಕಾರ್ಮಿಕರನ್ನು ಮ ಕಳುಹಿಸುವುದಕ್ಕೂ ಸಂಬಂಧವಿದೆಯೇ?

ಬಂಡವಾಳಶಾಹಿ ಪದ್ಧತಿಯ ನಿಯಮ ಕಂಪನಿ ಲಾಭಗಳಿಸಲಿ ಬಿಡಲಿ ಬಂಡವಾ ಮಾತ್ರ ಲಾಭವಾಗಬೇಕು. ಅಂತಹ ನೀತಿ ಅವರು ಅನುಸರಿಸುವುದು.


ರೂಪಾಯಿ ಬಲಗೊಂಡರೆ ರಫ್ತುದಾರರಿಗೆ ದು

ಉದಾರೀಕರಣದಿಂದ ರಫ್ತುಗಳು ಹೆಚ್ಚಾಗಿ ಭಾರತದ ಒಟ್ಟು ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿದೆ ಎನ್ನುವುದು ಉದಾರೀಕರಣದ ಪರವಾಗಿನ ಒಂದು ವಾದ.

ಕಳೆದ ಕೆಲವು ದಿನಗಳಲ್ಲಿ ವಿಶ್ವ ಮಾರುಕಟ್ಟೆಯಲ್ಲಿ ಅಮೇರಿಕದ ಡಾಲರಿಗೆದುರು ರೂಪಾಯಿ ಬಲ ಗೊಂಡಿದೆ. ಅಂದರೆ ಹಿಂದಿಗಿಂತ ಕಡಿಮೆ ರೂಪಾಯಿಗಳನ್ನು ನೀಡಿ ಡಾಲರುಗಳನ್ನು ನಾವು ಖರೀದಿಸಬಹುದು.

ರೂಪಾಯಿ ಬಲಗೊಂಡರೆ ನಾವು ಪಡಬೇಕಲ್ಲವೆ? ರಫ್ತುದಾರರು ಬೊಬ್ಬೆ ಹೊ ತ್ತಿದ್ದಾರೆ. ಯಾಕೆಂದಿರಾ? ಯಾಕೆ ರಫ್ತುದಾರರಿಗೆ ಡಾಲರುಗಳ ರೂಪದಲ್ಲಿ ಬರಬೇಕು. ಈ ಡಾಲರುಗಳನ್ನು ಅ ರೂಪಾಯಿಗಳಿಗೆ ಪರಿವರ್ತಿಸಿಕೊಳ್ಳ ರೂಪಾಯಿ ಬಲಗೊಂಡಿರುವುದರಿಂದ ಪ್ರತಿ ಡಾಲರಿಗೆ ಕಡಿಮೆ ರೂಪಾಯಿ ದೊರೆಯುತ್ತವೆ. ಅದಕ್ಕೆ ಅವರ ಬೊಬ್ಬೆ ಉದಾರೀಕರಣದ ಈ ವಿಪರ್ಯಾಸ?

ವಿದೇಶಿ ಸಾಲದ ಹೊರೆ



ಭಾರತದ ವಿದೇಶಿ ಸಾಲದ ಹೊರೆ ಸಾಕಷ್ಟು ದೊಡ್ಡದಾಗಿಯೇ ಇದೆ. ಬ್ರೆಜಿಲ್ ಮತ್ತು ಮೆಕ್ಸಿಕೊ ನಂತರ ಭಾರತ ಮೂರನೇ ಸ್ಥಾನದಲ್ಲಿದೆ.

ಕೇಂದ್ರ ಸರ್ಕಾರ ಈ ಹೊರೆ ದೊಡ್ಡದೇನೂ ಅಲ್ಲ. ಅಲ್ಲದೆ ನಮ್ಮ ಆರ್ಥಿಕ ಸ್ಥಿತಿ ಉತ್ತಮವಾಗಿಯೇ ಇದೆ. ದೇಶದಲ್ಲಿ ಬೇಕಾದಷ್ಟು ವಿದೇಶೀ ವಿನಿಮಯವೂ ಇದೆ. ಆದ್ದರಿಂದ ಆತಂಕದ ಅವಶ್ಯಕತೆಯೇ ಇಲ್ಲ ಎಂದಿದೆ.

ದೇಶದ ಆರ್ಥಿಕ ಬಹಳ ಚೆನ್ನಾಗಿಯೇ ಇದ್ದಿದ್ದರೆ ಹಲವು ಯೋಜನೆಗಳಿಗೆ ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳ ಮುಂದೆ ಬಿಕ್ಷಾಪಾತ್ರೆ ಹಿಡಿದು ನಿಲ್ಲುವುದು ಬೇಕಾಗಿರಲಿಲ್ಲ. ವಿದೇಶಿ ಸಾಲದ ಹೊರೆ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. ಕೆಳಗಿನ ಕೋಷ್ಟಕ ನೋಡಿ.

ವಿದೇಶಿ ಸಾಲದ ವಿವರಗಳು (ದಶಲಕ್ಷ ಡಾಲರುಗಳಲ್ಲಿ)

ದೀರ್ಘಾವಧಿ	ಡಿಸೆಂಬರ್ 2001	ಮಾರ್ಚ್ 2002	ಡಿಸೆಂಬರ್ 2002
ದೀರ್ಘಾವಧಿ	95801	96016	101630
ಬಹುಪಕ್ಷೀಯ	31233	31898	32564
ದ್ವಿಪಕ್ಷೀಯ	14373	15323	16630
ರಫ್ತು ಸಾಲ	5414	5351	5003
ವಾಣಿಜ್ಯ ಸಾಲ	23755	23248	22417
ಆದಿವಾಸಿ ಭಾರತೀಯರ ಠೇವಣಿಗಳು	16835	17154	22214
ರೂಪಾಯಿ ಸಾಲಗಳು	3190	3042	2802
ಅಲ್ಪಾವಧಿ	2750	2345	3357
ಒಟ್ಟೂ ಸಾಲ	98551	98761	104987
ಸರ್ಕಾರಿ ಸಾಲ	43,196	43,620	45837
ಸರ್ಕಾರೇತರ ಸಾಲ	55,355	55142	59150

ವರ್ಷದಿಂದ ವರ್ಷಕ್ಕೆ ಸಾಲದ ಪ್ರಮಾಣ ಹೆಚ್ಚುತ್ತಿರುವುದನ್ನು ಇದರಿಂದ ನೋಡಬಹುದು.

ಸರ್ಕಾರ ತಲಾ ವಿದೇಶಿ ಸಾಲ ಬರೀ 906 ಡಾಲರುಗಳಷ್ಟು ಎನ್ನುತ್ತದೆ. ಇದರ ರೂಪಾಯಿ ಮೊತ್ತ ಸುಮಾರು ನಲವತ್ತೈದು ಸಾವಿರಗಳು ಎನ್ನೋಣ. ಭಾರತದ ಜನಸಾಮಾನ್ಯರ ವರಮಾನ ಎಷ್ಟು. ಈ ಮೊತ್ತದ ಸಾಲ ತೀರಿಸುವಷ್ಟು ದೊಡ್ಡದೇ?

ಭಾರತದ ಬ್ಯಾಂಕುಗಳಿಗೆ ಅಮೇರಿಕದ ಕಂಪನಿಯ ಸಲಹೆ

ಮೆಕಿಂಸ್ಲಿ ಎನ್ನುವ ಅಮೇರಿಕದ ಸಮಾಲೋಚನಾ ಕಂಪನಿಯೊಂದಿದೆ. ಅದು ಭಾರತದ ಬ್ಯಾಂಕುಗಳು ತೆಳ್ಳಗಾಗ ಬೇಕು ಮತ್ತು ಚಿಕ್ಕವಾಗಬೇಕು ಎಂದು ಸಲಹೆ ನೀಡಿದೆ.

ಬ್ಯಾಂಕುಗಳ ಆಧುನೀಕರಣದ ಬಗ್ಗೆ ಭಾರತೀಯ ರಿಷರ್ವ್ ಬ್ಯಾಂಕಿಗೆ ವರದಿ ನೀಡಿರುವ ಅದು ಭಾರತದ ಬ್ಯಾಂಕುಗಳಲ್ಲಿ ಅದರಲ್ಲೂ ಸರ್ಕಾರಿ ವಲಯದ ಬ್ಯಾಂಕುಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಕೆಲಸ ಮಾಡುತ್ತಿವೆ. ಇಷ್ಟೊಂದು ದೊಡ್ಡ ಕಟ್ಟಡಗಳ ಅಗತ್ಯವಿಲ್ಲ. ಈ ಕಟ್ಟಡಗಳ ಒಂದೊಂದು ಭಾಗಗಳನ್ನು ಬಿಟ್ಟುಕೊಟ್ಟು ಕಡಿಮೆ ಜಾಗದಲ್ಲಿ ಕಾರ್ಯನಿರ್ವಹಿಸಬಹುದು ಎಂದು ಹೇಳಿದೆ. ಇದರಿಂದ ಬಹಳ ಉಳಿತಾಯವಾಗುತ್ತದೆ ಎಂಬುದು ಅದರ ಹೇಳಿಕೆ.

ಇಂತಹ ಸಲಹೆಯ ಹಿಂದೆ ಗಹನವಾದ ವಿಚಾರವೊಂದಿದೆ. ಅದು ಬ್ಯಾಂಕುಗಳ ಸ್ವಭಾವವೇ ಬದಲಾಗಬೇಕೆನ್ನುವುದು. ರಾಷ್ಟ್ರೀಕರಣವಾದ ಬ್ಯಾಂಕುಗಳು ಬಹಳ ದೊಡ್ಡ ಜನಸಮು ಗಳಿಗೆ ಸೇವೆ ಸಲ್ಲಿಸುತ್ತಿದ್ದವು. ಆದ್ದರಿಂದಲೇ ಸ್ಥಳವಿರುವ ಕಟ್ಟಡಗಳಲ್ಲಿ ಅವು ನಿರ್ವಹಿಸುತ್ತಿದ್ದವು.

ಈಗ ಉದಾರೀಕರಣದ ಹಿನ್ನೆಲೆಯ ಸ್ವಭಾವ ಬದಲಾಗುತ್ತಿದೆ. ಬ್ಯಾಂಕುಗಳ ಬ ಸೇವೆಗಳು ಶ್ರೀಮಂತರಿಗಾಗಿ ಮೀ ಶ್ರೀಮಂತರು ಕೆಲವೇ ಕೆಲವರು. ತಂತ್ರಜ್ಞಾನದ ಬಳಕೆಯಿಂದಾಗಿ ಬ್ಯಾಂ ಹೋಗದೆ ಕುಳಿತಲ್ಲಿಂದಲೇ ಅವರು ವ್ಯ ಮಾಡಬಲ್ಲರು. ಹೀಗಿರುವಾಗ ಬ್ಯಾಂಕುಗಳು ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತ ಸಂಪ ಗಳನ್ನು ಹಾಳು ಮಾಡುವುದೇಕೆ? ಇದು ಸಲಹೆಯ ಹಿಂದಿರುವ ಮ ಅರ್ಥವಾಯಿತಲ್ಲವೆ ಈ ಕಾಳಜಿ?

ಈ ವಾರ ಕರ್ನಾಟಕ

ಸಂಕಷ್ಟದಲ್ಲಿರುವ ರೈತರಿಗೆ ಸಾಂತ್ವನ ಹೇಳಲಿಲ್ಲ. ಹೋಗಲಿ ಕಷ್ಟ ಹೇಳಿಕೊಳ್ಳಲು ಮುಂದಾದರೆ ಅದನ್ನು ಕೇಳುವವರೇ ಇಲ್ಲ. ಕಷ್ಟ ಸಹಿಸಲಾರೆವು ಎಂದು ಶಾಂತರೀತಿಯಲ್ಲಿ ಪ್ರತಿಭಟಿಸಿದರೆ ಸರ್ಕಾರ ಅಮಾನವೀಯವಾಗಿ ರೈತರ ಮೇಲೆ ದೌರ್ಜನ್ಯ ನಡೆಸಿದೆ.

ಕೊಪ್ಪಳ ಜಿಲ್ಲೆಯಲ್ಲಿ ಇಂತಹ ಬೃಹತ್ ಪ್ರತಿಭಟನೆಯನ್ನು ರಾಜ್ಯ ರೈತ ಸಂಘ (ನಂಜುಂಡಸ್ವಾಮಿ) ನಡೆಸಿತ್ತು. ಕರ ನಿರಾಕರಣೆ ಘೋಷಣೆ ಹಾಕಿತ್ತು. ಇದನ್ನೇ ನೆಪವಾಗಿರಿಸಿ ರೈತರ ಮೇಲೆ ಲಾಠಿ ಚಾರ್ಜ್ ನಡೆಯಿತು. ಮುಖ್ಯವಾಗಿ ಹಿರೇಬಗನಾಳು ಗ್ರಾಮದ ಮೇಲೆರಗಿದ ಪೋಲೀಸರು ಮನಬಂದಂತೆ ಗ್ರಾಮಸ್ಥರನ್ನು ಬೇಟೆಯಾಡಿದರು. 2000 ಜನ ಸಂಖ್ಯೆಯ ಗ್ರಾಮಕ್ಕೆ 500 ಪೋಲೀಸರು ಧಾಳಿ ಇಟ್ಟಿದ್ದರು. ಮಕ್ಕಳು, ಮಹಿಳೆಯರು, ಮುದುಕರನ್ನೆದೆ ಬರ್ಬರವಾಗಿ ಹೊಡೆದಿದ್ದಾರೆ. ಬರ್ಬರ ಅನಾಗರಿಕ ವರ್ತನೆ, ಖಂಡನೀಯ. ಈ ದೌರ್ಜನ್ಯದಲ್ಲಿ 108 ಜನ ತೀವ್ರ ಸ್ವರೂಪದ ಗಾಯಗಳಾಗಿ ಆಸ್ಪತ್ರೆ ಸೇರಿದ್ದಾರೆ. 90 ಜನರನ್ನು ಹೊಡೆದು ಬಡಿದು ಜೈಲಿಗಟ್ಟಲಾಗಿದೆ. ಈ ದೌರ್ಜನ್ಯಕ್ಕೆ ಹೆದರಿ ಇಡೀ ಊರಿಗೆ ಊರೇ ಖಾಲಿಯಾಗಿದೆ. ಸಿಕ್ಕಪಕ್ಕಲ್ಲಿ ಓಡಿ ಹೋಗಿದ್ದಾರೆ. ಮಕ್ಕಳು, ಮುದುಕಿಯರು, ಮಹಿಳೆಯರು ಅನ್ನವಿಲ್ಲದೆ ಪಕ್ಕದ ಊರಿನಲ್ಲಿ ಭಿಕ್ಷೆ ಎತ್ತಿ ಉಂಡು ಬದುಕಬೇಕಾಗಿದೆಯೆಂದರೆ ಎಂತಹ ರಾಕ್ಷಸೀಯ ವರ್ತನೆಯಿರಬಹುದು ಊಹಿಸಿ.

ಇಷ್ಟು ಮಾತ್ರವಲ್ಲ ಕರ್ನಾಟಕದಾದ್ಯಂತ ಮೀಟರೀಕರಣದಂತ ಹೇರಿಕೆ, ಪಂಪ್‌ಸೆಟ್ ಬಳಕೆದಾರರಿಗೆ ದಂಡನೆ ಹೆಚ್ಚುತ್ತಿವೆ. ಜನರ ಪ್ರತಿರೋಧವಿದ್ದು ಈಗ ಪೊಲೀಸ್ ಬಳಕೆ ಮಾಡಲಾಗುತ್ತಿದೆ. ಕೃಷ್ಣರ ಸರ್ಕಾರ ಇನ್ನೂ ಪ್ರತಿಭಟನೆಗಳನ್ನು ಹೀಗೆ ದಮನದಿಂದ ತುಳಿಯಬೇಕೆಂದು ನಿರ್ಧರಿಸಿದೆ.

ಇತ್ತೀಚೆಗೆ ವಿಶ್ವಬ್ಯಾಂಕ್‌ನ ಪ್ರತಿನಿಧಿಗಳು 'ವಿದ್ಯುತ್ ಕ್ಷೇತ್ರದಲ್ಲಿ ಸುಧಾರಣೆ ತೀವ್ರಗೊಳಿಸಿ, ಖಾಸಗಿಯವರಿಗೆ ನೀಡದಿದ್ದರೆ ಸಾಲದ ಕಂತು ಕೊಡುವುದಿಲ್ಲ ಎಂದು ದಬಾಯಿಸಿದ ಬಳಿಕ ಆ ಆಜ್ಞೆ ಜಾರಿಗೆ ಕೃಷ್ಣ ಇಳಿದಿದ್ದಾರೆ. ತನ್ನನ್ನು ಆರಿಸಿದ ಪ್ರಜೆಗಳ ಮೇಲೆ ಈ 'ಪ್ರಭು' ದಮನ ನಡೆಸಿ ಖಾಸಗಿ ಬಂಡವಾಳಗಾರರ ಸೇವೆಗೆ ಮುಂದಾಗಿದ್ದಾರೆ. ಈ ಬೆಳವಣಿಗೆ ಅತ್ಯಂತ ಅಪಾಯಕಾರಿ ಸೂಚನೆಯಾಗಿದೆ. ಇದನ್ನು ಎಲ್ಲರೂ ಒಕ್ಕೊರಲಿನಿಂದ ಖಂಡಿಸಿ - ಪ್ರತಿರೋಧಿಸಬೇಕಿದೆ.

ಬಿತ್ತೇವೆಂದರೆ ಬೀಜವೂ ಇಲ್ಲ

ರಾಜ್ಯದ ಬಹಳಷ್ಟು ಜಿಲ್ಲೆಗಳಲ್ಲಿ ಮಳೆಯಿಲ್ಲ... ಮಳೆ ಬಿದ್ದಲ್ಲಿ ಬಿತ್ತೋಣವೆಂದರೂ ಗುಣಮಟ್ಟದ ಬಿತ್ತನೆ ಬೀಜ ಸಿಗುತ್ತಿಲ್ಲ. ನಿತ್ಯ ಸಂಕಟಗಳು ಒಂದೆಡೆ, ಬಿತ್ತಲು ಬೀಜಗಳೇ ಸಿಗಲಿಲ್ಲವೆಂದರೆ ಯಾರಿಗೂ ಆತಂಕ ಸಹಜ. ಬೀಜ ಪೂ ಸರ್ಕಾರಕ್ಕೆ ಕೋರಿದರೂ ಅಸಮರ್ಥತೆ ಪ್ರ

ಇಂತಹ ಸ್ಥಿತಿಯಲ್ಲಿ ಹಾಸನ, ರಾಯಚೂ ರೈತ ಅತೃಪ್ತಿ ಸ್ಫೋಟಗೊಂಡಿದೆ. ಅಧಿಕಾರಿಗಳು ಸಮರ್ಪ ಕಾರ್ಯವೆಸಗದಿದ್ದಾಗ ಘರ್ಷಣೆ ಸಂಭ ಹಾಸನದಲ್ಲಿ ಇದ್ದಬದ್ದ ಆಲೂಗಡ್ಡೆ ಹೊತ್ತೊಯ್ದಿದ್ದಾರೆ. ಕೃಷಿರ ಬೇಕು-ಬೇಡಗಳನ್ನು ಸರಿಯಾಗಿ ಅಂ ಅಗತ್ಯ ವ್ಯವಸ್ಥೆ ಮಾಡುವಲ್ಲಿ ವಿಫಲವಾಗಿದೆ. ರೈತರು ಖಾಸಗಿಯವರ ಬೀಳಲಿ ಎಂದು ಲೆಕ್ಕಾಚಾರವೂ ಇರಬ ಇಂತಹ ಖಾಸಗಿಯವರ ಕಳಪೆಗುಣಮಟ್ಟ ಖರೀದಿಸಿ ಸರಿಯಾಗಿ ಸಸಿಯೂ ಕೈಸುಟ್ಟುಕೊಂಡು, ಹಾನಿಗೀಡಾದ ಘ ಅನೇಕ ಇವೆ. ಕನಿಷ್ಠ ಉತ್ತಮ ಬಿತ್ತನೆ ಬ ಸಮರ್ಪಕವಾಗಿ ಪೂರೈಸಲು ಅಗತ್ಯ ವಹಿಸಬೇಕು.

ಇರಾಕಿನಲ್ಲೊಂದು ಕಮ್ಯುನಿಸ್ಟ್ ಪಾರ್ಟಿ ಇದೆಯೇ?

ಟ 7 ರಿಂದ

ನ್ನಿಸಲಿಲ್ಲ. ಪಕ್ಷದ ಮೇಲೆ ನಿಷೇಧ ತೆಗೆಯಲಿಲ್ಲ. ಮ್ಯುನಿಸ್ಟ್ ಭಾಗವಹಿಸುವಿಕೆಯ ಜತೆ ಕ್ರಾಂತಿಕಾರಿ ಜಾಸತ್ತಾತ್ಮಕ ಸರ್ಕಾರ ರಚಿಸುವುದರಿಂದ ಜರಿದದ್ದು ತಪ್ಪು ನೀತಿ ಎಂದು ಆಮೇಲೆ ಪಕ್ಷಕ್ಕೆ ನವರಿಕೆಯಾಯಿತು. ಇದು ಕೇಂದ್ರ ಸಮಿತಿಯ ರ್ಣ ಸ್ವಾಯತ್ತ ನಿರ್ಧಾರವಾಗಿರಲೂ ಇಲ್ಲ- ೀವಿಯತ್ ಕಮ್ಯುನಿಸ್ಟ್ ಪಕ್ಷವೂ ಈ ಬಗ್ಗೆ ಒತ್ತಡ ರಿತ್ತು. ಕಮ್ಯುನಿಸ್ಟ್ ಪಕ್ಷದ ಸ್ವತಂತ್ರ ಪಾತ್ರ ಾಕರಿಸುವ, ಬೂರ್ಜ್ವ ಗಳ ಜತೆ ರ್ಗ-ಸಹಕಾರದ (ಸೋವಿಯತ್ ಪಕ್ಷದಿಂದ ರ್ದೇಶಿತ ನೀತಿ ಇತರ ಹಲವು ದೇಶಗಳಲ್ಲೂ ಇದೇ ತಿ ದುರಂತದಲ್ಲಿ ಕೊನೆಗೊಂಡಿತು.

ಸಿಮ್ ಸರ್ಕಾರ

ಜನರಲ್ ಕಾಸಿಮ್ ಸರ್ಕಾರ (ಕಮ್ಯುನಿಸ್ಟ್ ಕ್ಷವನ್ನು ನಿರಾಕರಿಸಿದರೂ) ಕ್ರಾಂತಿಕಾರಿ ಷ್ಟ್ರೀಯ ನೀತಿಯನ್ನೇ ಅನುಸರಿಸಿತು.ಇಂತಹ ತಿಗಳಿಗೆ ಕಮ್ಯುನಿಸ್ಟ್ ಪಕ್ಷ ತನ್ನ ರಾಜಕೀಯ ಬಲ ನೀಡಿತು ಕೂಡಾ. ಸರ್ಕಾರ ಹಲವು ಮ್ರಾಜ್ಯಶಾಹಿ ವಿರೋಧಿ, ಜನ-ಪರ ಕ್ರಮಗಳನ್ನು ೊಂಡಿತು. ಸಾಮ್ರಾಜ್ಯಶಾಹಿಗಳ ಬಾಗ್ದಾದ್ ಪ್ಪಂದದಿಂದ ಹೊರಬಂತು. ಆಂಗ್ಲೋ ಮೇರಿಕನ್ ಮಾಲಕತ್ವದ ಪೆಟ್ರೋಲಿಯಂ ಪನಿಗಳ ಹಕ್ಕುಗಳನ್ನು ಮೊಟಕುಗೊಳಿಸಿತು. ಮುಖ ರೈತ ಪರ ಕಾನೂನುಗಳನ್ನು ತಂದಿತು. ಆದರೆ ಕಾಸಿಮ್‌ನಲ್ಲಿ ಕ್ರಮೇಣ ಎಲ್ಲಾ ಇತರ ಜಕೀಯ ಪಕ್ಷಗಳನ್ನು ಹತ್ತಿಕ್ಕುವ ಸರ್ವಾಧಿಕಾರಿ ವೃತ್ತಿ ಕಂಡುಬಂತು. ಆತನ ಹಲವು ಕ್ರಾಂತಿಕಾರಿ ಗಳಿಗೆ ಬೆಂಬಲ ನೀಡಿದ ಕಮ್ಯುನಿಸ್ಟರ ಮೇಲೆ ಾರಲಾರಂಭಿಸಿದ. ಕಮ್ಯುನಿಸ್ಟರ ಮೇಲೆ ದಮನ ಚ್ಚುತ್ತಾ ಹೋಯಿತು.

ಇದರಿಂದ ರಾಜಕೀಯವಾಗಿ ಬಲಹೀನವಾದ ತ್ತು ಜನ ಬೆಂಬಲ ಕಳೆದುಕೊಂಡ ಕಾಸಿಮ್ ರ್ಕಾರದ ವಿರುದ್ಧ ಬಾತ್ ಪಕ್ಷ ಮತ್ತು ಸೈನ್ಯದ ಗಾಮಿ ಅಧಿಕಾರಿಗಳ ಗುಂಪು ಮಿಲಿಟರಿ ಕ್ಷಿಪ್ರ ತಿ ನಡೆಸಿತು. ಇದರ ವಿರುದ್ಧ ರಾಜಕೀಯ- ಮಿಲಿಟರಿ ಪ್ರತಿರೋಧ ಒಡ್ಡಿದ್ದು ಕಮ್ಯುನಿಸ್ಟ್ ಪಕ್ಷ ಮಾತ್ರ. ಆದರೆ ಸೈನ್ಯದ ಮಿಲಿಟರಿ ಕೈಮೇಲಾಯಿತು.

ರಕ್ತಪಾತ ಕರಾಳ ಅವಧಿ

ಹೊಸ ಪ್ರತಿಗಾಮಿ ಸರ್ಕಾರ ಕಮ್ಯುನಿಸ್ಟರ ರಕ್ತಪಾತ ಆರಂಭಿಸಿತು. ಇದು ಪಕ್ಷದ ಅತ್ಯಂತ ಕರಾಳ ಅವಧಿಯಾಗಿತ್ತು. ಸಿಐಎ ಕಮ್ಯುನಿಸ್ಟರ ಪಟ್ಟಿಯನ್ನು ಬಾತ್ ಪಕ್ಷದ ಅಧಿಕಾರಿಗಳಿಗೂ, ಪ್ರತಿಗಾಮಿ ಸೈನಿಕ ಅಧಿಕಾರಿಗಳಿಗೆ ಕ್ಷಿಪ್ರಕ್ರಾಂತಿ ಮೊದಲೇ ಕೊಟ್ಟಿತ್ತು ಎಂದು ಆಮೇಲೆ ಗೊತ್ತಾಯಿತು. ಮೂರು ಸಾವಿರ ಕಮ್ಯುನಿಸ್ಟರು ಕೊಲೆಯಾದರೂ ಸಾವಿರಾರು ಇತರ ಕಮ್ಯುನಿಸ್ಟರು ಜೈಲುಗಳಲ್ಲಿ ವರ್ಷಗಳ ಕಾಲ ನರಕಯಾತನೆ ಸಹಿಸಲೇಬೇಕಾಯಿತು. ಆಗಿನ ಪಕ್ಷದ ಮಹಾಕಾರ್ಯದರ್ಶಿ ಚಿತ್ರಹಿಂಸೆಯಲ್ಲಿ ಪಕ್ಷದ ಗುಟ್ಟು ಏನನ್ನೂ ಹೇಳದೇ ಹುತಾತ್ಮ ನಾದ. ಕ್ಷಿಪ್ರಕ್ರಾಂತಿಯ ಮೊದಲ ಮೂರು ದಿನಗಳಲ್ಲೇ ಪಕ್ಷದ ಸದಸ್ಯರು ಮತ್ತು ಬೆಂಬಲಿಗರು ಸೇರಿದಂತೆ ಐದು ಸಾವಿರ ಜನರನ್ನು ಅತ್ಯಂತ ಭೀಕರ ರೀತಿಯಲ್ಲಿ ಕೊಲ್ಲಲಾಯಿತು. ಚಿಲಿಯ ಪಿನೋಶೆ ಸರ್ವಾಧಿಕಾರವನ್ನು ಹಲವು ದಶಕಗಳ ಹಿಂದೆ ಮೀರಿಸಿತ್ತು. ಈ ಸರ್ಕಾರ ಸ್ಕೂಲ್‌ಗಳು ಮಿಲಿಟರಿ ನೆಲೆಗಳು, ಕ್ರೀಡಾಂಗಣಗಳು ಕಮ್ಯುನಿಸ್ಟರ ಬೇಟೆಯಾಡುವ 'ಕ್ಯಾಂಪ್' ಗಳಾಗಿದ್ದವು. ಪಕ್ಷ ಬಾಗ್ದಾದ್ ಮತ್ತು ಇತರ ಕೇಂದ್ರಗಳಿಂದ ಹಿಂದೆ ಸರಿದು ಕುರ್ದಿಶ್ ಪ್ರದೇಶಗಳಲ್ಲಿ ತನ್ನ ನೆಲೆ ಸ್ಥಾಪಿಸಿತು.

ಕ್ಷಿಪ್ರ ಕ್ರಾಂತಿಗಳ ಸರಣಿ

ಆದರೆ ಈ ಕ್ಷಿಪ್ರಕ್ರಾಂತಿ ಬೇಗನೆ ಬಿದ್ದು ಹೋಗುವ 1963 ನವಂಬರ್‌ನಲ್ಲಿ ಇನ್ನೊಂದು ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಯಿತು. ಈ ಬಾರಿಯ ಕ್ಷಿಪ್ರಕ್ರಾಂತಿ ನಡೆಸಿದವರು ನಾಸೆರ್-ವಿದಿ ಅರಬ್-ರಾಷ್ಟ್ರೀಯವಾದಿ ಸೈನ್ಯಾಧಿಕಾರಿಗಳು, 1968 ರಲ್ಲಿ ಇನ್ನೊಂದು ಮಿಲಿಟರಿ ಕ್ಷಿಪ್ರಕ್ರಾಂತಿ ನಡೆದು ಬಾತ್ ಪಕ್ಷ ಪುನಃ ಅಧಿಕಾರಕ್ಕೆ ಬಂತು. ಕಮ್ಯುನಿಸ್ಟ್ ಪಕ್ಷದ ಮೇಲೆ ಮುಂದುವರೆದಿದ್ದ ದಮನ ಇನ್ನೂ ಹೆಚ್ಚಾಯಿತು. ಆಗಿನ ಅಂತರಾಷ್ಟ್ರೀಯ ಸನ್ನಿವೇಶ ಬಳಸಿ ಬಾತ್ ಪಕ್ಷ ತೈಲ ಕಂಪನಿಗಳ ಮೇಲೆ ರಾಷ್ಟ್ರೀಯ ಹಿಡಿತ ಸಾಧಿಸುವ, ಅದನ್ನು ಬೆಳೆಸಲು ಸೋವಿಯತ್ ಒಕ್ಕೂಟದ ಬೆಂಬಲ ಪಡೆಯುವ ನೀತಿ ಅನುಸರಿಸಿದರು. ಇರಾಕಿ ಬಂಡವಾಳಶಾಹಿ ಇದರಿಂದ ಆಧುನೀಕರಣಗೊಂಡಿತು. ಕಮ್ಯುನಿಸ್ಟ್ ಪಕ್ಷ ಸ್ವಲ್ಪಮಟ್ಟಿಗೆ ಬಲಹೀನಗೊಂಡಿದ್ದರೂ, ತನ್ನ ಸ್ವತಂತ್ರ ರಾಜಕೀಯ ನೀತಿ ಬಿಟ್ಟುಕೊಟ್ಟಿರಲಿಲ್ಲ. ಎಲ್ಲಾ ರಾಷ್ಟ್ರವಾದಿ ಪ್ರಗತಿಪರ ಶಕ್ತಿಗಳ ಒಕ್ಕೂಟ ಮತ್ತು ರಾಷ್ಟ್ರೀಯ ಸರ್ಕಾರ ರಚಿಸಬೇಕೆಂದು ಪ್ರತಿಪಾದಿಸಿದರೂ ಬಾತ್ ಪಾರ್ಟಿ ಇತರ ಪಕ್ಷಗಳನ್ನು ಒಡೆದು, ದಮನ ಮಾಡಿ ತನ್ನದೇ ಆದ ರೀತಿಯಲ್ಲಿ ಬಲಗೊಂಡಿತ್ತು.

ದೀರ್ಘ ಮಾತುಕತೆಗಳ ನಂತರ (1971-72 ರಲ್ಲಿ) ಆಳುವ ಬಾತ್ ಪಾರ್ಟಿ ಜತೆ ಕಮ್ಯುನಿಸ್ಟ್ ಪಕ್ಷ ದೇಶಪ್ರೇಮಿ ರಂಗ ರಚಿಸಿ ಸರ್ಕಾರ ರಚಿಸುವ ಬಗ್ಗೆ ಒಪ್ಪಂದಕ್ಕೆ ಬಂದಿತು. ಇಬ್ಬರು ಕಮ್ಯುನಿಸ್ಟ್ ಮಂತ್ರಿಗಳ ಮಂತ್ರಿಮಂಡಲದಲ್ಲಿ ಸೇರಿದರು, ಆದರೆ 1978 ರ ಹೊತ್ತಿಗೆ ಬಾತ್ ಪಕ್ಷ ಪುನಃ ಕಮ್ಯುನಿಸ್ಟ್ ಪಕ್ಷದ ವಿರುದ್ಧ ದಮನ ಹರಿಯಬಿಟ್ಟಿತ್ತು. ಕಮ್ಯುನಿಸ್ಟರನ್ನು ಸರ್ಕಾರದಿಂದ ಕಿತ್ತುಹಾಕಿದ್ದು ಮಾತ್ರವಲ್ಲ, ರಾಷ್ಟ್ರೀಯರಂಗದಲ್ಲಿ ಇದ್ದ ಕಮ್ಯುನಿಸರನ್ನು ಕಿತ್ತುಹಾಕಿ ಬಂಧಿಸಲಾಯಿತು. ಸೈನ್ಯದಲ್ಲಿ ಕಮ್ಯುನಿಸ್ಟ್ ಘಟಕಗಳನ್ನು ಸ್ಥಾಪಿಸಿದ ಆಪಾದನೆಯ ಮೇಲೆ 31 ಕಮ್ಯುನಿಸ್ಟರನ್ನು, ಬೆಂಬಲಿಗರನ್ನು ಮರಣದಂಡನೆಗೆ ಒಳಪಡಿಸಲಾಯಿತು. 70 ರ ದಶಕದ ಮಧ್ಯದಲ್ಲಿ ತೈಲ ಬೆಲೆ ಏರಿ ಸರ್ಕಾರ ಆರ್ಥಿಕವಾಗಿ ಬಲಾಢ್ಯವಾಗಿತ್ತು. ಇರಾನ್ ಜತೆ ಹೊಂದಾಣಿಕೆ ಮಾಡಿ ಕುರ್ದಿಶ್ ಪ್ರದೇಶವನ್ನು ಪ್ರತ್ಯೇಕಿಸುವ ರಾಜಕೀಯ ಕ್ರಮ ಸಹ ಕೈಗೊಂಡಿತ್ತು. ಏಪ್ರಿಲ್ 1979 ರಲ್ಲಿ ಕಮ್ಯುನಿಸ್ಟ್ ಪಕ್ಷ ತಾನು ರಾಷ್ಟ್ರೀಯರಂಗದಿಂದ ಹೊರಬಂದಿದ್ದಾಗಿ ಘೋಷಿಸಿ ಕುರ್ದಿಶ್ ಪ್ರದೇಶದಲ್ಲಿ ರೈತ ಸೈನ್ಯಗಳನ್ನು ಕಟ್ಟಿ ಹೋರಾಡುವ ನಿರ್ಧಾರ ಮಾಡಿತು. ಆ ವರ್ಷ ಅಧಿಕಾರಕ್ಕೆ ಬಂದ ಸದ್ದಾಂ ಹುಸೇನ್‌ನ ಬಾತ್ ಸರ್ಕಾರವನ್ನು ಬಲವಾಗಿ ವಿರೋಧಿಸಿತು.

ಈಗ

ಈಗ ಸದ್ದಾಮರ ಸರ್ಕಾರ ಬಿದ್ದು ಹೋದಮೇಲೆ ಇಡೀ ಇರಾಕಿನಲ್ಲಿ ರಾಜಕೀಯ ಶಕ್ತಿಯಾಗಿ ಬೆಳೆಯಲಿಲ್ಲ ಸ್ಥೈರ್ಯ, ರಾಜಕೀಯ ಕಣ್ಣೋಟ, ಕಾರ್ಯಕರ್ತರ ಪಡೆ, ಸಂಘಟನಾ ಬಲ, ಸದಸ್ಯತ್ವ ಹೊಂದಿದ ಏಕಮಾತ್ರ ಪಕ್ಷ ಕಮ್ಯುನಿಸ್ಟ್ ಪಕ್ಷ ಎಂದು ಎಲ್ಲರೂ ಗುರುತಿಸುತ್ತಾರೆ. ಎಲ್ಲಾ ಧರ್ಮ, ಜನಾಂಗಗಳ ನಡುವೆ ಬೆಂಬಲ ಹೊಂದಿರುವ, ಚಾರಿತ್ರಿಕ ಪ್ರತಿಷ್ಠೆ ಹೊಂದಿದೆ ಪಕ್ಷ. ಆದ್ದರಿಂದ ಮೂಲಭೂತವಾದಿ, ಶಿಯಾ ಗುಂಪುಗಳು ಕಮ್ಯುನಿಸ್ಟರ ಮೇಲೆ ಕಿಡಿ ಕಾರುತ್ತಿದ್ದಾರೆ. ಸದ್ದಾಮ್ ಸರ್ಕಾರ ಬಿದ್ದಾಗ ಬಂದ ಮೊದಲ ಪತ್ರಿಕೆ ಕಮ್ಯುನಿಸ್ಟ್ ಪಕ್ಷದ್ದು ಎಂಬುದು ಸಾಂಕೇತಿಕ ಮಾತ್ರವಲ್ಲ. ಆದರೆ ಹಿಂದೆ ಯೋಜಿತ, ಸುಸಜ್ಜಿತ ರಾಜಕೀಯ- ಸಂಘಟನೆ ಪಕ್ಷದ್ದು. 70 ವರ್ಷಗಳ ಅಮೋಘ ವೀರಚರಿತ್ರೆಯಲ್ಲಿ ಹೊಸ ಅವಧಿಗೆ ಕಮ್ಯುನಿಸ್ಟ್ ಪಕ್ಷ ಕಾಲಿಡುತ್ತ ಎಂದು ಹಾರೈಸೋಣ. ಇರಾಕ್‌ನ ಚರಿತ್ರೆಯ ಹಲವು ಪ್ರಮುಖ ತಿರುವುಗಳಲ್ಲೇ ನಿರ್ಣಾಯಕ ಪಾತ್ರ ವಹಿಸಿದ ಪಕ್ಷ ಈ ಬಾರಿ ಹಿಂದೆ ಬೀಳಲಿಕ್ಕಿಲ್ಲ.


ಸದ್ದಾಮನಿಗೆ ಪ್ರತಿರೋಧ

ಸದ್ದಾಮನ ಸರ್ಕಾರಕ್ಕೆ ಕಮ್ಯುನಿಸ್ಟ್ ಪಕ್ಷ 80 ಮತ್ತು 90 ರ ದಶಕದಲ್ಲಿ ಪ್ರತಿರೋಧ ಒಡ್ಡುತ್ತಾ ಬಂದಿದೆ. ಈ ಅವಧಿಯಲ್ಲಿ ಭೂಗತ ಸಶಸ್ತ್ರ ವಿರೋಧಿ ಪಕ್ಷದ ಪಾತ್ರ ವಹಿಸಿದೆ. ಕುರ್ದಿಶ್ ಭಾಗದಲ್ಲಿ ಮುಖ್ಯ ನೆಲೆ ಹೊಂದಿದ್ದು, ಇತರ ಪ್ರದೇಶಗಳಲ್ಲಿ ಭೂಗತ ಘಟಕಗಳನ್ನು ಹೊಂದಿದೆ. 80ರ ದಶಕದಲ್ಲಿ ಕುರ್ದಿಶ್ ಪ್ರಜಾಪಕ್ಷ ಮತ್ತು ಸಮಾಜವಾದಿ ಪಕ್ಷದ ಜತೆ ಹೊಂದಾಣಿಕೆ ಸಾಧಿಸಿ, ಕುರ್ದಿಶ್ ಪ್ರದೇಶಲ್ಲಿ ಇರಾಕಿ ಸರ್ಕಾರದ ಅಧಿಕಾರ ನಡೆಯದಂತೆ ಮಾಡಿತ್ತು. ಎರಡು ದಶಕಗಳ ಬಾತ್ ಪಕ್ಷದ ಏಕಪಕ್ಷೀಯ ಸರ್ವಾಧಿಕಾರ ವಿರುದ್ಧ ತನ್ನದೇ ಆದ ಪ್ರತಿರೋಧ ಒಡ್ಡಿದೆ.

ಸದ್ದಾಮನ ಸರ್ಕಾರ ಉರುಳಿಸುವ ಹುನ್ನಾರದಲ್ಲಿ ಅಮೇರಿಕ ಲಂಡನ್ನಿನ ಕರೆದಿದ್ದ ವಿರೋಧಿ ಶಕ್ತಿಗಳ ಸಭೆಯಲ್ಲಿ ಪಕ್ಷ ಭಾಗವಹಿಸಲು ನಿರಾಕರಿಸಿತು. ಆಂಗ್ಲೋ ಅಮೇರಿಕಾ ಆತಿಕ್ರಮಣ, ಸದ್ದಾಮರ ಸರ್ಕಾರ ಎರಡನ್ನು ದಿಟ್ಟತನದಿಂದ ವಿರೋಧಿಸಿದೆ.

ಸಂಶೋಧನೆಯ ಹೆಸರಿನಲ್ಲಿ ಮಾರುಕಟ್ಟೆ ವಿಸ್ತರಣೆ

ಇಂದು ವೈದ್ಯರು ಹಲವಾರು ಹೊಸ ಹೊಸ ಧಿಗಳನ್ನು ಬರೆದುಕೊಡುತ್ತಾರೆ. ಔಷಧಿ ನಿಗಳು ಹೊಸ ಹೊಸ ಔಷಧಿಗಳನ್ನು ಾರಿಸುತ್ತಿವೆ ಎಂದು ಎಲ್ಲರಿಗೂ ಅನಿಸುವುದು ಜ. ಮಾರುಕಟ್ಟೆಯಲ್ಲಿ ಹೊಸ ಹೊಸ ಧಿಗಳು ಬರುತ್ತಿವೆ. ಆದರೆ ಅವು ಹೊಸ ಧಿಗಳಲ್ಲ ಹಳೆಯ ಔಷಧಿಗಳ ಹೊಸರೂಪ.



ುವರೆಗೂ ಒಂದೂ ಔಷಧಿಯನ್ನು ರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಹಿಡಿದಿಲ್ಲ, ಇಂದು ಬಹುರಾಷ್ಟ್ರೀಯ ಔಷಧಿ ಮ ಸುಮಾರು ಶೇ.1.9 ಹಣವನ್ನು ೋಧನೆ ಮೇಲೆ ಖರ್ಚು ಮಾಡುತ್ತವೆ. ಇದೇ ಗಳು ತಮ್ಮ ತಾಯ್ನಾಡಿನಲ್ಲಿ ಶೇ.5.7 ನ್ನು ಸಂಶೋಧನೆಯ ಮೇಲೆ ಖರ್ಚು ತ್ತಿವೆ. ಕಾರಣ ಅದು ಅಲ್ಲಿ ಕಡ್ಡಾಯ. ಆದರೆ ಇದೇ ಬಹುರಾಷ್ಟ್ರೀಯ ಕಂಪನಿ ಆದಾಯದ ಸುಮಾರು ಶೇ.20 ಹಣವನ್ನು ಔಷಧಿ ಪ್ರಚಾರಕ್ಕೆ ಖರ್ಚು ಮಾಡುತ್ತದೆ. ಇದು ಸಂಶೋಧನೆ ಮೇಲೆ ಮಾಡುವ ಖರ್ಚಿನ ಹತ್ತುಪಟ್ಟು. ಇಂದು ಭಾರತದ ಔಷಧಿ ವಹಿವಾಟು ಸುಮಾರು 15,000 ಕೋಟಿ ರೂ.ಗಳು ಅಂದರೆ 3000 ಕೋಟಿ ರೂ.ನಷ್ಟು ಔಷಧಿ ಪ್ರಚಾರಕ್ಕೆ ಖರ್ಚಾಗುತ್ತಿದೆ. ಪ್ರತಿಯೊಬ್ಬ ವೈದ್ಯ ಔಷಧಿ ಕಂಪನಿಗಳ ಈ ಪ್ರಚಾರದಲ್ಲಿ ಭಾಗಿಯಾಗಿ ಗಿಫ್ಟ್‌ಗಳನ್ನು ಪಡೆಯುತ್ತಾರೆ. ಈ ಔಷಧಿ ಪ್ರಚಾರ ತಮ್ಮ ಮೇಲೆ ಪ್ರಭಾವ ಬೀರುವುದಿಲ್ಲ ಎಂದು ಹೇಳುತ್ತಾನೆ. ವೈದ್ಯರನ್ನು ಪುಸಲಾಯಿಸಿ ಅನಗತ್ಯ ಔಷಧಿಗಳನ್ನು ಮಾರಲು ಔಷಧಿ ಕಂಪನಿಗಳು ಮುಂದಾಗಿವೆ.

1993 ರಲ್ಲಿ ಮಾರುಕಟ್ಟೆಯಲ್ಲಿ ದೊರಕುವ 100 ಔಷಧಿಗಳಲ್ಲಿ 22 ಔಷಧಿಗಳು ಅನಗತ್ಯ ಔಷಧಿಗಳೆಂದು ವರದಿಯಾಗಿದ್ದವು. ಈ ಔಷಧಿಗಳು ಅನಗತ್ಯ ಎಂದರೆ, ಔಷಧಿ ಪುಸ್ತಕದಲ್ಲಿ ಇರದಂತಹವು. ಈ ಔಷಧಿಗಳ ಮೇಲೆ ಒಟ್ಟು 300 ಕೋಟಿ ರೂ.ಗಳನ್ನು ಜನರು ಖರ್ಚು ಮಾಡಿದ್ದಾರೆ. ಈ 22 ಅನಗತ್ಯ ಔಷಧಿಗಳ ಬದಲು 300 ಅತ್ಯಾಧುನಿಕ ಆರೋಗ್ಯ ಕೇಂದ್ರಗಳನ್ನು ನಿರ್ಮಿಸಬಹುದಾಗಿದ್ದವು.

- ಡಾ|| ಪ್ರಕಾಶ್ ಸಿ.ರಾವ್


ಸರ್ಕಾರಿ ನೌಕರರ ಚಳುವಳಿ ದಮನಕ್ಕೆ ಕರಾಳ ಕಾನೂನು ಜಾರಿ

28 ವರ್ಷಗಳ ಹಿಂದೆ ಹೇರಿದ ತುರ್ತುಪರಿಸ್ಥಿತಿಯ ಕರಾಳ ದಿನಗಳನ್ನು ಮರೆತುಬಿಡಬೇಕೆನ್ನುವಷ್ಟರಲ್ಲಿ ಅದನ್ನು ನೆನಪಿಗೆ ತರುವ ಕರಾಳ ಕಾನೂನನ್ನು ತಮಿಳು ನಾಡು ಜಯಲಲಿತಾ ಸರ್ಕಾರ ಆರಂಭಗೊಳಿಸಿದೆ. ತಮ್ಮ ಬೇಡಿಕೆಗಳಿಗೆ ಒತ್ತಾಯಿಸಿ ಜುಲೈ 2 ರಿಂದ ಮುಷ್ಕರ ಆರಂಭಿಸಿದ ತಮಿಳುನಾಡು ರಾಜ್ಯ ಸರ್ಕಾರಿ ನೌಕರರ ಮುಖಂಡರನ್ನು, ಕಾರ್ಯಕರ್ತರನ್ನು ಬಂಧಿಸಲಾಗಿದೆ.


ಮಾತ್ರವಲ್ಲದೆ, ಮುಷ್ಕರ ನಿರತ ನೌಕರರನ್ನು ಸಾಮೂಹಿಕವಾಗಿ ಕೆಲಸದಿಂದ ತೆಗೆದು ಹಾಕಬಹುದಾದ ಕರಾಳ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ. ನಿರುದ್ಯೋಗಿ ಯುವಕರನ್ನು ಮುಷ್ಕರ ನಿರತರ ವಿರುದ್ಧ ಎತ್ತಿ ಕಟ್ಟುವ ಕಾರ್ಯ ನಡೆಯುತ್ತಿದೆ. ಅವರಿಗೆ ಕೆಲಸ ನೀಡುವ ಭರವಸೆ ನೀಡಲಾಗುತ್ತಿದೆ.

1700 ಕ್ಕೂ ಹೆಚ್ಚು ಬಂಧನ : ಈಗಾಗಲೇ 1700 ಕ್ಕೂ ಹೆಚ್ಚು ಮುಖಂಡರು, ಕಾರ್ಯಕರ್ತರನ್ನು ತಮಿಳುನಾಡು ಅಗತ್ಯ ಸೇವಾ ಕಾಯಿದೆ (TESMA) ಅನ್ವಯ ಬಂಧಿಸಲಾಗಿದ್ದು ಇದರಲ್ಲಿ ಅಖಿಲ ಭಾರತ ಮುಖಂಡ ಎಂ.ಆರ್.ಅಪ್ಪನ್ ಅವರೂ ಸೇರಿದ್ದಾರೆಂದು ವರದಿಯಾಗಿದೆ. ಮುಖ್ಯಮಂತ್ರಿ ಕುಮಾರಿ ಜಯಲಲಿತಾ ಅವರ ಆದೇಶದ ಮೇರೆಗೆ ತಮಿಳುನಾಡು ಪೋಲೀಸರು ಮನೆ ಮನೆಗೆ ತೆರಳಿ ಕುಟುಂಬದವರನ್ನು ಹಿಂಸಿಸಿ, ನೌಕರರನ್ನು ಥಳಿಸಿ ಅರೆಸ್ಟ್ ಮಾಡಲಾಗುತ್ತಿದೆ.

ಈಗ ಹೊರಡಿಸಿರುವ ಸುಗ್ರೀವಾಜ್ಞೆಯ ಪ್ರಕಾರ ಕೆಲಸದಿಂದ ತೆಗೆದುಹಾಕಲು ಯಾವುದೇ ನೋಟೀಸು ನೀಡಬೇಕಾಗಿಲ್ಲ! ಯಾವುದೇ ಕಾರಣಕ್ಕೂ ರಜೆ ಹಾಕಿದರೂ ಕೂಡಾ 'ಮುಷ್ಕರ ನಿರತ' ಎಂದು ಪರಿಗಣಿಸಿ ಕೆಲಸದಿಂದ ಕಿತ್ತೊಗೆಯಬಹುದು. ತಮಿಳು ನಾಡು ಸರ್ಕಾರದ ಸಂವಿಧಾನ ವಿರೋಧಿ, ದಮನಕಾರಿ ನೀತಿಯನ್ನು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಎಲ್ಲಾ ಜನರೂ ಏಕಕಂಠದಿಂದ ಪ್ರತಿಭಟಿಸಬೇಕಾಗಿದೆ.



ಮಲಯಾಳಂ ಸಾಹಿತ್ಯಕ್ಕೆ ವಿಶಿಷ್ಟ ತಿರುವು ನೀಡಿದ ಸಾಹಿತಿ ಎಂ.ಟಿ.ವಾಸುದೇವನ್ ನಾಯರ್. ಜ್ಞಾನಪೀಠ ಪ್ರಶಸ್ತಿ ಗೌರವ ಇವರಿಗೆ ಸಂದಿದೆ. ಕಾದಂಬರಿ, ಕಥೆ, ನಾಟಕ, ಚಲನಚಿತ್ರಕ್ಕೆ ಸಮಾಜದ ನಿಟ್ಟುಸಿರನ್ನು ಎಂ.ಟಿ.ವಿ ಬೆಸುಗೆ ಹಾಕಿದವರು. ಹಸಿದ ಹೊಟ್ಟೆಯ ಸಂಕಟವನ್ನು ಇಲ್ಲಿನ 'ಕರ್ಕಟಕ' ಕಥೆ ಬಿಂಬಿಸುತ್ತದೆ. ಗೋದಾಮುಗಳಲ್ಲಿ ಮಣಗಟ್ಟಲೆ ಧಾನ್ಯ ಕೊಳೆಯುತ್ತಿದ್ದರೂ ಹಸಿದ ಹೊಟ್ಟೆಗಳ ಮೆರವಣಿಗೆಯೇ ನಡೆಯುತ್ತಿರುವ ಈ ಸಂದರ್ಭದಲ್ಲಿ ವಾಸೇದೇವನ್ ತಾವೇ ಅನುಭವಿಸಿದ ಕಥೆಯೊಂದು ಇಲ್ಲಿದೆ. ರೇಷನ್‌ಗಾಗಿ ಬೃಹತ್ ಹೋರಾಟ ಸಂಘಟಿಸಿರುವ ಈ ದಿನದಲ್ಲಿ ಈ ಕಥೆ ನಮ್ಮ ನಿಮ್ಮೆಲ್ಲರ ನೋವನ್ನು ಬಿಂಬಿಸುತ್ತದೆ.



ಎಂ.ಟಿ.ವಾಸುದೇವನ್ ನಾಯರ್

ಕರ್ಕಟಕ

ಕನ್ನಡಕ್ಕೆ
ಡಾ. ಮೋಹನ್ ಕುಂಬಾರ್

ಮಿಥುನ - ಕರ್ಕಟಕ ಕಾಲದ ಮಳೆ ಅಮ್ಮನ ಹಾಗೆ. ನೆನೆಯದೇ ಇರುವಾಗ, ಒಳ್ಳೆಯ ಸಮಯ ಎಂದಾಲೋಚಿಸುತ್ತಿರುವಾಗಲೇ ಅನಿರೀಕ್ಷಿತವಾಗಿ ಸುರಿದುಬಿಡುತ್ತದೆ. ಗುಡುಗು, ಮಳೆ ಆರಂಭವಾದರೆ ಶಾಲೆಗೆ ಹೋಗಿ ಬರುವುದೇ ಕಷ್ಟ. ಅಷ್ಟೇ ಅಲ್ಲ ಹಸಿವು ಬೇರೆ.

ಬೆಳಿಗ್ಗೆ ಗಂಜಿಯುಂಡು ಶಾಲೆಗೆ ಹೋದರೆ ಮತ್ತೆ ಏನನ್ನಾದರೂ ತಿನ್ನುವುದು ಸಂಜೆ ಮನೆಗೆ ಬಂದ ಮೇಲೆಯೇ. ಎಲ್ಲಾ ತಿಂಗಳೂ ಅಪ್ಪನ ಮನಿಯಾರ್ಡರ್ ಬಂದರೆ ಮೂರುನಾಲ್ಕು ದಿವಸ ಎರಡಾಣೆಯಂತೆ ಸಿಗುತ್ತದೆ. ಅದು ಮುಗಿದರೆ ಮಧ್ಯಾಹ್ನ ಏನೂ ಇಲ್ಲ. ಗಂಟೆ ಒಂದು ಹೊಡೆದರೆ ಸಾಕು. ನಮ್ಮಲ್ಲಿ ಹಲವರು ಹೋಟೆಲಿನ ಹಿಂಭಾಗಕ್ಕೆ ಹೋಗಿ ನೀರು ಕುಡಿಯುತ್ತೇವೆ. ಊಟ, ಚಹಾ ಮಾಡಲಾಗದ ಮಕ್ಕಳಿಗಾಗಿ ಮಾರಾರ್ ಅಲ್ಲಿ ದೊಡ್ಡ ಇಡ್ಲಿ ಪಾತ್ರೆಯಲ್ಲಿ ನೀರ ತುಂಬಿಸಿಡುತ್ತಾರೆ. ಕಂಚಿನ ದೊಡ್ಡ ಗ್ಲಾಸು.

ಮಳೆಗಾಲ ಬಂದರೆ ಹಸಿವು ಮಾತ್ರ ಬಾಯಾರಿಕೆಯಿಲ್ಲ.

ನಾಲ್ಕು ಮೈಲು ನಡೆದು ಶಾಲೆಗೆ ತಲುಪುವಷ್ಟರಲ್ಲಿ ಹಸಿವೂ ಆರಂಭವಾಗುತ್ತದೆ. ನಾಲ್ಕನೇ ಪೀರಿಯಡ್ಡಾಗುವಾಗ ಹಸಿವು ಬೆಂಕಿಯಂತೆ ಪ್ರಜ್ವಲಿಸುತ್ತಿರುತ್ತದೆ. ಆ ಹೊತ್ತಿಗೆ ಗೋಡೆಯ ಆಚೆಗಿರುವ ಹೋಟೆಲಿನ ಅಡುಗೆ ಕೋಣೆಯಿಂದ ಕರಿದ ಪರಿಮಳ ಬರುತ್ತದೆ.

ಗಂಟೆ ಬಾರಿಸಿದರೆ ಹೆಚ್ಚಿನವರೂ ಗೋಡೆ ಹಾರಿ ಮಾರಾರರ ಹೋಟೇಲಿಗೆ ಹೋಗುತ್ತಾರೆ. ಕೆಲವರು ಬೆಳಿಗ್ಗೆ ಪಾತ್ರೆಯಲ್ಲಿ ಬುತ್ತಿ ಕೊಂಡೊಯ್ದಿಟ್ಟುಕೊಂಡಿರುತ್ತಾರೆ. ಕೆಲವರು ಹಣಕೊಟ್ಟು ಊಟ ಮಾಡುವವರು. ಶಾಲಾ ಮಕ್ಕಳಿಗೆ ಮಾರಾರರು ರಿಯಾಯಿತಿ ಕೊಡುತ್ತಾರೆ. ಉಳಿದವರಿಗೆ ಆರಾಣೆಯಾದರೆ ಶಾಲಾಮಕ್ಕಳು



ಐದಾಣೆ ಕೊಟ್ಟರೆ ಸಾಕು. ಕಲ್ಲಡತ್ತೂರಿನಿಂದ ಬರುವ ರಂಗ, ಕುಟ್ಟಿಪಾಲದ ಶಿವದಾಸ, ವಿಳಕತ್ರ ಗೋವಿಂದ ಮತ್ತು ನಾನು. ನಾವು ನಾಲ್ವರೂ ನೀರು ಕುಡಿದು ಮಧ್ಯಾಹ್ನ ಕಳೆಯುವವರು. ಓ ಮುಹಮ್ಮದ್, ಪಿ.ಮುಹಮ್ಮದ್ ಸಂತೆ ಬಾಗಿಲ ಹೋಟೆಲಿನಿಂದ ಚಹಾ ಕುಡಿಯುವುದು ಪದ್ಧತಿ.

ಮಧ್ಯಾಹ್ನ ಕಳೆಯುವ ಹೊತ್ತಿಗೆ ಹಸಿವೂ ಸತ್ತುಹೋಗುತ್ತದೆ. ಮತ್ತೆ ಏನೂ ಬೇಕಾಗಿಲ್ಲ. ಹೆಣದಂತೆ ನಾಲ್ಕು ಗಂಟೆಯವರೆಗೆ ಕುಳಿತುಕೊಳ್ಳುವುದು ಕಷ್ಟವಾಗುವುದಿಲ್ಲ. ಅದು ಕಳೆದು ಮನೆಗೆ ವಾಪಾಸಾಗುವಾಗ ಮತ್ತೆ ಹಸಿವೆಯಾಗುತ್ತದೆ. ಆಗ ಮನೆಗೆ ಹೋದರೆ ತಿನ್ನುವುದಕ್ಕೇನಿರಬಹುದು ಎಂದಾಲೋಚಿಸುತ್ತಾ ನಡೆಯುವುದು.

ಗೋವಿಂದ ಮತ್ತು ನಾನು ಜೊತೆಗೆ ವಾಪಾಸಾಗುವವರು. ಮಳೆಗಾಲದಲ್ಲಾದರೆ ಗುಡ್ಡ ಇಳಿಯುವಾಗ ನೆನೆದುಬಿಡುತ್ತೇವೆ. ಹೇಗೆ ಕೊಡೆ ಹಿಡಿದುಕೊಂಡರೂ ಗಾಳಿಯೊಂದಿಗೆ ಮಳೆ ನೀರು ಒಳಗೆ ಬರುತ್ತದೆ. ರಂಗನ ಕೈಯಲ್ಲಿ ಕೆಲವೊಮ್ಮೆ ಒಂದು ಬೀಡಿ ಇರುತ್ತಿತ್ತು. ಚಳಿಯಲ್ಲಿ ಒಮ್ಮೆ ಹೊಗೆ ಎಳೆದುಬಿಡುವುದರ ಸ್ವಾರಸ್ಯವನ್ನು ರಂಗ ವರ್ಣಿಸುವಾಗೆಲ್ಲ ಆಸೆಯಾಗುತ್ತದೆ. ತಪ್ಪು ಕೆಲಸ ಮಾಡಲು ಧೈರ್ಯವಿಲ್ಲ. ಯಾಕೆಂದರೆ ನಾನು ತೆಕ್ಕೇಪಾಟ್ಟು ಅಮ್ಮಾಳು ಅಮ್ಮನ ಮಗ. 'ಶ್ರೀಮಂತಿಕೆಯಿಲ್ಲದಿದ್ದರೂ ಅಮ್ಮನ ಮಕ್ಕಳೆಲ್ಲರದು ಒಳ್ಳೆಯ ನಡತೆ' ಎಂದು ಹೇಳದ ಜನರೇ ಇಲ್ಲ (ಈ ವಿಷಯವನ್ನು ಅಮ್ಮನೇ ಮನೆಯಲ್ಲಿ ಆಗಾಗ ಹೇಳುತ್ತಿರುತ್ತಾರೆ).

ರಂಗ ಬೇರೆ ದಾರಿ ಹಿಡಿದ ಬಳಿಕ ಗೋವಿಂದ ಎರಡು ಮೈಲುಗಳವರೆಗೂ ನನ್ನ ಜೊತೆಗಿರುತ್ತಾನೆ. ಗೋವಿಂದನದು ದಡೂತಿ ದೇಹ. ಪಂಚೆ ಹಾಗೂ ಶರ್ಟು ತೊಡುವನು. ಕೆಲವೇ ಮಂದಿ ಮಾತ್ರ ಚಡ್ಡಿಯಲ್ಲಿ ಬರುವವರು. ಅವರಲ್ಲಿ ನಾನೂ ಒಬ್ಬ.

ಕುಡಕ್ಕಲ್ಲಿನ ಬಳಿಯಿಂದ ಗೋವಿಂದ ಬೇರೆ ದಾರಿ ಹಿಡಿಯುತ್ತಾನೆ. ಮತ್ತೆ ತಾನೊಬ್ಬನೇ ನಡೆಯಬೇಕು. ಆಗ ಅಡುಗೆ ಮನೆಯ ಸಿಕ್ಕದಲ್ಲಿ ಮುಚ್ಚಿಟ್ಟಿರುವ ಗಂಜಿಯನ್ನು ಕುರಿತೇ ಆಲೋಚಿಸಿದರೆ ಸಾಕು. ನಡೆಯ ವೇಗವು ಹೆಚ್ಚುತ್ತದೆ. ಜೊತೆಗೆ ಪಲ್ಯ ಏನಿರಬಹುದು? ಹಲಸೋ? ಬಾಳೆಯೋ? ದರೆಯ ಸಮೀಪದ ಮರದ ಹಲಸಿನ ಕಾಯಿಯಾದರೆ ಬೆಣ್ಣೆಯಂತೆ ಇರುತ್ತದೆ. ಅಷ್ಟು ರುಚಿ.

ಶಾಲೆ ಬಿಟ್ಟರೂ ಬೆಳಿಗ್ಗೆ ಆರಂಭವಾದ ಮಳೆ ಬಿಡಲಿಲ್ಲ. ಒದ್ದೆಯಾದ ಚಡ್ಡಿಯ ಅಂಚನ್ನು ಹಿಂಡಿ ನೀರು ತೆಗೆದು ಅಂದು ಕ್ಲಾಸಿನಲ್ಲಿ ಕುಳಿತುದು. ಮಧ್ಯಾಹ್ನದ ಹೊತ್ತಿಗೆ ಶರ್ಟು, ಚಡ್ಡಿ ಹೆಚ್ಚು ಕಡಿಮೆ ಒಣಗಿತ್ತು. ಹೊಟ್ಟೆ ನೋವಾಗುವಂತೆ ಭಾಸವಾಯಿತು.

ಸಂಜೆಯ ಮಳೆಗೆ ನಡೆಯುವುದು ತ್ರಾಸವೇನಿಲ್ಲ. ನೀರನ್ನು ಮೆಟ್ಟಿ ಚಿಮುಕಿಸಿಕೊಂಡು ಹಾಯಾದ ನಡೆ.

ಎಲ್ಲಾ ಒದ್ದೆಯಾಗಿಯೇ ಮನೆಗೆ ತಲುಪುವುದು. ಕೊಡೆಯನ್ನು ಜಗಲಿಯಲ್ಲಿ ಇಟ್ಟು ಕಪ್ಪು ರಬ್ಬರಿನಲ್ಲಿ ಬಿಗಿದ ಪುಸ್ತಕದ ಗಂಟನ್ನು ಚಾವಡಿಯ ಒರಗು ಮಂಚದಲ್ಲಿಟ್ಟು ಅಭ್ಯಾಸದಂತೆ ಕರೆದೆ.

ಅಮ್ಮಾ....

ಮೀನಾಕ್ಷಕ್ಕನ ದನಿ ಕೇಳಿಸಿತು.

'ಅಮ್ಮ ತೆಕ್ಕೇಲೆಗೆ ಹೋಗಿದ್ದಾರೆ.'

ಸಾಮಾನ್ಯವಾಗಿ ಬಡಿಸುವುದು ಅಮ್ಮ. ಮೀನಾಕ್ಷಕ್ಕ ಬಡಿಸುವುದು ನನಗೆ ಇಷ್ಟವಿಲ್ಲ. ಮೀನಾಕ್ಷಕ್ಕ ನಮ್ಮ ಕುಟುಂಬದ ಹೆಂಗಸು. ಬಹಳ ಸಮಯದಿಂದ ಅಮ್ಮನಿಗೆ ಸಹಾಯ ಮಾಡುವುದಕ್ಕಾಗಿ ಇಲ್ಲಿದ್ದಾಳೆ. ಅದಕ್ಕೆ ಚಿಕ್ಕಮ್ಮನ ವಿರೋಧವಿದೆ. ಅಮ್ಮ ಹೇಳುತ್ತಿರುತ್ತಾರೆ.

'ದಿಕ್ಕಿಲ್ಲದ್ದಕ್ಕಲ್ಲವೇ ಅವಳಿಲ್ಲಿರುವುದು?'

'ಇಲ್ಲಿ ಭತ್ತ, ಹಣ ತುಂಬಿ ತುಳುಕುತ್ತಿದೆಯಲ್ಲ! ಎಂದು ಚಿಕ್ಕಮ್ಮ ವ್ಯಂಗ್ಯವಾಡುವರು'. 'ನಾಲ್ಕು ಜನ ತಿನ್ನುವಷ್ಟು ಆ ಒಂದು ಜಂತುವಿಗೇ ಬೇಕು' ಮೀನಾಕ್ಷಕ್ಕನಿಗೆ ಕೇಳಿಸದಂತೆ ಚಿಕ್ಕಮ್ಮ ಹೇಳುತ್ತಿರುತ್ತಾರೆ. ಮೀನಾಕ್ಷಕ್ಕನನ್ನು ನೋಡಿದರೆ ಹಾಗೆಯೇ ಅನ್ನಿಸುತ್ತದೆ. ಎತ್ತರವಾದ ದಪ್ಪಗಿನ ಹೆಂಗಸು. ಉಬ್ಬಿದ ಹಲ್ಲುಗಳು. ಅವರು ಕುಪ್ಪಸ ತೊಡುವುದಿಲ್ಲ. ಬ್ರಾವನ್ನೂ ಹಾಕುವುದಿಲ್ಲ. ಹೊರಗಡೆ ಹೋಗುವಾಗೆಲ್ಲ ಒಂದು ಬೈರಾಸು ತೆಗೆದು ಹೆಗಲಿಗೆ ಹಾಕಿಕೊಳ್ಳುವರು. ಹತ್ತಿರ ಬಂದರೆ ಯಾವಾಗಲೂ ಮುಚ್ಚಿಕೊಂಡೇ ಇರುವ ಪೂಜೆಯ ಕಿರುಕೋಣೆಯ ಬಾಗಿಲು ತೆರೆದಾಗಿನ ಗಬ್ಬುನಾತ. ಗಂಜಿ ಬಟ್ಟಲು ಇಡುವಾಗೆಲ್ಲ ಮೀನಾಕ್ಷಕ್ಕ ಏನಾದರೂ ಹೇಳುತ್ತಿರುತ್ತಾರೆ. ಆಗೆಲ್ಲಾ ಎಂಜಲು ಸಿಡಿಯುತ್ತದೆಯೆಂಬುದೇ ನನಗೆ ಭಯ. ಅವರು ಬಡಿಸಿದರೆ ಮನಸ್ಸಿಲ್ಲದ ಮನಸ್ಸಿನಿಂದ ಊಟ ಮಾಡಬೇಕಾಗುತ್ತದೆ.

ಶರ್ಟು ಬಿಚ್ಚಿ ತೆಂಕೋಣೆಯಲ್ಲಿ ಕಟ್ಟಿದ ಬಿದಿರಿಗೆ ಸಿಕ್ಕಿಸಿ ತಿರುಗಿದಾಗ ಚಿಕ್ಕಮ್ಮನ ಜಪ ಕೇಳಿಸಿತು. ಚಿಕ್ಕಮ್ಮ ಮಿಂದು 'ಬರುತ್ತಿದ್ದಾರೆ. ಮಳೆಗಾಲವಾದರೂ ಮೂರು ಹೊತ್ತು ಮೀಯುತ್ತಾರೆ. ಆದರೂ ಯಾವಾಗಲೂ ಉರಿ ಉರಿ ಎಂದೇ ಹೇಳುವುದು. ಚಿಕ್ಕಮ್ಮನ ಅ... ಮಾಟ ಮಾಡಿದ್ದರಿಂದ ಈ ... ಹೋಗುವುದಿಲ್ಲವಂತೆ.

ಮೂಡಣ ಕಿಟಕಿಯ ಬಳಿ ತೂಗು ... ಭಸ್ಮದ ಪಾತ್ರೆಯಿಂದ ಭಸ್ಮ ತೆಗೆದು ... ಕೋಣೆಯ ಎದುರು ನಿಂತು ಕೈಮುಗಿದು ... ಬಟ್ಟೆ ಬದಲಿಸಲು ಹೋಗುವಾಗ ನಾನು ಕೇ...

'ಅಮ್ಮ ಎಲ್ಲಿ ಚಿಕ್ಕಮ್ಮ'

'ಎಲ್ಲೊ?'

ಅಡುಗೆ ಕೋಣೆಗೆ ಹೋದಾಗ ಮೀ... ಕುಳಿತು ಬಾಳೆಕಾಯಿ ಹಚ್ಚುತ್ತಿದ್ದರು. ಮಧ್ಯಾ... ಬಾಳೆಕಾಯಿಯೇ ಇದ್ದಿರಬೇಕು. ಬಾಳೇ... ಪಲ್ಯಕ್ಕೆ ನಿರಾರಿಸುವ ಮೊದಲೇ ಹುರಿದು ... ಮಾಡಿದ ಅಕ್ಕಿ ಬೆರೆಸಬೇಕು. ತ... ರುಚಿಗಟ್ಟಾಗಿರುತ್ತಿದೆ.

ಮಣೆಯಿಟ್ಟು ಕುಳಿತು ಸ್ವಲ್ಪ ಸಿಟ್ಟಿನಿಂ... ಹೇಳಿದೆ.

'ಮೀನಾಕ್ಷಕ್ಕ ಗಂಜಿ ಇಕ್ಕ... ಬಾಳೆಕಾಯಿ ಹಚ್ಚುವ... ನಡುವೆ ತಲೆಯೆತ್ತದ... ಮೀನಾಕ್ಷ್ಯಕ್ಕ ಹೇಳಿದರು.

'ಗಂಜಿಯನ್ನಿವತ್ತು ಬೆಕ್ಕು ಪಾ... ಹಾಕಿತು ಮಗುವೆ!'

ಆಗ ದುಃಖವೆನಿಸ... ಅವರನ್ನು ಕೊಂದುಬಿಡುವಷ್ಟು... ಬಂತು. ಎಷ್ಟು ತಾತ್ಸಾರ... ಹೇಳಿದರು. 'ಗಂಜಿಯನ್ನು ಬೆಕ್ಕು ಪಾ... ಕೆಡವಿತಂತೆ'

ಮುಖ ನೋಡದೆ ಮೀನಾಕ್ಷ್ಯಕ್ಕ ಹೇಳ... ಮಗು! ಹೋಗಿ ಮಿಂದು ಬಾ ... ಬಸಿಯುವ ಮೊದಲೇ ಸ್ವಲ್ಪ ತೋಡಿಕೊಡು...

ಕೊಯಿಲಿನ ಸಮಯದಲ್ಲಿ ಮಾತ್ರ ... ಪದ್ಧತಿಯದು. ಅಕ್ಕಿ ಬೇಯುವುದಕ್ಕೆ ಮು... ಬಟ್ಟಲಲ್ಲಿ ತೋಡಿ ತೆಗೆಯುವ... ಅಮಂಗಳಕರವಾದ ಸಂಪ್ರದಾಯವೆಂದು... ಹೇಳುವುದು. ಅದನ್ನು ಚಿಕ್ಕಮ್ಮ ಚಂದ್ರ ... ಕಮಲರಿಗಾಗಿ ಆರಂಭ ಮಾಡಿದ್ದರು. ಬ... ಎಂದು ಕೇಳಿದರೂ ನಾನು ಬೇಕೆಂದು ಹೇಳ...

ಅಮಂಗಳಕರವಾದುದನ್ನು ಉ... ನಡತೆಯುಳ್ಳ ನಾನು ಮಾಡುವುದೇ!

'ಇಬ್ಬರು ಮಕ್ಕಳನ್ನು ನಾನೂ ಬೆಳೆಸಿದ್ದ... ಅರನ್ನು ನೋಡಿ ಕಲಿಯಿರಿ!' ಎಂದು ಹ... ಅಮ್ಮನಿಗೆ ಅವಕಾಶ ಸಿಗಬೇಕಲ್ಲ?

'ಅಮ್ಮ ಎಲ್ಲಿ?' ನಾನು ದನಿಯೇ... ಅಂಡಲೆಯುವುದಕ್ಕೆ ಸಿಕ್ಕಿದ ಸಮ... ಮೀನಾಕ್ಷಕ್ಕನನ್ನು ಬೈಯುವುದು ಸಾಧ್ಯವಿಲ್ಲ... ಬಂದರೆ ಅಮ್ಮನಲ್ಲಾದರೂ ... ಹಿಡಿಯಬಹುದಿತ್ತು.

'ಅಮ್ಮ ಯಾವಾಗ ಬರುತ್ತಾರೆ. ನೀವ... ಹೇಳಿದ್ದನ್ನಾದರೂ ಕೇಳಿಸಿಕೊಳ್ಳುತ್ತಿದ್ದೀರಾ ...

ನಾನು ಅಡುಗೆ ಕೋಣೆಯ ಗೋಡೆಗೆ ಕ... ನಿಂತುಕೊಂಡಿದ್ದಾಗ ಅಜ್ಜಿಯನ್ನು ನೋ... ಒಲೆಯಿಂದ ಆರಿಸಿ ತೆಗೆದ ಮಣ್ಣುಗಟ್ಟಿ... ಭಸ್ಮವನ್ನು ಕಚ್ಚುರಿ ಗೆಡ್ಡೆಯನ್ನು ಸೇರಿಸಿ... ಮಾಡುತ್ತಿದ್ದಳು. ನೆಗಡಿಯಾದಾಗ ಅ... ಪುಡಿಯನ್ನು ನೆತ್ತಿಗೆ ಹಾಕಿ ಎಲ್ಲರಿಂ... ತಿಕ್ಕಿಸಿಕೊಳ್ಳುವಳು.

ಒಲೆಯ ಮುಂದೆ ಬೆಂಕಿ ಉರಿಯು... ಅದನ್ನು ಗಮನೀಯೇ ಇರಬೇಕು ಮೀ... ಹೇಳಿದರು.

'ಅದೇ ಹೇಳುವಾಗೆಲ್ಲ ಮೀನಾಕ್ಷ್ಯಕ್ಕ... ಸರಿಮಾಡುವುದಿಲ್ಲ ಎಂದೇ ಹೇಳುವುದ... ನನ್ನತ್ತ ನೋಡಿದಳು:

(ಮುಂದುವರಿಯು...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH